# ಸಾರ್ವಜನಿಕ ಶಿಕ್ಷಣ ಇಲಾಖೆ, ಕೊಳ್ಳೇಗಾಲ ವಲಯ
# ಸರ್ಕಾರಿ ಪ್ರೌಢ ಶಾಲೆ, ಕೊಳ್ಳೇಗಾಲಟೌನ್

## ಹತ್ತನೆಯ ತರಗತಿ
## ಪ್ರಥಮ ಭಾಷೆ ಕನ್ನಡ

# ಸಿರಿಗನ್ನಡ ಜ್ಯೋತಿ

## ಉತ್ತಮ ಫಲಿತಾಂಶಕ್ಕಾಗಿ ರೂಪಿಸಲಾದ ಕೈಪಿಡಿ

# “ನನ್ನ ಚಿತ್ತ ಶತಕದತ್ತ”

- ಪ್ರಶ್ನೆಪತ್ರಿಕೆ ಅನುಸಾರ ಸಂಭವನೀಯ ಪ್ರಶ್ನೆಗಳು ಉತ್ತರ ಸಹಿತ
- ವ್ಯಾಕರಣಾಂಶಗಳು ಮತ್ತು ವಾಕ್ಯರಚನೆ
- ಮಾದರಿ ವ್ಯಾಕರಣಾಂಶ ಅಭ್ಯಾಸ ಪ್ರಶ್ನೆ ಪತ್ರಿಕೆಗಳು

ಒಂದು ಆದರ್ಶವನ್ನು ಗುರಿಯನ್ನು ಕೈಗೆತ್ತಿಕೊಳ್ಳಿ ಕೇವಲ ಆ ಗುರಿಯ ಬಗ್ಗೆ ಮಾತ್ರ ಯೋಚಿಸಿ, ಚಿಂತಿಸಿ ನಿಮ್ಮ ಬದುಕನ್ನು ಅದಕ್ಕಾಗಿ ಮುಡಿಪಾಗಿಡಿ ಆ ಗುರಿಯು ನಿಮ್ಮ ಬುದ್ದಿಮನಸ್ಸು ಇಂದ್ರಿಯಗಳು ನರನಾಡಿಗಳನ್ನೆಲ್ಲಾ ವ್ಯಾಪಿಸಲಿ ಬೇರೆಲ್ಲಾ ಆಲೋಚನೆಗಳನ್ನು ಬದಿಗಿಡಿ ಇದೇ ಯಶಸ್ಸಿನ ಏಕಮಾತ್ರ ಸೂತ್ರ

ಸ್ವಾಮಿ ವಿವೇಕಾನಂದ


ಮಾರ್ಗದರ್ಶಕರು
ಶ್ರೀ ಕೆ. ಮುದ್ದಣ್ಣ
ಮುಖ್ಯ ಶಿಕ್ಷಕರು

ರೂಪಿಸಿದವರು
ಎಂ. ಶಾಂತರಾಜು(ಮಾಯಾಸುತ)
ಕನ್ನಡ ಭಾಷಾ ಶಿಕ್ಷಕರು
ಜಂಗಮ ವಾಣಿ. 9886897253



ಶುಭಾಶಯ ಕೋರುವವರು

ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಪ್ರೌಢ ಶಾಲಾ ಮುಖ್ಯೋಪಾಧ್ಯಾಯರ ಸಂಘ ಕೊಳ್ಳೇಗಾಲ ವಲಯ. ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಪ್ರೌಢ ಶಾಲಾ ಸಹ ಶಿಕ್ಷಕರ ಸಂಘ ಕೊಳ್ಳೇಗಾಲ ವಲಯ.ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಅನುದಾನಿತ ಶಾಲಾ ಕಾಲೇಜು ನೌಕರರ ಸಂಘ ಕೊಳ್ಳೇಗಾಲ ವಲಯ.

# ಮುನ್ನುಡಿ



ವಿದ್ಯಾರ್ಥಿ ಜೀವನದಲ್ಲಿ ಹತ್ತನೆಯ ತರಗತಿಯ ಪರೀಕ್ಷೆ ಒಂದು ಕಾಲಘಟ್ಟ. ಈ ಪರೀಕ್ಷೆಯ ಯಶಸ್ಸಿನಿಂದ ಜೀವನದ ಪಥವೇ ಬದಲಾಗುತ್ತದೆ. ಈ ಹಿನ್ನಲೆಯಲ್ಲಿ ಹತ್ತನೇ ತರಗತಿಯ ಕನ್ನಡ ವಿಷಯದಲ್ಲಿ ಉತ್ತಮ ಫಲಿತಾಂಶ ಹಾಗೂ ಉತ್ತಮ ಅಂಕ ಪಡೆಯಲು ಅನುಕೂಲವಾಗುವಂತೆ **ಶ್ರೀ ಎಂ. ಶಾಂತರಾಜು**, ಕನ್ನಡ ಭಾಷಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಕೊಳ್ಳೇಗಾಲ ಟೌನ್. ಇವರು ಹತ್ತನೇ ತರಗತಿ ವಿದ್ಯಾರ್ಥಿಗಳ ಫಲಿತಾಂಶವನ್ನು ಉತ್ತಮಪಡಿಸುವ ನಿಟ್ಟಿನಲ್ಲಿ ಕಳೆದ ವರ್ಷ **ಟಾರ್ಗೆಟ್ 80+** ಅನ್ನು ಪ್ರಕಟಿಸಿರುತ್ತಾರೆ. ಇದರಿಂದ ಕಳೆದ ವರ್ಷದ ವಿದ್ಯಾರ್ಥಿಗಳು ಪ್ರಥಮ ಭಾಷಾ ಕನ್ನಡ ವಿಷಯದಲ್ಲಿ ಹೆಚ್ಚು ಅಂಕಗಳನ್ನು ಪಡೆಯುವಲ್ಲಿ ಯಶಸ್ವಿಯಾಗಿದ್ದರು. ಅದರಂತೆಯೇ ಈ ವರ್ಷವೂ ಕೂಡ **'ನನ್ನ ಚಿತ್ತ ಶತಕದತ್ತ'** ಶೀರ್ಷಿಕೆಯಡಿ ಪ್ರಕಟಿಸುತ್ತಿರುವ **ಟಾರ್ಗೆಟ್ 80+** ಕೈಪಿಡಿಯು ಪ್ರಗತಿ ಪ್ರಕಾಶ, ಪ್ರಜ್ವಲ ಮೂರೂ ವಿಭಾಗದ ಮಕ್ಕಳಿಗೂ ಅತ್ಯಂತ ಸಹಕಾರಿಯಾಗಿದೆ. ಅಲ್ಲದೇ ನಮ್ಮ ಶೈಕ್ಷಣಿಕ ವಲಯದಲ್ಲಿ ಈಗಾಗಲೇ ಪ್ರಕಟಿಸಿರುವ **'ಸ್ಫೂರ್ತಿ ಸಂಜೀವಿನಿ'ಯ** ಮುಂದುವರಿದ ಭಾಗವಾಗಿದೆ. ಅತ್ಯಂತ ಕಡಿಮೆ ಅವಧಿಯಲ್ಲಿ ಹೆಚ್ಚು ಹೆಚ್ಚು ಅಂಕಗಳನ್ನು ಗಳಿಸಲು ನೆರವಾಗುತ್ತದೆ. ಅಲ್ಲದೇ ಈ ಕೈಪಿಡಿಯಲ್ಲಿ ಕನ್ನಡ ಭಾಷಾ ವ್ಯಾಕಾರಣಾಂಶಗಳ ವಿವರಗಳಿದ್ದು, ಇದು ಹತ್ತನೆಯ ತರಗತಿ ವಿದ್ಯಾರ್ಥಿಗಳಿಗೆ ಮಾತ್ರವಲ್ಲದೇ ಉನ್ನತ ವ್ಯಾಸಂಗ ಹಾಗೂ ಹಲವಾರು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ನೆರವಾಗುತ್ತದೆ. ಈ ಪ್ರಯತ್ನ ನಿಜಕ್ಕೂ ಅತ್ಯಂತ ಶ್ಲಾಘನೀಯವಾಗಿದೆ.

ಬದಲಾದ ಪಠ್ಯಕ್ರಮ ಪರೀಕ್ಷಾ ಪದ್ಧತಿಗೆ ನೀಲನಕ್ಷೆ ಹಾಗೂ ಪ್ರತಿ ಘಟಕಗಳಿಗೆ ನಿಗದಿಪಡಿಸಿರುವ ಅಂಕಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ರೂಪಿಸಿರುವ ಈ ಕೈಪಿಡಿಯನ್ನು ವಿದ್ಯಾರ್ಥಿಗಳು ಸದುಪಯೋಗ ಪಡಿಸಿಕೊಂಡು ಅತಿ ಹೆಚ್ಚು ಅಂಕಗಳಿಸಿ ಯಶಸ್ವಿಯಾಗಲೆಂದು ಆಶಿಸುತ್ತೇನೆ.

ಶುಭ ಹಾರೈಕೆಯೊಂದಿಗೆ

ಸ್ಥಳ : ಕೊಳ್ಳೇಗಾಲ
ದಿನಾಂಕ : 4–1–2016

ಶ್ರೀಮತಿ ಮಹಾದೇವಮ್ಮ
ಕ್ಷೇತ್ರ ಶಿಕ್ಷಣಾಧಿಕಾರಿಗಳು
ಕೊಳ್ಳೇಗಾಲ ವಲಯ

# ಪಠ್ಯ ಪ್ರಧಾನ ಅಧ್ಯಯನ
# ಪಠ್ಯಾನುಕ್ರಮಣಿಕೆ

| ಕ್ರಮ ಸಂಖ್ಯೆ | ಗದ್ಯಭಾಗ | ಕವಿಗಳು/ಲೇಖಕರು | ನಿಗದಿ ಪಡಿಸಿದ ಅಂಕಗಳು |
|---|---|---|---|
| 01 | ಶಬರಿ | ಪು.ತಿ.ನರಸಿಂಹಾಚಾರ್ | 4 |
| 02 | ಅಮೇರಿಕಾದಲ್ಲಿ ಗೊರೂರು | ಗೊರೂರು ರಾಮಸ್ವಾಮಿ ಅಯ್ಯಂಗಾರ್ | 4 |
| 03 | ಜೀವನದೃಷ್ಟಿ | ವಿ.ಕೃ.ಗೋಕಾಕ್ | 3 |
| 04 | ಧರ್ಮ ಸಮದೃಷ್ಟಿ | ಶಾಸನ (ಸಂಗ್ರಹ) | 3 |
| 05 | ಭಾಗ್ಯಶಿಲ್ಪಿ ಸರ್ ಎಂ.ವಿಶ್ವೇಶ್ವರಯ್ಯ | ಡಿ.ಎಸ್. ಜಯಪ್ಪಗೌಡ | 3 |
| 06 | ಎದೆಗೆ ಬಿದ್ದ ಅಕ್ಷರ | ದೇವನೂರು ಮಹಾದೇವ | 3 |
| 07 | ವೃಕ್ಷಸಾಕ್ಷಿ | ದುರ್ಗಸಿಂಹ | 3 |
| 08 | ವ್ಯಾಘ್ರಗೀತೆ | ಎ.ಎನ್.ಮೂರ್ತಿರಾವ್ | 3 |
| | | ಒಟ್ಟು | 26 |
| **ಪದ್ಯಭಾಗ** | | | |
| 01 | ಎಮ್ಮನುಡಿಗೇಳ್ | ಆದಿಕವಿ ಪಂಪ | 4 |
| 02 | ಹಕ್ಕಿಹಾರಿತಿದೆ ನೋಡಿದಿರಾ | ದ.ರಾ.ಬೇಂದ್ರೆ | 4 |
| 03 | ಹಲಗಲಿ ಬೇಡರು | ಜಾನಪದ(ಸಂಗ್ರಹ) | 3 |
| 04 | ವಚನ ಸೌರಭ | ಜೇಡರದಾಸಿಮಯ್ಯ, ಬಸವಣ್ಣ | 3 |
| 05 | ಸಂಕಲ್ಪ ಗೀತೆ | ಜಿ.ಎಸ್.ಶಿವರುದ್ರಪ್ಪ | 4 |
| 06 | ಕೌರವೇಂದ್ರನ ಕೊಂದೆ ನೀನು | ಕುಮಾರವ್ಯಾಸ | 4 |
| 07 | ವೀರಲವ | ಲಕ್ಷ್ಮೀಶ | 3 |
| 08 | ಸಾರ್ಥಕತೆ | ದು.ಸರಸ್ವತಿ  ಇಂದೂಮತಿ ಲಮಾಣಿ | 3 |
| | | ಒಟ್ಟು | 28 |
| **ಪಠ್ಯ ಪೋಷಕ ಅಧ್ಯಯನ** | | | |
| 01 | ವಿಜ್ಞಾನ ಮತ್ತು ಸಮಾಜ | ಎಚ್.ನರಸಿಂಹಯ್ಯ | 2 |
| 02 | ನಾಮಫಲಕ | ನಿರ್ಮಲ | 2 |
| 03 | ಉದಾತ್ತ ಚಿಂತನೆಗಳು | ಸಂಗ್ರಹ | 2 |
| 04 | ಪಾರಿವಾಳ | ಸು.ರಂ.ಎಕ್ಕುಂಡಿ | 1 |
| 05 | ಜನಪದ ಒಗಟುಗಳು | ಸಂಗ್ರಹ | 2 |
| | ಪಠ್ಯಾಧಾರಿತ ಪದಕೋಶ | ಒಟ್ಟು | 9 |
| | | ಅಪ್ರಕಟಿತ ಗದ್ಯ | 4 |
| | | ಒಟ್ಟಾರೆ | 67 |

## 6. ಪ್ರಶ್ನೆ ಪತ್ರಿಕೆ ಅಂಕ ವಿತರಣೆ :

ಗದ್ಯ : 26, ಪದ್ಯ : 28, ಪಠ್ಯ ಪೋಷಕ ಅಧ್ಯಯನ : 09,

ವ್ಯಾಕರಣ, ಅಲಂಕಾರ, ಛಂದಸ್ಸು ಮತ್ತು ವಾಕ್ಯರಚನೆ : 33

ಒಟ್ಟು : 100 ಅವಧಿ : 3 ಗಂಟೆಗಳು

| ಪ್ರಶ್ನೆಗಳ ಸ್ವರೂಪ | ಗದ್ಯ | ಪದ್ಯ | ಅಪಠಿತ ಗದ್ಯ | ಪೋಷಕ ಅಧ್ಯಯನ | ವ್ಯಾಕರಣ | ವಾಕ್ಯರಚನೆ | ಒಟ್ಟು |
|---|---|---|---|---|---|---|---|
| 1. ಬಹು ಆಯ್ಕೆ | – | – | – | – | 10*1=10 | – | 10 |
| 2. ಸಂಬಂಧೀಕರಿಸಿ ಬರೆಯುವುದು | – | – | – | – | 4*1=4 | – | 04 |
| 3. ಒಂದು ವಾಕ್ಯದ ಉತ್ತರಗಳು | 5*1=05 | 3*1=03 | – | 1*1=1 | – | – | 09 |
| 4. ಮೂರು ನಾಲ್ಕು ವಾಕ್ಯಗಳ ಉತ್ತರಗಳು | 4*2=8 | 2*2=4 | – | 4*2=08 | – | – | 20 |
| 5. ಐದಾರು ವಾಕ್ಯಗಳ ಉತ್ತರಗಳು – ಸಂದರ್ಭಗಳು | 2*3=06 | 2*3=06 | – | – | – | – | 12 |
| 6. ಕವಿ ಕೃತಿ ಪರಿಚಯ | 1*3=3 | 1*3=3 | – | – | – | – | 06 |
| 7. ಛಂದಸ್ಸು | – | – | – | – | 1*3=03 | – | 03 |
| 8. ಅಲಂಕಾರ | | – | – | – | 1*3=03 | – | 03 |
| 9. ಗಾದೆಗಳು | | | – | | | 1*3=3 | 03 |
| 10. ಕಂಠಪಾಠ | – | 1*4=04 | – | – | – | – | 04 |
| 11. ಪದ್ಯವನ್ನು ಓದಿ ಅರ್ಥೈಸಿಕೊಂಡು, ಅಡಕಗೊಂಡ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು | – | 1*4=04 | – | – | – | – | 04 |
| 12. ಎಂಟು/ಹತ್ತು ವಾಕ್ಯಗಳ ಉತ್ತರಗಳು | 1*4=04 | 1*4=04 | – | – | – | – | 08 |
| 13. ಅಪಠಿತ ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು. | – | – | 1*4=4 | – | – | – | 04 |
| 14. ಪತ್ರ ಲೇಖನ | – | – | – | – | – | 1*5=05 | 05 |
| 15. ಪ್ರಬಂಧ ರಚನೆ | – | – | – | – | – | 1*5=05 | 05 |
| ಒಟ್ಟು | 26 | 28 | 04 | 09 | 20 | 13 | 100 |

# ಪ್ರಶ್ನಾಕೋಠಿ ಮತ್ತು ಉತ್ತರಗಳು

## ಒಂದು ಅಂಕದ ಪ್ರಶ್ನೆಗಳು

1. ಶ್ರೀ ರಾಮನಿಗೆ ಸಮರ್ಪಿಸಲು ಶಬರಿ ಏನನ್ನು ಸಂಗ್ರಹಿಸಿದ್ದಳು?
ಶ್ರೀ ರಾಮನಿಗೆ ಸಮರ್ಪಿಸಲು ಶಬರಿ ಹೂ, ಹಣ್ಣು, ಹಂಪಲು ಮುಂತಾದವುಗಳನ್ನು ಸಂಗ್ರಹಿಸಿದ್ದಳು.

2. ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು?
ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಶಬರಿ.

3. ರಾಮಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ಯಾರು?
ಧನು ಎಂಬ ಋಷಿ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದರು.

4. ಪಾಶ್ಚಾತ್ಯರಲ್ಲಿ ಮಕ್ಕಳಾದಿಯಾಗಿ ಎಲ್ಲರೂ ತಿಳಿದು ಕೊಂಡಿರುವ ಅಂಶಗಳು?
ಯಾಂತ್ರೀಕರಣ, ವಿದ್ಯುದೀಕರಣ, ಅಣುಶಕ್ತಿ, ಔದ್ಯೋಗಿಕರಣ.

5. ಅಮೇರಿಕಾದ ಕೆನಡಾಗಳಲ್ಲಿ ಬೆಂಕಿಯ ಅಪಾಯ ಹೆಚ್ಚು ಏಕೆ?
ಅಮೇರಿಕಾದ ಕೆನಡಾಗಳಲ್ಲಿ ಮನೆಗಳನ್ನು ಸಾಧಾರಿತವಾಗಿ ಮರದಿಂದಲೇ ಕಟ್ಟಿರುತ್ತಾರೆ. ಆದ್ದರಿಂದ ಅಮೇರಿಕಾ ಕೆನಡಾಗಳಲ್ಲಿ ಬೆಂಕಿಯ ಅಪಾಯ ಹೆಚ್ಚು.

6. ಅಮೇರಿಕಾದ ವಿದ್ಯಾರ್ಥಿಗಳನ್ನು ರಂಜಿಸಿದ ಕನ್ನಡ ಸಾಹಿತ್ಯದ ಭಾಗಗಳು ಯಾವುವು?
ಕನ್ನಡನಾಡಿನ ಅನೇಕ ಜಾನಪದ ಹಾಸ್ಯ ಕಥೆಗಳು, ಗಾದೆಗಳು & ಪಂಚತಂತ್ರದ ಕಥೆಗಳೆಲ್ಲ ಅಮೇರಿಕಾದ ವಿದ್ಯಾರ್ಥಿಗಳನ್ನು ರಂಜಿಸಿದ ಕನ್ನಡ ಸಾಹಿತ್ಯ ಭಾಗಗಳು.

7. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಸ್ಕೂಲಿನತ್ತ ಹೆಜ್ಜೆ ಹಾಕಲು ಕಾರಣವೇನು ?
ಯಾರಾದರೊಬ್ಬ ಹುಡುಗನನ್ನೋ ಮೇಷ್ಟ್ರನ್ನೋ ಕರೆದುಕೊಂಡು ಬರಲು ಸ್ಕೂಲಿನತ್ತ ಹೆಜ್ಜೆ ಹಾಕಿದರು.

8. ಶಾಲೆಗೆ ಹೋದ ಕೆಲಸದ ಬಗ್ಗೆ ಗೊರೊರಿಗೆ ಯಾವಾಗ ಜ್ಞಾನೋಧಯವಾಯಿತು?

ಗೊರೂರ ಹೆಂಡತಿ ಶಾಲೆಗೆ ಬಂದು "ಚೆನ್ನಾಯ್ತು" ಹೀಗೆ ಬಂದ ಕೆಲಸವನ್ನು ಬಿಟ್ಟು ಮಾತಾಡುತ್ತ ಕುಳಿತುಬಿಟ್ಟರೆ ಮನೆ ಉರಿದು ಹೋಗುತ್ತೆ. ಎಂದಾಗ ಗೊರೂರಿಗೆ ಜ್ಞಾನೋದಯವಾಯಿತು.

9. ಧರ್ಮಗಳು ಹಾಕಿ ಕೊಟ್ಟಿರುವ ರತ್ನ ಪಾಠ ಏನು?
ಸಾಧಕನಿಗೆ ಅಂತರ್‌ಜೀವಿಗೆ ಯಾವ ತೊಂದರೆಯೂ ಆಗಬಾರದೆಂದು ಸಮಾಜವೇ ಆತನನ್ನು ನೋಡಿಕೊಳ್ಳಬೇಕೆಂಬುದು ಧರ್ಮಗಳು ಹಾಕಿ ಕೊಟ್ಟ ರತ್ನ ಪಾಠವಾಗಿದೆ.

10. ಗೃಹಸ್ಥಾಶ್ರಮವು ಧನ್ಯ ಎಂದು ಹೇಳಿದವರು ಯಾರು?
ಗೃಹಸ್ಥಾಶ್ರಮವು ಧನ್ಯವೆಂದು ಕಾಳಿದಾಸನು ಕಲ್ಪಿಸದ ಒಬ್ಬ ಋಷಿ ಅರಣ್ಯಕನು ಹೇಳಿದನು.

11. ಅಂತರ್ಜೀವಿಯ ಶಕ್ತಿ ಹೇಗೆ ವೆಚ್ಚವಾಗುತ್ತಿರುತ್ತದೆ?
ಅಂತರ್‌ಜೀವಿಯ ಶಕ್ತಿಯು ತನ್ನ ಮನದ ಮೊಗಸಾಲೆಯನ್ನು ಓರಣವಾಗಿಸುವುದರಲ್ಲೇ ಅವನ ಶಕ್ತಿ ವೆಚ್ಚವಾಗುತ್ತದೆ.

12. ಅಂತರ್ ಜೀವಿಗೆ ಯಾವುದು ದೊಡ್ಡ ಸಮಸ್ಯೆಯಾಗುತ್ತದೆ.?
ಅಂತರ್ ಜೀವಿಗೆ ಉಳಿದವರ ಯೋಗಕ್ಷೇಮವನ್ನು ನೋಡಿಕೊಳ್ಳುವುದು ಒಂದು ದೊಡ್ಡ ಸಮಸ್ಯೆಯಾಗಿದೆ.

13. ಬುಕ್ಕರಾಯನ ಹಿರಿಮೆ ಏನು?
ವೀರ ಬುಕ್ಕರಾಯನ ಶ್ರೀಮನ್ಮಹಾಮಂಡಳೇಶ್ವರ ಶತ್ರುರಾಜರಿಗೆ ರಾಜ ಕೊಟ್ಟ ಭಾಷೆಗೆ ತಪ್ಪಿ ನಡೆಯುವ ರಾಜರಿಗೆ ಗಂಡನಿದ್ದಂತೆ ಇದು ಬುಕ್ಕರಾಯನ ಹಿರಿಮೆ.

14. ಬುಕ್ಕರಾಯನ ರಾಜ್ಯ ಭಾರ ಕಾಲದಲ್ಲಿ ಯಾರೊಳಗೆ ಸಂವಾದ ನಡೆಯಿತು?

ಬುಕ್ಕರಾಯನ ರಾಜ್ಯಭಾರ ಕಾಲದಲ್ಲಿ ವೈಷ್ಣವ ಭಕ್ತರಿಗೂ, ಜೈನಧರ್ಮೀಯರಿಗೂ ಸಂವಾದ ನಡೆಯಿತು.

15. ರಾಯನು ವಿಧಿಸಿ ಕಟ್ಟಲೆಯನ್ನು ಮೀರಿದರೆ ಆಗುವ ಪರಿಣಾಮವೇನು ?
ರಾಯನು ವಿಧಿಸಿದ ಕಟ್ಟಲೆಯನ್ನು ನಿಯಮವನ್ನು ಮೀರಿದರೆ ಅವನು ರಾಜದ್ರೋಹಿ ಎನಿಸಿಕೊಳ್ಳುತ್ತಾನೆ.

16. ನಾಡ ಭವ್ಯ ಜನರು ಬುಕ್ಕರಾಯನ ಬಳಿ ಏನೆಂದು ಭಿನ್ನಹ ಮಾಡಿದರು. ?
ನಾಡ ಜನರು ಬುಕ್ಕರಾಯನ ಬಳಿ ಬಂದು ವೈಷ್ಣವ ಭಕ್ತರು ಮಾಡುವ ಅನ್ಯಾಯಗಳನ್ನು ಭಿನ್ನಹ ಮಾಡಿದರು.

17. ವಿಶ್ವೇಶ್ವರಯ್ಯನವರ ಪೂರ್ವಜರು ಎಲ್ಲಿಯವರು ?
ವಿಶ್ವೇಶ್ವರಯ್ಯನವರ ಪೂರ್ವಜರು ಮೂಲತಃ ಆಂದ್ರ ಪ್ರದೇಶದ ಕರ್ನೂಲುಜಿಲ್ಲೆ ಗಿಡ್ಡಲೂರು ತಾಲ್ಲೂಕಿನ ಮೋಕ್ಷಗೊಂಡಂ ಅಗ್ರಹಾರಕ್ಕೆ ಸೇರಿದವರು.

18. ಬ್ರಿಟೀಷ್ ಸರ್ಕಾರ ವಿಶ್ವೇಶ್ವರಯ್ಯ ರವರಿಗೆ ಯಾವ ಪದವಿ ನೀಡಿತು ?

ಬ್ರಿಟೀಷ್ ಸರ್ಕಾರ ವಿಶ್ವೇಶ್ವರಯ್ಯ ರವರಿಗೆ 'ಸರ್' ಪದವಿ ನೀಡಿ ಗೌರವಿಸಿತು.

19. ವಿಶ್ವೇಶ್ವರಯ್ಯ ಅವರನ್ನು ದಿವಾನರಾಗಿ ನೇಮಿಸಿದವರು ಯಾರು ?
ವಿಶ್ವೇಶ್ವರಯ್ಯ ಅವರನ್ನು ದಿವಾನರಾಗಿ ನೇಮಿಸಿದವರು ನಾಲ್ವಡಿ ಕೃಷ್ಣರಾಜ ಒಡೆಯರು.

20. ವಿಶ್ವೇಶ್ವರಯ್ಯ ಅವರ ಹುಟ್ಟುಹಬ್ಬದ ನೆನಪಿಗಾಗಿ ಯಾವ ದಿನಾಚರಣೆಯನ್ನು ಮಾಡಲಾಗುತ್ತಿದೆ. ?
ವಿಶ್ವೇಶ್ವರಯ್ಯ ಅವರ ಹುಟ್ಟುಹಬ್ಬದ ನೆನಪಿಗಾಗಿ ಇಂಜಿನಿಯರ್ಸ್ ದಿನಾಚರಣೆಯನ್ನು ಮಾಡಲಾಗುತ್ತಿದೆ

21. ಮನೆ ಮಂಚಮ್ಮ ಯಾರು ?
ಕವಿ ಸಿದ್ದಲಿಂಗಯ್ಯನವರು ಹೇಳಿದ ಕಥೆಯಲ್ಲಿ ಬರುವ ಒಬ್ಬ ಗ್ರಾಮದೇವತೆ.

22. ಮನೆ ಮಂಚಮ್ಮ ಕಥೆ ಹೇಳಿದ ಕವಿ ಯಾರು ?
ಮನೆ ಮಂಚಮ್ಮನ ಕಥೆ ಹೇಳಿದ ಕವಿ ಸಿದ್ದಲಿಂಗಯ್ಯನವರು.

23. ದೇವನೂರರ ನನ್ನ ದೇವರು ಯಾರೆಂಬುದನ್ನು ಸ್ಪಷ್ಟೀಕರಿಸಿದೆ. ?
ಚಾವಣಿ ಇಲ್ಲದ ಗುಡಿಯಲ್ಲಿ ಕಾರುಣ್ಯ, ಸಾಮತೆ, ಅಹಿಂಸೆಯ, ಬುದ್ಧನೇ, ದೇವನೂರರ ನನ್ನ ದೇವರು.

24. ವೃಕ್ಷಸಾಕ್ಷಿ ಕಥೆಯನ್ನು ಯಾವ ಕೃತಿಯಿಂದ ಆರಿಸಲಾಗಿದೆ.
ವೃಕ್ಷಸಾಕ್ಷಿ ಕತೆಯನ್ನು ಕನ್ನಡ ಪಂಚತಂತ್ರ ಎಂಬ ಚಂಪೂ ಕೃತಿಯಿಂದ ಆರಿಸಲಾಗಿದೆ.

25. ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಯಾವ ಆರೋಪವನ್ನು ಹೊರಿಸಿದನು ?
ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಕಳ್ಳತನದ ಆರೋಪವನ್ನು ಹೊರಿಸಿದನು.

26. ಧರ್ಮಾಧಿಕರಣರು ಏಕೆ ವಿಸ್ಮಯ ಹೊಂದಿದರು ?
ಧರ್ಮಬುದ್ಧಿಯೇ ಧನವನ್ನು ಕದ್ದಿರುವನೆಂದು ವೃಕ್ಷವು ನುಡಿದುದನ್ನು ಕೇಳಿ ಧರ್ಮಾಧೀಕರಣರು ವಿಸ್ಮಯ ಹೊಂದಿದರು.

27. ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತನ್ನು ಹೇಗೆ ಕಳೆದನು ?
ಬೆಳಗಿನ ಹೊತ್ತನ್ನು ಧರ್ಮಬುದ್ಧಿಯು ದೇವ, ಗುರು, ದ್ವಿಜ ಪೂಜೆಗಳನ್ನು ಮಾಡುತ್ತಾ ಕಳೆದನು.

28. ಧರ್ಮಾಧೀಕರಣರು ವಟವೃಕ್ಷದ ಸಮೀಪಕ್ಕೆ ಏಕೆ ಬಂದರು ?
ಧರ್ಮಬುದ್ಧಿ ಮತ್ತು ದುಷ್ಠಬುದ್ದಿಯರ ನಡುವಿನ ಜಗಳವನ್ನು ಬಗೆಹರಿಸಲು ವಟವೃಕ್ಷದ ಸಾಕ್ಷಿ ಕೇಳಲು ಬಂದರು.

29. ಹುಲಿಗೆ ಪರಮಾನಂದವಾಗಲು ಕಾರಣವೇನು ?
ಶಾನುಬೋಗರ ದುಂಡುದುಂಡಾದ ಶರೀರವನ್ನು ನೋಡಿ ಹುಲಿಗೆ ಪರಮಾನಂದವಾಯಿತು

30. ಶಾನುಭೋಗನ ಬ್ರಹ್ಮಾಸ್ತ್ರ ಯಾವುದು ?
ಶಾನುಭೋಗನ ಬ್ರಹ್ಮಾಸ್ತ್ರ ಖಿರ್ದಿ ಪುಸ್ತಕ.

31. ಭಗವದ್ಗೀತೆಯನ್ನು ರಚಿಸಿದವರು ಯಾರು?
ಭಗವದ್ಗೀತೆಯನ್ನು ರಚಿಸಿದವರು ವೇದ ವ್ಯಾಸರು.

32. ಭೀಮನಿಗೆ ಪವನನಂದನೆಂದು ಹೆಸರು ಬರಲು ಕಾರಣವೇನು?
ಪವನನೆಂದರೆ ವಾಯು, ನಂದನೆಂದರೆ ಮಗ ಭೀಮನು ವಾಯುವಿನ ಮಗನಾದ್ದರಿಂದ ಪವನನಂದನ ಎಂದು ಹೆಸರು ಬಂದಿತು.

33. ಘಟಸಂಭೂತ ಯಾರು?
ಘಟಸಂಭೂತ ದ್ರೋಣಾಚಾರ್ಯರು.

34. ಗಾಂಢೀವಿ ಎಂದು ಅರ್ಜುನನ್ನು ಏಕೆ ಕರೆಯಲಾಗುತ್ತದೆ. ?
ಗಾಂಢೀವ ಎಂಬ ಬಿಲ್ಲನ್ನು ಹೊಂದಿರುವುದರಿಂದ ಅರ್ಜುನನ್ನು ಗಾಂಢೀವಿ ಎಂದು ಕರೆಯಲಾಗುತ್ತದೆ.

35. ಹಕ್ಕಿಯ ಕಣ್ಣುಗಳು ಯಾವುವು ?
ಸೂರ್ಯ ಮತ್ತು ಚಂದ್ರರು ಹಕ್ಕಿಯ ಕಣ್ಣುಗಳು.

36. ಹಕ್ಕಿಯು ಯಾವುದರ ಸಂಕೇತವಾಗಿದೆ. ?
ಹಕ್ಕಿಯು ಯುಗಗಳೇ ಉರುಳಿ ಹೊಸತನಕ್ಕೆ ತೆರೆದುಕೊಳ್ಳುವ ಕಾಲದ ಸಂಕೇತವಾಗಿದೆ.

37. ಹಲಗಲಿಯ ನಾಲ್ವರು ಪ್ರಮುಖರು ಯಾರು?
ಬಾಲ, ರಾಮ, ಹನುಮ, ಜಡಗ

38. ಕುಂಪಣಿ ಸರಕಾರ ಹೊರಡಿಸಿದ ಆದೇಶ ಏನು?
ಸರಕಾರದ ಅನುಮತಿಯಿರದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ ಮತ್ತು ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸುವುದು.

39. ಶಿವನಿಗೆ ಯಾರ ಭಕ್ತಿ ಹಿತವೆನಿಸುತ್ತದೆ ?
ಮನಃ ಪೂರ್ವಕವಾಗಿ ಸತಿ–ಪತಿಗಳು ಒಂದಾಗಿ ಪೂಜಿಸುವ ಭಕ್ತಿ ಶಿವನಿಗೆ ಹಿತವೆನಿಸುತ್ತಿದೆ.

40. ನಿಷ್ಠೆಯುಳ್ಳ ಭಕ್ತನಿಗೆ ಯಾವುದು ನಟ್ಟನಡವಿಯು ಸಹ ಏನನಿಸುತ್ತದೆ ?
ನಿಷ್ಠೆಯುಳ್ಳ ಭಕ್ತನಿಗೆ ನಟ್ಟಡವಿಯು ಸಹ ಪಟ್ಟಣ ಎನಿಸುತ್ತದೆ.

41. ಕೂಡಲ ಸಂಗಮದೇವ ಯಾವಾಗ ಒಲಿಯುವುದಿಲ್ಲ.?
ನುಡಿದಂತೆ ನಡೆಯದಿದ್ದರೆ ಕೂಡಲ ಸಂಗಮದೇವ ಒಲಿಯುವುದಿಲ್ಲ.

42. ವಚನಕಾರರು ಯಾವುದನ್ನು ಮರನನೇರಿದ ಮರ್ಕಟವೆಂದಿದ್ದಾರೆ ?
ವಚನಕಾರರು ಮನಸ್ಸನ್ನು ಮರನನೇರಿದ ಮರ್ಕಟವೆಂದಿದ್ದಾರೆ.

43. ಯಾವುದನ್ನು ಎಚ್ಚರದಲ್ಲಿ ಮುನ್ನಡೆಸಬೇಕು. ?
ಬಿರುಗಾಳಿಗೆ ಹೊಯ್ದಾಡುವ ಹಡಗನ್ನು ಎಚ್ಚರದಲ್ಲಿ ಮುನ್ನೆಡಸಬೇಕು.

44. ನದಿ ಜಲಗಳು ಏನಾಗಿದೆ ?
ನದೀ ಜಲಗಳು ಕಲುಷಿತವಾಗಿದೆ.

45. ಮಾನವನ ಸ್ವಭಾವವನ್ನು ವಚನಕಾರರು ಯಾವುದಕ್ಕೆ ಹೋಲಿಸಿದ್ದಾರೆ?
ಮಾನವನ ಸ್ವಭಾವವನ್ನು ವಚನಕಾರರು ಪಲ್ಲಕ್ಕಿಯನ್ನೇರಿದ ನಾಯಿಗೆ ಹೋಲಿಸಿದ್ದಾರೆ.

46. ಯಜ್ಞಾಶ್ವವನ್ನು ಕಟ್ಟಿದವರು ಯಾರು?
ವಾಲ್ಮೀಕಿ ಆಶ್ರಮದ ಲವ ಮತ್ತು ಆತನ ಸಂಗಡಿಗರು ಕಟ್ಟಿದ್ದರು.

47. ಕುದುರೆಯನ್ನು ಲವನು ಯಾವುದರಿಂದ ಕಟ್ಟಿದನು?
ಕುದುರೆಯನ್ನು ಲವನು ತನ್ನ ಉತ್ತರೀಯದಿಂದ ಕಟ್ಟಿದನು.

48. ಮಣ್ಣಿನ ಮಾಲೀಕ ಯಾರು ?
ಮಾನವ ಎಂಬುವವನು ಮಣ್ಣಿನ ಮಾಲೀಕ.

49. ಮಾನವ ಗಡಿಯನ್ನು ಹೇಗೆ ನಿರ್ಮಿಸಿಕೊಂಡ ?
ಮಾನವ ಎಂಬುವವನು ಮಣ್ಣಿನ ಮಾಲೀಕನಾದನೆಂಬ ಮತ್ತಿನಲ್ಲಿ ಗೆರೆ ಎಳೆದು ಗಡಿ ನಿರ್ಮಿಸಿಕೊಂಡ

50. ಮಾನವನ ಕಾದಾಟಕ್ಕೆ ಕಾರಣವೇನು?
ಮಣ್ಣಿನ ಮಾಲೀಕನಾದ ಮಾನವ ಗರ್ವದಿಂದ ಬೀಗಲು ಪ್ರಾರಂಭಿಸಿದನು ಈ ಬೀಗುವಿಕೆಯೇ ಮಾನವನ ಕಾದಾಟಕ್ಕೆ ಕಾರಣವಾಯಿತು.

51. ಅಜ್ಞಾನ ತೊಲಗಿಸಲು ಕವಯಿತ್ರಿ ಏನಾಗ ಬಯಸಿದ್ದಾರೆ?
ಅಜ್ಞಾನ ತೊಲಗಿಸಲು ಕವಯಿತ್ರಿ ವಾಗ್ದೇವಿಯ ಕೈಯಲ್ಲಿಯ ಗ್ರಂಥ ನಾನಾಗಿ ಧನ್ಯಳಾಗಬೇಕು.

52. ಮುದ್ದು ಪಾರಿವಾಳಗಳ ಜೋಡಿ ಎಲ್ಲಿ ಸಂಸಾರ ಹೂಡಿತ್ತು?
ದಟ್ಟವಾದ ಕಾಡಿನಲ್ಲಿ ಹೆಮ್ಮರದ ಹೊದರಿನಲ್ಲಿ ಮುದ್ದು ಪಾರಿವಾಳಗಳ ಜೋಡಿ ಸಂಸಾರವನ್ನು ಹೂಡಿತ್ತು.

53. ಜೋಡಿ ಪಾರಿವಾಳಗಳು ಹೇಗೆ ಬಾಳುತ್ತಿದ್ದವು?
ಹಗಲಿರುಳು ಜೊತೆಗೂಡಿ ಬಾಳುತ್ತ ಒಂದನ್ನೊಂದನ್ನು ಎಂದಿಗೂ ಅಗಲಿರದೆ, ಹೊದರಿನಲಿ ಹಿಗ್ಗು ತುಂಬಿಕೊಂಡು ಬಾಳುತ್ತಿದ್ದವು.

54. ಪಾರಿವಾಳಗಳ ಆನಂದಕ್ಕೆ ಕಾರಣವೇನು ?
ಇಟ್ಟ ಮೊಟ್ಟೆ ಒಡೆದು ಹೊರಬಂದ ಮುದ್ದಿನ ಮರಿಗಳ ಮಧುರವಾದ ಸದ್ದನ್ನು ಕೇಳುವುದು ಅವುಗಳ ಆನಂದಕ್ಕೆ ಕಾರಣವಾಗಿತ್ತು.

## ಎರಡು ಅಂಕದ ಪ್ರಶ್ನೆಗಳು :–

1. ಕಲೋಪಾಸಕನ ಕರ್ತವ್ಯ ಏನು?
ಕಲೋಪಾಸಕನು ಪರಾಂತಃಕರಣ ಪ್ರವೇಶಿಯಾಗಿ ಜನತೆಯ ಮನವನ್ನು ಅಂತಃಕರಣವನ್ನು ಅವನು ತಿದ್ದಬೇಕು ಯಾವ ವ್ಯಕ್ತಿಗಳೊಡನೆ ಅವನ ಸಂಬಂಧ ಬರುವುದೋ ಅವರ ಅಂತಃಕರಣವನ್ನು ನೋಯಿಸದಂತೆ ತನ್ನನ್ನು ಅಲಕ್ಷಿಸಿಯಾದರೂ ಉಳಿದವರ ಹಿತ ಚಿಂತನೆ ಹಾಗೂ ಹಿತ ಸಾಧನೆಯಲ್ಲಿ ತೊಡಗುವುದು ಕಲೋಪಾಸಕನ ಕರ್ತವ್ಯವಾಗಿದೆ.

2. ಸಾಧಕನ ಯೋಗ ಕ್ಷೇಮವನ್ನು ಸಮಾಜ ಹೇಗೆ ನಿರ್ವಹಿಸುತ್ತಿತ್ತು?
ಸಾಧಕನ ಯೋಗಕ್ಷೇಮವನ್ನು ನೋಡಿ ಕೊಳ್ಳಲು ಎಲ್ಲ ಧರ್ಮಗಳು ರತ್ನಪಾಠವನ್ನು ಹಾಕಿಕೊಟ್ಟಿವೆ ಸಾಧಕನಿಗೆ ಯಾವ ತೊಂದರೆಯೂ ಆಗಬಾರದೆಂದು ಅವನನ್ನು ಆ ಸಮಾಜವೇ ನೋಡಿಕೊಳ್ಳಬೇಕೆಂದು, ಧರ್ಮಶಾಲೆಗಳು, ವಿಹಾರಗಳು, ಅನ್ನಛತ್ರಗಳು, ದೇವಸ್ಥಾನಗಳು, ಮಠಗಳನ್ನು ಏರ್ಪಡಿಸಲಾಗಿದೆ ಅಂತಹ ಸಾಧಕರನ್ನು ಮನೆಯಲ್ಲಿಟ್ಟುಕೊಂಡು ಅವರ ಯೋಗಕ್ಷೇಮವನ್ನು ನೋಡಿಕೊಳ್ಳುವುದು ಸಮಾಜದ ಕರ್ತವ್ಯವಾಗಿದೆ.

3. ಸಾಧಕನ ಯೋಗಕ್ಷೇಮವು ಸಮಾಜ ಹೇಗೆ ನಿರ್ವಹಿಸುತ್ತಿತ್ತು.?
ಸಾಧಕನ ಯೋಗಕ್ಷೇಮವನ್ನು ನೋಡಿಕೊಳ್ಳಲು ಎಲ್ಲಾ ಧರ್ಮಗಳು ರತ್ನಪಾಠವನ್ನು ಹಾಕಿ ಕೊಟ್ಟಿದೆ. ಸಾದಕನಿಗೆ ಯಾವ ತೊಂದರೆಯು ಆಗಬಾರದೆಂದು ಅವನನ್ನು ಆ ಸಮಾಜವೇ ನೋಡಿಕೊಳ್ಳಬೇಕೆಂದು ಧರ್ಮಶಾಲೆಗಳು ವಿಹಾರಗಳು, ಅನ್ನಛತ್ರಗಳು, ದೇವಸ್ಥಾನಗಳು, ಮಠಗಳನ್ನು ಏರ್ಪಡಿಸಲಾಗಿದೆ. ಅಂತಹ ಸಾಧಕರನ್ನು ಮನೆಯಲ್ಲಿಟ್ಟುಕೊಂಡು ಅವರ ಯೋಗಕ್ಷೇಮವನ್ನು ನೋಡಿಕೊಳ್ಳುವುದು ಸಮಾಜದ ಕರ್ತವ್ಯವಾಗಿದೆ.

4. ಶಿಕ್ಷಣದ ಬಗೆಗೆ ವಿಶ್ವೇಶ್ವರಯ್ಯ ಅವರು ಏನೆಂದು ಹೇಳಿದ್ದಾರೆ ?

ವಿಶ್ವೇಶ್ವರಯ್ಯನವರು ಶಿಕ್ಷಣವನ್ನು ಕುರಿತು "ಆಧುನಿಕ ಶಿಕ್ಷಣವೇ ಎಲ್ಲ ಸಮಸ್ಯೆಗಳಿಗೂ ಪರಮೋಚ್ಛ ಪರಿಹಾರ ಶಿಕ್ಷಣಕ್ಕಾಗಿ ಶಿಕ್ಷಣ ವಿರಬೇಕು, ಅದು ಕೆಲವೇ ಜನರ ಸೊತ್ತಾಗದೆ ಪ್ರಗತಿ ಪರ ರಾಜ್ಯದಲ್ಲಿ ಎಲ್ಲರ ಆಜನ್ಮಸಿದ್ಧ ಹಕ್ಕಾಗಬೇಕು ಎಂದು ಹೇಳಿದ್ದಾರೆ.

5. ಬುಕ್ಕರಾಯನು ನಡೆಸಿದ ಧರ್ಮಸಭೆಗೆ ಯಾರನ್ನೆಲ್ಲಾ ಆಹ್ವಾನಿಸಿದನು.?

ಬುಕ್ಕರಾಯನು ನಡೆಸಿದ ಧರ್ಮಸಭೆಗೆ ಕೋವಿಲ್ ತಿರುಮಲೆ ಪೆರುಮಾಳರು ಕೋವಿಲ್ ತಿರುನಾರಾಯಣಪುರದ ಮುಖ್ಯರಾದ ಎಲ್ಲಾ ಸಿದ್ದಾಂತಿಗಳು, ಸಾತ್ವಿಕರೂ, ಅಕ್ಕಸಾಲಿಗರು, ರಾಟೆ ತಿರುಗಿಸಿ ನೀರು ಹಾಯಿಸುವವರು ಅಂದರೆ ಜಲಗಾರರು, 48 ಜನ ಸಾಮಂತರು ಮಲೆನಾಡಿನ ಪ್ರದೇಶದಲ್ಲಿ ವಾಸಿಸುವ ಒಂದು ವರ್ಗದ ಜನರು ಅಲೆಮಾರಿಗಳು ಕರಡಿಯ ಗುರುತಿನ ಧ್ವಜವುಳ್ಳ ದೊರೆಯ ಕುಲದವರು ಆಜಾನುಬಾಹುಗಳನ್ನು ಆಹ್ವಾನಿಸಿದ್ದನು.

6. ಜೈನಧರ್ಮದ ಸುಧಾರಣೆಗಾಗಿ ಬುಕ್ಕರಾಯನು ಕೈಗೊಂಡ ಕ್ರಮಗಳೇನು ?
ಬುಕ್ಕರಾಯನು ಜೈನಧರ್ಮದ ಸುಧಾರಣೆಗಾಗಿ ಶ್ರೀ ತಿರುಮಲೆ ತಾತಯ್ಯಗಳು ಹಾಗೂ ಎಲ್ಲಾ ಜೈನಧರ್ಮಿಯರುಗಳು ಅನುಮತಿಯಂತೆ ಬೆಳಗೊಳದ ತೀರ್ಥದಲ್ಲಿ ಶ್ರೀವೈಷ್ಣವ ಅಂಗರಕ್ಷೆಗೋಸುಗ ರಾಜ್ಯದಲ್ಲಿರುವ ಎಲ್ಲಾ ಸಮಸ್ತ ಜೈನಧ ಬಾಗಿಲು ಕಟ್ಟೆಳೆಯಾಗಿ ಮನೆಮನೆಗೆ ಒಂದು ವರ್ಷಕ್ಕೆ ಒಂದು ಹಣ ಕೊಟ್ಟು ಹಾಗೆ ಎತ್ತಿದ ಹೊನ್ನಿನಲ್ಲಿ ದೇವರ ಅಂಗರಕ್ಷೆಗೆ ಇಪ್ಪತ್ತು ಆಳುಗಳನ್ನು ನೇಮಿಸಿ ಉಳಿದ ಹೊನ್ನಿನಲ್ಲಿ ಜೀರ್ಣಗೊಂಡ, ದುರಸ್ಥಿಗೆ ಒಳಪಟ್ಟಿರುವ ಶೀಥಿಲಗೊಂಡಿರುವ ಜಿನಾಲಯಗಳ ಶಾಶ್ವತ ಜೀರ್ಣೋದ್ಧಾರ ಮಾಡುವುದು ಈ ಮರ್ಯಾದೆಯು ಚಂದ್ರಸೂರ್ಯರಿರುವ ತನಕ ತಪ್ಪದೇ ವರ್ಷವರ್ಷವೂ ನಡೆಯಬೇಕೆಂದು ಕಟ್ಟಪ್ಪಣೆ ವಿದಿಸಿದರು.

7. ನೆಹರೂ ಅವರು ಸರ್. ಎಂ. ವಿಶ್ವೇಶ್ವರಯ್ಯ ಬಗ್ಗೆ ಏನೆಂದು ಹೇಳಿದ್ದಾರೆ ?
ನೆಹರೂ ಅವರು ಸರ್. ಎಂ ವಿಶ್ವೇಶ್ವರಯ್ಯ ಅವರನ್ನು ಕುರಿತು : ದುದೃಷ್ಟವಶಾತ್ ಭಾರತೀಯರಾದ ನಾವು ಹೆಚ್ಚು ಮಾತನಾಡುವವರು ಮತ್ತು ನುಡಿದಂತೆ ನಡೆಯಲಾರೆದವರೆಂಬ ದೂಷಣೆಗೆ ಒಳಗಾಗಿದ್ದೇವೆ ತಾವು ಈ ಮಾತಿಗೆ ಬಹುದೊಡ್ಡ ರೀತಿಯಲ್ಲಿ ಹೊರತಾಗಿದ್ದೀರಿ, ತಾವು ಕಡಿಮೆ ಮಾತನಾಡಿದ್ದೀರಿ, ಹೆಚ್ಚು ಕೆಲಸ ಮಾಡದ್ದೀರಿ, ಅದನ್ನು ತಾವು

ತಮ್ಮಿಂದ ಕಲಿಯೋಣ" ಎಂದು ಹೇಳಿದರು.

8. ಎಂಜಿನಿಯರ್‌ಗಳಿಗೆ ವಿಶ್ವೇಶ್ವರಯ್ಯ ಏನೆಂದು ಮಾರ್ಗದರ್ಶನ ಮಾಡಿದರು ?
ವಿಶ್ವೇಶ್ವರಯ್ಯ ಅವರು ಎಂಜಿನಿಯರ್‌ಗಳಿಗೆ ನಮ್ಮ ಕೆಲಸಗಳು ಪ್ರಮಾಣದಲ್ಲಿ ಚಿಕ್ಕದಿರಬಹುದು. ಆದರೆ ಪ್ರಪಂಚದಾದ್ಯಂತ ಯಾವುದೇ ವರ್ಗದ ಕಾಮಗಾರಿಯ ಎಂಜಿನಿಯರಿಂಗ್ ಗುಣಲಕ್ಷಣಗಳು ಒಂದೇ ಆಗಿರುತ್ತದೆ. ಈ ಕಾಮಗಾರಿಗಳನ್ನು ಕುಶಲತೆ ಮತ್ತು ಕಡಿಮೆ ವೆಚ್ಚದಲ್ಲಿ ಕಾರ್ಯಗತಗೊಳಿಸಬೇಕೆಂದರೆ ಇತರೆ ಯಾವುದೇ ದೇಶದ ಎಂಜಿನಿಯರ್ ಪಡೆಯುವಷ್ಟೆ ತರಬೇತಿ ಮತ್ತು ಜ್ಞಾನವನ್ನು ಪಡೆಯಬೇಕು ಮಾಹಿತಿಗಳೆಲ್ಲಾಗಲಿ ವಿಧಗಳಲ್ಲಾಗಲಿ ನಾವು ಹಿಂದುಳಿಯುವುದು ಉಚಿತವಲ್ಲ ಎಂದು ಮಾರ್ಗದರ್ಶನ ಮಾಡಿದರು.

9. "ವಚನ ಧರ್ಮದ" ಬಗೆಗೆ ದೇವನೂರರ ಅಭಿಪ್ರಾಯವೇನು ?

ಒಂದು ದೇಹ ಮನಸ್ಸು ಅದೆಷ್ಟು ಮಾಧ್ಯಮ ವಚನ ಧರ್ಮದ ಬಗೆಗೆ ದೇವನೂರರು " ಹನ್ನೆರಡನೇ ಶತಮಾನದ ವಚನ ಆಂದೋಲನದ ಇಪ್ಪತ್ತೈದು ವರ್ಷಗಳು ಹುಡುಕಿದರೂ ಜಗತ್ತಿನಲ್ಲೇ ಕರ್ನಾಟಕದ ಈ ಮಾದರಿ ಬಹುಶಃ ಎಲ್ಲಾ ಸಿಗುವುದಿಲ್ಲವೇನೋ ಈ ವರ್ಷ ಧರ್ಮಗಳು ಜಾತಿಯ ಬಚ್ಚಲಿನಿಂದ ಮೇಲೆತ್ತಿ ರಕ್ಷಿಸಿದರೆ ಜಗತ್ತಿಗೇ ಇದು ಬೆಳಕಾಗಬಹುದೇನೋ ಇದು ಜಾತಿಯಾದರೆ ಕೆಟ್ಟ ಜಾತಿ ಧರ್ಮವಾದರೆ ಮಹೋನ್ನತ ಧರ್ಮ ಎಂದಿದ್ದಾರೆ.

10. ಇಂದಲ್ಲ ನಾಳೆ ಫಲ ಕೊಡುವ ಅಂಶಗಳಾವುವು ?
ಭೂಮಿಗೆಬಿದ್ದ ಬೀಜ ಇಂದಲ್ಲ ನಾಳೆ ಸರಿಯಾದ ನೀರು, ಗೊಬ್ಬರ ಉತ್ತಮ ಪರಿಸರ ಸಿಕ್ಕಾಗ ಅಂಕುರಿಸಿ ಗಿಡವಾಗಿ ಬೆಳೆದು ಮರವಾಗಿ ನೆರಳನ್ನೂ ಆಶ್ರಯವನ್ನು ಕೊಡಬಲ್ಲದು ಎದೆಗೆ ಬಿದ್ದ ಅಕ್ಷರ ಜ್ಞಾನ ಅರಿವಾಗಿ ಪರಿಣಮಿಸಿ ವೈಚಾರಿಕ ಶಕ್ತಿಯಾಗಿ ರೂಪುಗೊಂಡು ವ್ಯಕ್ತಿತ್ವವನ್ನು ರೂಪಿಸಬಲ್ಲದು ಆದ್ದರಿಂದ ಭೂಮಿಗೆ ಬಿದ್ದ ಬೀಜ ಎದೆಗೆ ಬಿದ್ದ ಅಕ್ಷರ ಇಂದಲ್ಲ ನಾಳೆ ಫಲ ಕೊಡುವ ಅಂಶವಾಗಿದೆ.

11. ಪರಮಹಂಸರ ವ್ಯಕ್ತಿತ್ವ ವೈಶಿಷ್ಟ್ಯ ಎಂಥದ್ದು ?
ಒಂದು ದೇಹ ಮನಸ್ಸು ಅದೆಷ್ಟು ಮಾಧ್ಯಮವಾಗಬಹುದೋ ಅದಷ್ಟು ಒಂದೇ ದೇಹದಲ್ಲಿ ಸಂಭವಿಸಿದ ಉದಾಹರಣೆಯೇ ಪರಮಹಂಸರು, ಯಾವುದನ್ನೂ ಕೊಲ್ಲದೆ, ಒಳಿತುಗಳನ್ನೇ ಕೂಡಿರುತ್ತಾ ಹೋದವರು ಪರಮಹಂಸರು ಎಂದು ಪರಮಹಂಸರು ವ್ಯಕ್ತಿತ್ವವನ್ನು ವಿವರಿಸುತ್ತಾರೆ.

12. ಧರ್ಮಾಧಿಕಾರಣರು ವಟವೃಕ್ಷಕ್ಕೆ ಏನು ಹೇಳಿದನು ?
ಧರ್ಮಾಧಿಕರಣರು ವಟವೃಕ್ಷದ ಸಮೀಪಕ್ಕೆ ಬಂದರು, ಅಷ್ಟ ವಿಧದಾರ್ಚನೆಯಿಂದ ಆಲದ ಮರವನ್ನು ಅರ್ಚಿಸಿ ಆ ಮರವನ್ನು ಕುರಿತು ಹೀಗೆ ಹೇಳಿದರು ನೀನಾದರೋ ಯಕ್ಷಾದಿ ದಿವ್ಯ ದೇವತಾವಾಸವೂ ಸೇವ್ಯವೂ ಆದ

ವೃಕ್ಷವಾಗಿರುವೆ ಆದುದರಿಂದ ನಿನ್ನನ್ನು ಸಾಕ್ಷಿ ಮಾಡಿ ಕೇಳುವೆವು ನೀನು ತಪ್ಪದೆ ನುಡಿಯೆಂದು ಧರ್ಮಾಧಿಕರಣರು ಕೇಳಿದರು.

13. ದುಷ್ಟಬುದ್ಧಿಯು ತನ್ನ ತಂದೆಗೆ ಏಕಾಂತದಲ್ಲಿ ಏನೆಂದು ಹೇಳಿದನು ?
ದುಷ್ಟಬುದ್ಧಿಯು ತನ್ನ ತಂದೆಯ ಕೈ ಹಿಡಿದು ಏಕಾಂತಕ್ಕೆ ಕರೆದೊಯ್ದು ನಡೆದ ವೃತ್ತಾಂತವನ್ನು ತಿಳಿಸಿ ನಿಮ್ಮ ಒಂದು ಮಾತಿನಿಂದ ನಮ್ಮ ಕಷ್ಟಗಳೆಲ್ಲ ದೂರವಾಗಿ ಹಲವು ಕಾಲದವರೆಗೆ ಹಸಿಯದೆ ಉಂಡು ಬಾಳುವಷ್ಟು ಹಣ ಬರುವುದು ನೀವು ಆ ಮರದ ಪೊಟರೆಯಲ್ಲಿ ಅಡಗಿದ್ದು ಧರ್ಮ ಬುದ್ಧಿಯೇ ಹಣವನ್ನು ಕೊಂಡು ಹೋದನೆಂದು ಹೇಳಿ ಎಂದು ಹೇಳಿದರು.

14. ಧರ್ಮಬುಧ್ಧಿಗೆ ದುಷ್ಟಬುದ್ದಿಯು ಯಾವ ಸಲಹೆಯಿತ್ತು ?
ಧರ್ಮಬುಧ್ಧಿಯು ದುಷ್ಟಬುದ್ದಿಯನ್ನು ಕರೆದು ಹೊನ್ನನ್ನು ಪಾಲು ಮಾಡಿ ಕೊಳ್ಳೋಣ ಎನ್ನಲು ದುಷ್ಟಬುದ್ದಿ ಧರ್ಮನಿಗೆ ಹೀಗೆ ಸಲಹೆ ನೀಡಿದನ್ನು ನಾವು ಈ ಹೊನ್ನನ್ನು ಪಾಲು ಮಾಡಿಕೊಂಡು ಮನೆಯಲ್ಲಿ ಸ್ವೇಚ್ಛೆಯಿಂದ ಇರುವುದು ಸಾಧ್ಯವಿಲ್ಲ ಮರಳಿ ವ್ಯಾಪಾರಕ್ಕೆ ಹೋಗಬೇಕು ಆದ್ದರಿಂದ ನಿನಗೂ ವ್ಯಯಕ್ಕೆ ಬೇಕಾದಷ್ಟು ಹೊನ್ನನ್ನು ತೆಗೆದುಕೊಂಡು ಉಳಿದ ಹೊನ್ನೆಲ್ಲವನ್ನು ಇಲ್ಲಿಯೇ ಇಟ್ಟು ಹೋಗೋಣ ಎಂದು ಸಲಹೆಯಿತ್ತನು.

15. ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣವೇನು?
ಯಾರನ್ನೇ ಆಗಲಿ, ಭರತ ಖಂಡದ ಹುಲಿಗಳು ಹಿಂದಿನಿಂದ ಹಾರಿ ಕೊಲ್ಲುವುದಿಲ್ಲ ಶತ್ರುವನ್ನಾದರೂ ಸರಿಯೇ ಆತ ಬೆನ್ನು ತಿರುಗಿಸಿರುವಾಗ ಕೊಲ್ಲುವುದು ಧರ್ಮವಲ್ಲವೆಂಬ ಭಾವನೆ ಸತ್ಯ ವ್ರತೆಯಾದ ಪುಣ್ಯಕೋಟಿಯನ್ನು ತಿನ್ನಲೊಲ್ಲದೆ ಪ್ರಾಣಬಿಟ್ಟ ಹುಲಿಯ ಮೊಮ್ಮಗನಾಗಿ ಹುಟ್ಟಿ ಅಧರ್ಮಕ್ಕೆ ಕೈ ಹಾಕುವುದೇ ? ಎಂದು ಭಾವಿಸಿ ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಮನಸ್ಸು ಮಾಡಿತು.

16. ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದ ಘಟನೆಗಳನ್ನು ವಿವರಿಸಿ.
ಚಿಕ್ಕನಾಯಕನ ಹಳ್ಳಿಗೆ ತೆಂಗಿನಕಾಯಿ ತುಂಬಿಕೊಂಡು ಹೋಗಿದ್ದ ಕೆಲವು ರೈತರು ತಿಂಗಳ ಬೆಳಕಿನಲ್ಲಿ ಗಾಡಿ ಹೊಡೆದುಕೊಂಡು ತಮ್ಮ ಹಳ್ಳಿಗೆ ಹಿಂತಿರುಗುತ್ತಿದ್ದರು ಶಾನುಬೋಗರು ಬಿದ್ದ ಸ್ಥಳಕ್ಕೆ ಕಾಲು ಹರಿದಾರಿಯಿದೆ ಎನ್ನುವಾಗ ಎತ್ತುಗಳು ಏನು ಮಾಡಿದರೂ ಮುಂದೆ ಹೋಗದೆ ಕಣಿ ಹಾಕಿ ಕೊಂಡವು ಅದೇ ವೇಳೆಗೆ ಎದೆ ನಡುಗುವಂತೆ ಹುಲಿಯ ಗರ್ಜನೆ ಕೇಳಿಸಿತು. ಎತ್ತುಗಳ ಘಂಟೆ ಶಬ್ದ, ರೈತರ ಮಾಡು ಕೇಳಿ ಬಂದ ಮೇಲೆ ಹುಲಿಯ ನಿರಾಶೆಯಿಂದಲೂ, ಕೋಪದಿಂದಲೂ ಗರ್ಜಿಸಿ ಪಲಾಯನ ಮಾಡಿತು ರೈತರು ಸ್ವಲ್ಪ ಹೊತ್ತು ಗಾಡಿಯ ಒಳಿಯೇ ಕಾಯ್ದು ನೋಡಿ ಹುಲಿಯು ಹೊರಟುಹೋಯಿತೆಂದು ಭಾವಿಸಿ ತಮ್ಮಲ್ಲಿದ್ದ ಕೋವಿಯಿಂದ ಒಂದೆರಡು ತೋಟಾ ಹಾರಿಸಿ ಕೈಯಲ್ಲಿ ತೆಂಗಿನ ಗರಿ ಪಂಜು ಹಿಡಿದು ಶಬ್ದ ಮಾಡುತ್ತ ಮೂರ್ಛೆಯಲ್ಲಿ ಬಿದ್ದಿದ್ದ ಶಾನುಭೋಗರನ್ನು ಕಂಡು ಮುಖದ ಮೇಲೆ ನೀರೆರಚಿ ಎಚ್ಚರಿಸಿದರು.

17. ಹಲಗಲಿ ಬೇಡರು ದಂಗೆ ಹೇಳಲು ಕಾರಣವೇನು?
1857 ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಅನಂತರ ಭಾರತೀಯರ ಮೇಲೆ ನಿಶ್ಯಸ್ತ್ರೀಕರಣದ ಶಾಸನವನ್ನು ಹೊರಡಿಸಿದರು. ಈ ಶಾಸನದ ಪ್ರಕಾರ ಸರ್ಕಾರದ ಅನುಮತಿಯಿರದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ ಮತ್ತು ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು ಎಂಬುದಾಗಿತ್ತು ಆದ್ದರಿಂದ ಈ ಶಾಸನವನ್ನು ವಿರೋಧಿಸಿ ಹಲಗಲಿಯ ಬೇಡರು ದಂಗೆ ಎದ್ದರು.

18. ಲಾವಣಿಗಳನ್ನು ಏಕೆ ವೀರ ಗೀತೆಗಳು ಎನ್ನಲಾಗಿದೆ ?
ನಾಡುನುಡಿಗಾಗಿ ಶ್ರಮಿಸಿದ ಸಾಧಕರನ್ನು ಕುರಿತ ವ್ಯಕ್ತಿ ಚಿತ್ರಗಳು ಹಾಗೂ ಐತಿಹಾಸಿಕ ವಿವರಗಳನ್ನು ಅಭಿವ್ಯಕ್ತಿಸುವಲ್ಲಿ ಲಾವಣಿಗಳನ್ನು ಪ್ರಮುಖ ಸ್ಥಾನವಿದೆ ವೀರತನ ಸಾಹಸವನ್ನು ವರ್ಣಿಸುವುದರಿಂದ ಲಾವಣಿಗಳನ್ನು ವೀರಗೀತೆ ಎಂದು ಕರೆಯುವುದು ವಾಡಿಕೆಯಾಗಿದೆ.

19. ಮಾತಿನ ಮಹತ್ವವನ್ನು ಬಸವಣ್ಣರವರು ಹೇಗೆ ವಿಶ್ಲೇಷಿಸಿದ್ದಾರೆ?
ಮಾತನಾಡಿದರೆ ಶುದ್ದವಾದ ಮುತ್ತಿನಂತಿರಬೇಕು ಮುತ್ತಿನ ಹಾರದಂತೆ ವಾಕ್ಯವಿರಬೇಕು ಆ ಸ್ಪಟಿಕದ ಶಲಾಕೆಯಂತೆ ನೇರವಾಗಿರಬೇಕು ಮಾಣಿಕ್ಯದ ದೀಪ್ತಿಯಂತೆ ಅರ್ಥಯುಕ್ತವಾಗಿರಬೇಕು ಕೂಡಲಸಂಗಮದೇವನ ಮೆಚ್ಚಿ ಹೌದು ಎನ್ನಬೇಕು ನುಡಿಯಲ್ಲಿ ಹೇಳಿದ ಮಾತನ್ನು ನಡೆಸದಿದ್ದರೇ ಕೂಡಲಸಂಗಮದೇವನು ಒಲಿಯುವು ದಿಲ್ಲ ಎಂದಿದ್ದಾರೆ.

20. ಬಸವಣ್ಣನವರ ವಚನಗಳಲ್ಲಿ ಕಂಡು ಬರುವ ಚಂಚಲ ಮನಸ್ಸು ಮತ್ತು ಸ್ವಭಾವಗಳನ್ನು ವಿವರಿಸಿ.
ಚಂಚಲವಾದ ಮನಸ್ಸು ಮರ್ಕಟನಂತೆ ಅಂದರೆ ಕೋತಿಯಂತೆ, ವಿಷಯಾದಿಗಳೆಂಬ ಕೊಂಬೆಗೆ ಹಾರುತ್ತಿದೆ. ಓಡುತ್ತಿದೆ. ಇಂತಹ ಚಂಚಲಯುತವಾದ ಮನಸ್ಸನ್ನು ಹೇಗೆ ನಂಬಲಿ, ನೆಚ್ಚಲಿ, ಎಂದು ಏಕಾಗ್ರತೆ ಸಾದಿಸಲು ಕೂಡಲಸಂಗಮದೇವನನ್ನು ಪ್ರಾರ್ಥಿಸುತ್ತಾರೆ. ಮನಸ್ಸು ಅಂದಣವನ್ನೇರಿದ ಸೊಣಗನಂತೆ ಅಂದರೆ ನಾಯಿಯಂತೆ ಪಲ್ಲಕ್ಕಿಯ ಮೇಲೆ ಕೂಡಿದರು ವಿಷಯಾದಿಗಳ ವಾಸನೆ ಬಿದ್ದ ತಕ್ಷಣವೇ ಕೆಳಗಿಳಿಯುತ್ತದೆ ಎಂದು ಮನಸ್ಸಿನ ಸ್ವಭಾವವನ್ನು ವಿವರಿಸುತ್ತಾರೆ.

**ಎಂ. ಶಾಂತರಾಜು (ಮಾಯಾಸುತ), ಕನ್ನಡ ಭಾಷಾ ಶಿಕ್ಷಕರು, ಸರ್ಕಾರಿ ಪ್ರೌಢ ಶಾಲೆ, ಕೊಳ್ಳೇಗಾಲ ಟೌನ್.**

21. ಭಕ್ತಿ ಮತ್ತು ನಿಷ್ಠೆಯ ಬಗ್ಗೆ ಜೇಡರ ಬಗ್ಗೆ ಜೇಡರ ದಾಸಿಮಯ್ಯನ ಅಭಿಪ್ರಾಯವೇನು ?
ಭಕ್ತಿ ಮತ್ತು ನಿಷ್ಠೆಯೆಂಬುದು ಬದುಕಿನ ವಿಶಿಷ್ಟ ಜೀವನ ಮೌಲ್ಯಗಳು ಜೀವನದಲ್ಲಿ ದಾಂಪತ್ಯ ಅತ್ಯಂತ ಪವಿತ್ರವಾದುದು, ಮನಃಪೂರ್ವಕವಾಗಿ ಒಂದಾಗಿ ಸತಿಪತಿಯವರು ಮಾಡುವ ಭಕ್ತಿ ಶಿವನಿಗೆ ಪ್ರಿಯವಾದುದು ಹಿತವಾದುದು ಸತಿಪತಿಗಳೊಂದಾಗದ ಭಕ್ತಿ ಅಮೃತದಲ್ಲಿ ವಿಷ ಬೆರೆತಂತೆ ಎಂದಿದ್ದಾರೆ ಹಾಗೆಯೇ ನಿಷ್ಠೆಯುಳ್ಳ ಭಕ್ತನು ದಟ್ಟಡವಿಯಲ್ಲಿದ್ದರೂ ಪಟ್ಟಣದಲ್ಲಿದಂತೆ ನಿಷ್ಠೆಯಿಲ್ಲದ ಭಕ್ತನು ಪಟ್ಟಣದಲ್ಲಿದ್ದರೂ ದಟ್ಟಡವಿಯಲ್ಲಿದ್ದಂತೆ ಎಂದು ಭಕ್ತಿ ಮತ್ತು ನಿಷ್ಠೆಯ ಬಗ್ಗೆ ಅಭಿಪ್ರಾಯಿಸಿದ್ದಾರೆ.

22. ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆಯನ್ನು ವಿವರಿಸಿ
ಶಕ್ತಿಶಾಲಿಯಾದ ದೊರೆಗಳು ಹೆದರಿಕೊಂಡು ರಘುವಂಶದ ಅರಸನಾದ ಶ್ರೀರಾಮನ ಯಜ್ಞಾಶ್ವವನ್ನು ತಡೆಯದೆ ನಮಿಸಿ ಪೂಜಿಸಿ ಬಿಟ್ಟ ಕುದುರೆಯು ಸಂಚರಿಸುತ್ತಾ ಹೀಗೆ ಭೂಮಿಯ ಮೇಲೆ ಯಜ್ಞಾಶ್ವವಾದ ಚೆಲುವಿನ ಕುದುರೆಯು ವಾಲ್ಮೀಕಿಯ ನಿಜಾಶ್ರಮವಾದ ಉದ್ಯಾನವನಕ್ಕೆ ಬಂದಿತು.

23. ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ ಏನೆಂದು ಬರೆಯಲಾಗಿತ್ತು?
ಕುದುರೆಯ ನೆತ್ತಿಯ ಮೇಲಿದ್ದ ಲೇಖನವು ಹೀಗಿತ್ತು ಈ ಭೂಮಿಯಲ್ಲಿ ಕೌಶಲ್ಯೆಯ ಮಗ ಶ್ರೀ ರಾಮನೊಬ್ಬನೇ ವೀರ ಆತನ ಯಜ್ಞದ ಕುದುರೆಯಿದು ಹೋರಾಡುವ ಛಲವುಳ್ಳವರು, ಶಕ್ತಿಯುಳ್ಳವರೂ ಯಾರಾದರೂ ಇದ್ದರೆ ಈ ಕುದುರೆಯನ್ನು ತಡೆದು ಕಟ್ಟಿ ಯುದ್ದ ಮಾಡಿ ಗೆಲ್ಲಬಹುದು ಎಂದು ಬರೆಯಲಾಗಿತ್ತು.

24. ಗಡಿಯ ಆಚೆ–ಈಚೆ ಜೀವಿಗಳು ಏಕೆ ಶವವಾದವು?
ಮಾನವ ಭೌತಿಕವಾಗಿ ಒಂದೆಡೆ ನೆಲೆ ನಿಂತ ಮೇಲೆ ತನ್ನ ಭೌಗೋಳಿಕ ಕ್ಷೇತ್ರದ ರಕ್ಷಣೆಗಾಗಿ ಗಡಿಯನ್ನು ರೂಪಿಸಿಕೊಂಡನು. ಗಡಿಯ ರಕ್ಷಣೆ, ವಿಸ್ತರಣೆ ಹೊಂದಾಣಿಕೆ ಇಂದು ನಿನ್ನೆಯ ವಿಷಯವಲ್ಲ ತಲತಲಾಂತರದಿಂದ ಅಭಿಮಾನಕ್ಕಾಗಿ ಅಹಂಕಾರ ಮತ್ತು ಬೀಗುವಿಕೆಯಿಂದಾಗಿ ಕದನ ಮತ್ತು ಹೋರಾಟಗಳೇ ಜರುಗಿದವು. ಈ ಕಾರಣದಿಂದಾಗಿ ಗಡಿಯ ಆಚೆ ಈಚೆ ಜೀವಿಗಳು ಶವವಾದವು.

25. ನನ್ನಾಸೆ ಕವನದಲ್ಲಿ ಕವಯತ್ರಿಯವರ ಆಶಯಗಳೇನು ? ವಿವರಿಸಿ
ನಮ್ಮ ಜೀವನ ಚೈತನ್ಯದಾಯಕವಾಗಿಯೂ, ಆನಂದಮಯವಾಗಿಯೂ ಇರಬೇಕಾದಲ್ಲಿ ನಿಸ್ವಾರ್ಥವಾದ ತ್ಯಾಗ ಜೀವನ ನಮ್ಮದಾಗಿರಬೇಕು. ನಾವು ಇನ್ನೊಬ್ಬರ ಪಾಲಿಗೆ ದಾರಿದೀಪವಾದಾಗ ನಮ್ಮ ಜೀವನದಲ್ಲಿ ಸಾರ್ಥಕ್ಯವನ್ನು ಪಡೆಯಬಹುದು. ಎಂಬುದು ಕವಯತ್ರಿಯವರ ಆಶಯವಾಗಿದೆ.

26. ಲೇಖಕರ ಪ್ರಕಾರ ವಿಶ್ವಧರ್ಮ ಯಾವಾಗ ರೂಪಿತವಾಗಬಲ್ಲದು?
ಲೇಖಕರ ಪ್ರಕಾರ ಇಂದು ದೇಶವು ಎದುರಿಸುತ್ತಿರುವ ಜಟಿಲ ಸಮಸ್ಯೆಗಳನ್ನೂ, ಸಮಾಜ ಎದುರಿಸುತ್ತಿರುವ ಜಾತಿಯಂತಹ ಸಾಮಾಜಿಕ ಪಿಡಗನ್ನು ವೈಜ್ಞಾನಿಕ ಮಾರ್ಗಗಳಿಂದ ಹಾಗೂ ವೈಜ್ಞಾನಿಕ ಮನೋಭಾವದಿಂದ ಬಗೆಹರಿಸಬಹುದು ಆಗ ಮಾತ್ರ ಮಾನವೀಯ ಮೌಲ್ಯ, ನೀತಿಯಾಧಾರಿತ ವಿಶ್ವಧರ್ಮ ರೂಪಿತವಾಗಬಲ್ಲದು.

27. ವಿಜ್ಞಾನಿಗಳ ವೈರುಧ್ಯ ಭಾವನೆಯನ್ನು ವಿವರಿಸಿ.
ವಿಜ್ಞಾನಿಗಳ ಪ್ರಯೋಗ ಶಾಲೆಯಲ್ಲಿ ತಮ್ಮ ಹೆಚ್ಚಿನ ವಿಚಾರ ಶಕ್ತಿಯನ್ನು ವೈಜ್ಞಾನಿಕ ಮನೋಭಾವವನ್ನು ಪ್ರದರ್ಶಿಸುತ್ತಾರೆ. ಆದರೆ ಅದು ನಿಜ ಜೀವನದಲ್ಲಿ ಅವರ ಯೋಚನಾಶಕ್ತಿ 'ರಜೆ' ತೆಗೆದುಕೊಂಡಿದೆಯೋ ಎಂಬಂತೆ ಅವೈಜ್ಞಾನಿಕವಾಗಿ ವರ್ತಿಸುತ್ತಾರೆ. ಒಂದೇ ಮನಸ್ಸು ಒಮ್ಮೆ ತಾರ್ಕಿಕವಾಗಿ ಚಿಂತಿಸಿದರೆ ಮತ್ತೊಮ್ಮೆ ಅತಾರ್ಕಿಕವಾಗಿ ಯೋಚಿಸುತ್ತದೆ. ಇದು ನಮ್ಮ ನಿಜ್ಞಾನಿಗಳ ವೈರುಧ್ಯ ಭಾವನೆ.

28. ಭರತ ಚಕ್ರವರ್ತಿಗೆ ತನ್ನ ಹೆಸರನ್ನು ಬರೆಸಲು ಏಕೆ ಸಾಧ್ಯವಾಗಲಿಲ್ಲ ?
ವೃಷಭಾಚಲದಲ್ಲಿ ಹಿಂದಿನ ಅನೇಕ ಚಕ್ರವರ್ತಿಗಳು ಬರೆಸಿದ ಆತ್ಮ ಪ್ರಶಂಸೆಗಳು ತುಂಬಿ ಹೋಗಿದ್ದವು ಆದ್ದರಿಂದ ಭರತ ಚಕ್ರವರ್ತಿಗೆ ತನ್ನ ಹೆಸರನ್ನು ಬರೆಸಲು ಸಾಧ್ಯವಾಗಲಿಲ್ಲ.

29. ಸಮಾಜ ಸುಧಾರಣೆ ಯಾವಾಗ ಸಾಧ್ಯವೆಂದು ಲೇಖಕರು ವಿವರಿಸಿದ್ದಾರೆ?
ವಿಜ್ಞಾನ ಜೀವನೋಪಾಯಕ್ಕೆ ಮಾರ್ಗವಾಗಿರದೆ ಅದರಲ್ಲಿಯೇ ಜೀವಂತ ನಂಬಿಕೆ ಹೊಂದಬೇಕು ಅಂತೆಯೇ ತರ್ಕಬದ್ಧವಾಗಿ, ಧೈರ್ಯದಿಂದ ವರ್ತಿಸಬೇಕು ಹಾಗಾದಾಗ ಮಾತ್ರ ಸಮಾಜದ ಸುಧಾರಣೆ ಸಾಧ್ಯ ಎಂದು ಲೇಖಕರು ವಿವರಿಸಿದ್ದಾರೆ.

30. ಪಂಪನು ತನ್ನ ಹೆಸರನ್ನು ಏಕೆ ಕೆತ್ತಿಸಲಿಲ್ಲ ?

**ಎಂ. ಶಾಂತರಾಜು (ಮಾಯಾಸುತ), ಕನ್ನಡ ಭಾಷಾ ಶಿಕ್ಷಕರು, ಸರ್ಕಾರಿ ಪ್ರೌಢ ಶಾಲೆ, ಕೊಳ್ಳೇಗಾಲ ಟೌನ್.**

ಪಂಪ ಬಂಡೆಯ ಮೇಲೆ ಹೆಸರು ಕೆತ್ತಿಸಿಕೊಳ್ಳಲಿಲ್ಲ ಏಕೆಂದರೆ ಅವನಿಗೆ ಅವನದೇ ಕಾರಣಗಳಿರಬಹುದು. ಹಾಗೂ ಅವರ ವೈಯಕ್ತಿಕ ಅಭಿರುಚಿಯ ಬಗ್ಗೆ ನಿಶ್ಚಯವಾಗಿ ಏನನ್ನು ಹೇಳಲು ಸಾಧ್ಯವಿಲ್ಲ.

31. ಕ್ರಿಯಾ ಸ್ವಾತಂತ್ಯ ಎಂದರೇನು ?
ಕ್ರಿಯಾ ಸ್ವಾತಂತ್ರ್ಯವೆಂದರೆ ತನಗೆ ಇಷ್ಟ ಬಂದ ಕೆಲಸಮಾಡಲು ವ್ಯಕ್ತಿಗೆ ಅವಕಾಶವಿರುವುದು. ಅದು ಔಪಚಾರಿಕವಾಗಿದ್ದರೆ ಸಾಲದು, ವಾಸ್ತವಿಕವಾಗಿ ಕೂಡ ಜಾರಿಯಲ್ಲಿರಬೇಕು. ಅದು ನಿರ್ದಿಷ್ಟ ಕಾರ್ಯಗಳನ್ನು ಮಾಡಲು ಇರುವ ಪರಿಣಾಮಕಾರಿಯಾದ ಸಾಮರ್ಥ್ಯವಾಗಬೇಕು.

32. 'ಅನ್ ಟು ದಿಸ್ ಲಾಸ್ಟ್' ಕೃತಿ ಗಾಂಧೀಜಿಯವರ ಮೇಲೆ ಯಾವ ಪರಿಣಾಮ ಬೀರಿತು?
- ಎಲ್ಲರ ಒಳ್ಳೆಯದರಲ್ಲಿ ನಮ್ಮ ಒಳ್ಳೆಯದು ಅಡಗಿದೆ.
- ವಕೀಲನ ಕೆಲಸಕ್ಕೆ ಇರುವ ಬೆಲೆಯೇ ಕ್ಷೌರಿಕನ ಕೆಲಸಕ್ಕೂ ಇದೆ.
- ತಮ್ಮ ಕೆಲಸದಿಂದ ಜೀವನ ನಿರ್ವಹಿಸಲು ಎಲ್ಲರಿಗೂ ಸಮಾನವಾದ ಹಕ್ಕಿದೆ
- ಶ್ರಮಜೀವಿಯ ಜೀವನ ಉಳುವವನ (ಅ) ಕೈಕಸಬುಗಾರನ ಜೀವನವೇ ಯೋಗ್ಯ ಜೀವನ

33. ವಿವೇಕಾನಂದರ ದೃಷ್ಟಿಯಲ್ಲಿ ದೇಶದ ಪ್ರಗತಿ ಸ್ಥಿರವಾಗುವುದು ಯಾವಾಗ ?
ದೇಶದ ಭಾಷೆಯಲ್ಲಿ ಜನರಿಗೆ ಭಾವನೆಗಳನ್ನು ನೀಡಿ ಹಾಗೂ ವಿಷಯ ಗ್ರಹಣವನ್ನು ಮಾಡಿಕೊಂಡು ದೇಶದ ಸಂಸ್ಕೃತಿಯನ್ನು ಅರಿತು ನಡೆದಾಗ ದೇಶದ ಪ್ರಗತಿ ಸ್ಥಿರವಾಗುವುದು.

34. ಒಂದನೇ ಒಗಟಿನ ಉತ್ತರ 'ಅಂಗಿ' ಎಂಬುದನ್ನು ಸಮರ್ಥಿಸಿ
ಅಂಗಿಗೆ ಕೈಗಳಿವೆ ಕಾಲುಗಳಿಲ್ಲ, ತಲೆಯಿಲ್ಲದೆ ಕೇವಲ ಮುಂಡ ಮಾತ್ರ ಅಂಗಿಯನ್ನು ಹೊಲಿಯುವಾಗ ಸೂಜಿಯಿಂದ ಚುಚ್ಚುವುದರಿಂದ ಉಂಟಾದ ಗಾಯ ಕತ್ತರಿಸಿದ ಒಂಬತ್ತು ತುಂಡುಗಳು ಅಂಗಿ ಧರಿಸಿದಾಗ ಹೆಗಲ ಮೇಲೆ ಕುಳಿತುಕೊಳ್ಳುತ್ತದೆ ಎಂತಹ ರಾಜ ಮಹಾರಾಜನೇ ಆದರೂ ಮೈಮುಚ್ಚಿಕೊಳ್ಳಲು ಅಂಗಿ ಬೇಕೇಬೇಕು. ಆದ್ದರಿಂದ ರಾಯ ರಾಯರಿಗೆಲ್ಲಾ ತಾನೇ ದೊಡ್ಡವನು ಈ ಎಲ್ಲಾ ಆಧಾರಗಳಿಂದ ಅದನ್ನು ಅಂಗಿ ಎಂದು ಸಮರ್ಥಿಸಬಹುದು.

35. ಒಗಟುಗಳಿಂದ ಶೈಕ್ಷಣಿಕವಾಗಿ ಏನು ಲಾಭ ?
- ವಾಕ್ಚತುರತೆ ಮತ್ತು ಪದ ಸಂಪತ್ತು ಹೆಚ್ಚಾಗುತ್ತದೆ.
- ಗ್ರಾಮೀಣ ಸಂಸ್ಕೃತಿಯನ್ನು ಅರಿಯಬಹುದು.
- ಬುದ್ಧಿ ಚುರುಕಾಗುತ್ತದೆ.
- ಸೃಜನಶೀಲ ಅಭಿವ್ಯಕ್ತಿ ಸಾಮರ್ಥ್ಯ ವೃದ್ಧಿಸುತ್ತದೆ.

36. ಎಂಟನೆಯ ಒಗಟಿನ ಉತ್ತರ ಕೊಕ್ಕರೆ ಎಂಬುದನ್ನು ಸಮರ್ಥಿಸಿ.
ಕಲ್ಲಿನ ಮೇಲೆ ಹಾಕಿ ಒಗೆಯುವುದಲ್ಲ. ನೀರಿನಲ್ಲಿ ಅದ್ದಿ ಜಾಲಿಸುವುದಲ್ಲ ಆದರೂ ಎಲ್ಲೆಲ್ಲಿ ನೋಡಿದರೂ ಮಡಿ ಮಾಡಿದ ಬಿಳಿ ವಸ್ತ್ರದಂತೆ ಕಾಣುತ್ತದೆ. ಹಾಗಾದರೆ ಅದು ಕೊಕ್ಕರೆ (ಬಿಳಿ ಕೊಕ್ಕರೆಹಕ್ಕಿ) ಎಂದು ಸಮರ್ಥಿಸಬಹುದು.

## 8/10 ವಾಕ್ಯಗಳ ಪ್ರಶ್ನೆಗಳು ಬರುವ ಗದ್ಯ-ಪದ್ಯ ಪಾಠಗಳು

| ಗದ್ಯಪಾಠಗಳು | ಪದ್ಯಪಾಠಗಳು |
|---|---|
| 1) ಶಬರಿ | 1) ಎಮ್ಮನುಡಿಗೇಳ್ |
| 2) ಅಮೇರಿಕಾದಲ್ಲಿ ಗೊರೂರು | 2) ಸಂಕಲ್ಪಗೀತೆ |
| | 3) ಕೌರವೇಂದ್ರನ ಕೊಂದೆ ನೀನು |

# ಕವಿ ಪರಿಚಯ ಪಟ್ಟಿ

| ಪಾಠದ ಹೆಸರು | ಕವಿ/ಲೇಖಕರ ಹೆಸರು | ಕಾಲ | ಜನ್ಮ ಸ್ಥಳ | ಪ್ರಮುಖ ಕೃತಿಗಳು | ಪ್ರಶಸ್ತಿ/ ಬಿರುದುಗಳು |
|---|---|---|---|---|---|
| ಶಬರಿ | ಪು.ತಿ.ನ | ಕ್ರಿ.ಶ. 1905 | ಮಂಡ್ಯ ಜಿಲ್ಲೆ, ಮೇಲುಕೋಟೆ | ಶಬರಿ, ಶ್ರೀಹರಿ ಚರಿತೆ, ಅಹಲ್ಯೆ | ಪಂಪ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ |
| ಅಮೇರಿಕಾದಲ್ಲಿ ಗೊರೂರು | ಗೊರೂರು ರಾಮಸ್ವಾಮಿ ಅಯ್ಯಂಗಾರ್ | ಕ್ರಿ.ಶ 1904 | ಹಾಸನ ಜಿಲ್ಲೆ ಗೊರೂರು | ಅಮೇರಿಕಾದಲ್ಲಿ ಗೊರೂರು, ಹೇಮಾವತಿ, ಮೆರವಣಿಗೆ | ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಗೌರವ ಡಿಲಿಟ್ |
| ಜೀವನ ದೃಷ್ಟಿ | ವಿ.ಕೃ. ಗೋಕಾಕ್ | ಕ್ರಿ.ಶ. 1909 | ಹಾವೇರಿ ಜಿಲ್ಲೆ ಸವಣೂರು | ಸಮುದ್ರ ಗೀತೆಗಳು, ಪಯಣ, ಭಾರತ ಸಿಂಧು ರಶ್ಮಿ | ಜ್ಞಾನಪೀಠ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಗೌರವ ಡಿಲಿಟ್ |
| ಭಾಗ್ಯ ಶಿಲ್ಪಿ ಸರ್.ಎಂ. ವಿಶ್ವೇಶ್ವರಯ್ಯ | ಡಿ.ಎಸ್. ಜಯಪ್ಪ ಗೌಡ | ಕ್ರಿ.ಶ. 1947 | ಚಿಕ್ಕಮಗಳೂರು ಜಿಲ್ಲೆ, ದಾರದ ಹಳ್ಳಿ | ವಿಶ್ವೇಶ್ವರಯ್ಯರವರ ಕಾರ್ಯ ಸಾಧನೆಗಳು ಮೈಸೂರು ಒಡೆಯರು | ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ |
| ಎದೆಗೆ ಬಿದ್ದ ಅಕ್ಷರ | ದೇವನೂರ ಮಹಾದೇವ | ಕ್ರಿ.ಶ. 1949 | ಮೈಸೂರು ಜಿಲ್ಲೆ ದೇವನೂರು | ಎದೆಗೆ ಬಿದ್ದ ಅಕ್ಷರ, ಕುಸುಮಬಾಲೆ, ದ್ಯಾವನೂರು | ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ |
| ವೃಕ್ಷ ಸಾಕ್ಷಿ | ದುರ್ಗಸಿಂಹ | ಕ್ರಿ.ಶ. 1031 | ಕಿಸುಕಾಡು ನಾಡಿನ ಸಯ್ಯಡಿ | ಕರ್ನಾಟಕ ಪಂಚತಂತ್ರಂ | – |
| ವ್ಯಾಘ್ರಗೀತೆ | ಎ.ಎನ್. ಮೂರ್ತಿರಾವ್ | ಕ್ರಿ.ಶ. 1900 | ಮಂಡ್ಯಜಿಲ್ಲೆಯ ಅಕ್ಕಿಹೆಬ್ಬಾಳು | ಲಲಿತ ಪ್ರಬಂಧಗಳು ದೇವರು, ಹಗಲುಗನಸು | ಪಂಪ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ |
| ಎಮ್ಮನುಡಿಗೇಳ್ | ಆದಿಕವಿ ಪಂಪ | ಕ್ರಿ.ಶ 941 | ವೆಂಗಿಪಳು/ವೆಂಗಿಮಂಡಲ | ಆದಿಪುರಾಣ, ಪಂಪಭಾರತ | ಕವಿತಾಗುಣಾರ್ಣವ, ಸರಸ್ವತಿ ಮಣಿಹಾರ, ಸಂಸಾರ ಸಾರೋದಯ |
| ಹಕ್ಕಿ ಹಾರುತಿದೆ ನೋಡಿದಿರಾ | ದ.ರಾ.ಬೇಂದ್ರೆ | ಕ್ರಿ.ಶ. 1896 | ಧಾರವಾಡ | ಗರಿ, ನಾಕುತಂತಿ, ನಾದಲೀಲೆ | ಪದ್ಮಶ್ರೀ, ಜ್ಞಾನಪೀಠ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, |
| ವಚನಸೌರಭ | ದೇವರದಾಸಿಮಯ್ಯ | ಕ್ರಿ.ಶ. 1150 | ಯಾದಗಿರಿ ಜಿಲ್ಲೆ, ಮುದೇನೂರು | ವಚನಗಳು | ರಾಮನಾಥ (ಅಂಕಿತನಾಮ) |
| | ಬಸವಣ್ಣ | ಕ್ರಿ.ಶ. 1150 | ಬಿಜಾಪುರ ಜಿಲ್ಲೆ, ಬಾಗೇವಾಡಿ | ವಚನಗಳು | ಕೂಡಲಸಂಗಮ ದೇವ (ಅಂಕಿತನಾಮ) |
| ಸಂಕಲ್ಪ ಗೀತೆ | ಜಿ.ಎಸ್.ಶಿವರುದ್ರಪ್ಪ | ಕ್ರಿ.ಶ. 1926 | ಶಿವಮೊಗ್ಗ ಜಿಲ್ಲೆ, ಶಿಕಾರಿಪುರ | ಎದೆತುಂಬಿ ಹಾಡಿದೆನು, ಚೆಲುವು-ಒಲವು, ದೀಪದ ಹೆಜ್ಜೆ | ನಾಡೋಜ ಪುರಸ್ಕಾರ, ರಾಷ್ಟ್ರಕವಿ ಪ್ರಶಸ್ತಿ, ಪಂಪ ಪ್ರಶಸ್ತಿ |
| ಕೌರವೇಂದ್ರನ ಕೊಂದೆ ನೀನು | ಕುಮಾರವ್ಯಾಸ | ಕ್ರಿ.ಶ. 1430 | ಗದಗ ಪ್ರಾಂತ್ಯದ ಕೋಳಿವಾಡ | ಗದಗಭಾರತ/ ಕರ್ನಾಟ ಭಾರತ ಕಥಾಮಂಜರಿ | ರೂಪಕ ಸಾಮ್ರಾಜ್ಯ ಚಕ್ರವರ್ತಿ |

**ಎಂ. ಶಾಂತರಾಜು (ಮಾಯಾಸುತ), ಕನ್ನಡ ಭಾಷಾ ಶಿಕ್ಷಕರು, ಸರ್ಕಾರಿ ಪ್ರೌಢ ಶಾಲೆ, ಕೊಳ್ಳೇಗಾಲ ಟೌನ್.**

| | | | | | |
|---|---|---|---|---|---|
| ವೀರಲವ | ಲಕ್ಷ್ಮೀಶ | ಕ್ರಿ.ಶ. 1550 | ಚಿಕ್ಕಮಗಳೂರು ಜಿಲ್ಲೆ, ದೇವನೂರು | ಜೈಮಿನಿ ಭಾರತ | ಉಪಮಲೋಲ ಕವಿ ಚೂತವನ ಚೈತ್ರ |

## ಕವಿ ಪರಿಚಯ

___________________________ರವರು ಕನ್ನಡದ ಹೆಸರಾಂತ ಕವಿ ಇವರ ಕಾಲ _______________ ಆಗಿದೆ.

ಇವರ ಸ್ಥಳ _______________ _____________________ಇವರು ಅನೇಕ ಕೃತಿಗಳನ್ನು ರಚಿಸಿದ್ದು, ಅವುಗಳಲ್ಲಿ

_______________ _______________ _______________ ಪ್ರಮುಖವಾದವು ಇವರಿಗೆ _____________

______________________ ಬಿರುದು/ಪ್ರಶಸ್ತಿ ಲಭಿಸಿದೆ.

---

### ಪು ತಿ ನರಸಿಂಹಾಚಾರ್ಯ

ಪು.ತಿ.ನ ರವರು ಕನ್ನಡದ ಹೆಸರಾಂತ ಕವಿ. ಇವರ ಕಾಲ ಕ್ರಿ ಶ. 1905 ಇವರ ಸ್ಥಳ ಮಂಡ್ಯಜಿಲ್ಲೆ ಮೇಲುಕೋಟೆ. ಇವರು ಅನೇಕ ಕೃತಿಗಳನ್ನು ರಚಿಸಿದ್ದು ಅವುಗಳಲ್ಲಿ ಶಬರಿ ಅಹಲ್ಯೆ, ಶ್ರೀಹರಿಚರಿತೆ ಪ್ರಮುಖವಾದವು ಇವರಿಗೆ ಪಂಪಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

### ಗೊರೂರು ರಾಮಸ್ವಾಮಿ ಅಯ್ಯಂಗಾರ್

ಗೊರೂರು ರಾಮಸ್ವಾಮಿ ಅಯ್ಯಂಗಾರ್ ರವರು ಕನ್ನಡದ ಹೆಸರಾಂತ ಕವಿ ಇವರಕಾಲ ಕ್ರಿ.ಶ 1904 ಇವರ ಸ್ಥಳ ಹಾಸನ ಜಿಲ್ಲೆ ಗೊರೂರು. ಇವರು ಅನೇಕ ಕೃತಿಗಳನ್ನು ರಚಿಸಿದ್ದು, ಅವುಗಳಲ್ಲಿ ಅಮೇರಿಕಾದಲ್ಲಿ ಗೊರೂರು, ಹೇಮಾವತಿ, ಮೆರವಣಿಗೆ ಪ್ರಮುಖವಾದವು ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಗೌರವ ಡಿಲಿಟ್ ಪ್ರಶಸ್ತಿ ಲಭಿಸಿದೆ.

### ವಿ.ಕೃ. ಗೋಕಾಕ್

ವಿ.ಕೃ. ಗೋಕಾಕ್ ರವರು ಕನ್ನಡದ ಹೆಸರಾಂತ ಕವಿ ಇವರ ಕಾಲ ಕ್ರಿ.ಶ 1909 ಇವರಸ್ಥಳ ಹಾವೇರಿ ಜಿಲ್ಲೆ ಸವಣೂರು. ಇವರು ಅನೇಕ ಕೃತಿಗಳನ್ನು ರಚಿಸಿದ್ದು ಅವುಗಳಲ್ಲಿ ಸಮುದ್ರ ಗೀತೆಗಳು, ಪಯಣ, ಭಾರತಸಿಂಧೂರಶ್ಮಿ ಪ್ರಮುಖವಾದವು. ಇವರಿಗೆ ಭಾರತೀಯ ಜ್ಞಾನಪೀಠ ಪ್ರಶಸ್ತಿ, ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

### ದುರ್ಗಸಿಂಹ

ದುರ್ಗಸಿಂಹ ರವರು ಕನ್ನಡದ ಹೆಸರಾಂತ ಕವಿ ಇವರ ಕಾಲ ಕ್ರಿ.ಶ 1031 ಇವರಸ್ಥಳ ಕಿಸುಕಾಡು ನಾಡಿನ ಸಯ್ಯಡಿ. ಇವರ ಕೃತಿ ಕರ್ಣಾಟಕ ಪಂಚತಂತ್ರಂ.

### ದೇವನೂರು ಮಹಾದೇವ

ದೇವನೂರು ಮಹಾದೇವ ರವರು ಕನ್ನಡದ ಹೆಸರಾಂತ ಕವಿ. ಇವರ ಕಾಲ 1949 ಇವರ ಸ್ಥಳ ಮೈಸೂರು ಜಿಲ್ಲೆ ದೇವನೂರು. ಇವರು ಅನೇಕಕೃತಿಗಳನ್ನು ರಚಿಸಿದ್ದು ಅವುಗಳಲ್ಲಿ ಎದೆಗೆ ಬಿದ್ದ ಅಕ್ಷರ, ದೇವನೂರು, ಕುಸುಮಬಾಲೆ ಮುಂತಾದವು ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

### ಎ.ಎಸ್. ಮೂರ್ತಿರಾವ್

ಎ.ಎಸ್. ಮೂರ್ತಿರಾವ್ ರವರು ಕನ್ನಡದ ಹೆಸರಾಂತ ಕವಿ ಇವರಕಾಲ ಕ್ರಿ.ಶ 1900 ಇವರ ಸ್ಥಳ ಮಂಡ್ಯಜಿಲ್ಲೆ ಅಕ್ಕಿಹೆಬ್ಬಾಳು. ಇವರು ಅನೇಕ ಕೃತಿಗಳನ್ನು ರಚಿಸಿದ್ದು ಅವುಗಳಲ್ಲಿ ಲಲಿತ ಪ್ರಬಂಧಗಳು, ದೇವರು, ಹಗಲುಗನಸು ಪ್ರಮುಖವಾದವು ಇವರಿಗೆ ಪಂಪಪ್ರಶಸ್ತಿ ಕೇಂದ್ರ ಸಾಹಿತ್ಯ ಅಕಾಡೆಮಿ ಲಭಿಸಿದೆ.

### ಆದಿಕವಿ ಪಂಪ

ಆದಿಕವಿ ಕನ್ನಡದ ಹೆಸರಾಂತ ಕವಿ, ಇವರ ಕಾಲ ಕ್ರಿ.ಶ ಸು. 941 ಇವರ ಸ್ಥಳ ವೆಂಗಿ ಮಂಡಲ, ಇವರ ಕೃತಿಗಳೆಂದರೆ, ಆದಿಪುರಾಣ, ವಿಕ್ರಮಾರ್ಜುನ ವಿಜಯಂ / ಪಂಪಭಾರತ ಇವರಿಗೆ ಕವಿತಾಗುಣಾರ್ಣವ, ಸರಸ್ವತಿ ಮಣಿಹಾರ, ಸಂಸಾರ ಸಾರೋದಯ ಎಂಬ ಬಿರುದು ಲಭಿಸಿದೆ

**ದ.ರಾ. ಬೇಂದ್ರೆ**

ದ.ರಾ. ಬೇಂದ್ರೆ ರವರು ಕನ್ನಡದ ಹೆಸರಾಂತ ಕವಿ ಇವರ ಕಾಲ ಕ್ರಿ.ಶ 1896 ಇವರಸ್ಥಳ ಧಾರವಾಡ ಇವರು ಅನೇಕ ಕೃತಿಗಳನ್ನು ಬರೆದಿದ್ದಾರೆ ಅವುಗಳಲ್ಲಿ ಗರಿ, ನಾದಲೀಲೆ ನಾಕುತಂತಿ ಪ್ರಮುಖವಾದವು. ಇವರಿಗೆ ಪದ್ಮಶ್ರೀ, ಜ್ಞಾನಪೀಠಪ್ರಶಸ್ತಿ, ಗೌರವ ಡಿಲಿಟ್ ಪ್ರಶಸ್ತಿ ಲಭಿಸಿದೆ.

**ಜಿ.ಎಸ್. ಶಿವರುದ್ರಪ್ಪ**

ಜಿ.ಎಸ್. ಶಿವರುದ್ರಪ್ಪ ರವರು ಕನ್ನಡದ ಹೆಸರಾಂತ ಕವಿ. ಇವರು ಕಾಲ ಕ್ರಿ.ಶ 1926 ಇವರ ಸ್ಥಳ ಶಿವಮೊಗ್ಗ ಜಿಲ್ಲೆ ಶಿಕಾರಿಪುರ ಇವರು ಅನೇಕ ಕೃತಿಗಳನ್ನು ಬರೆದಿದ್ದು, ಅವುಗಳಲ್ಲಿ ಎದೆ ತುಂಬಿ ಹಾಡಿದೆನು, ಚೆಲುವು-ಒಲವು, ದೀಪದ ಹೆಜ್ಜೆ, ಮೊದಲಾದವು ಇವರಿಗೆ ರಾಷ್ಟ್ರಕವಿ ಪ್ರಶಸ್ತಿ, ನಾಡೋಜ ಪುರಸ್ಕಾರ, ಪಂಪಪ್ರಶಸ್ತಿ ಲಭಿಸಿದೆ.

**ಲಕ್ಷ್ಮೀಶ**

ಲಕ್ಷ್ಮೀಶ ಕನ್ನಡದ ಹೆಸರಾಂತ ಕವಿ. ಇವರ ಕಾಲ ಕ್ರಿ.ಶ 1550 ಇವರ ಸ್ಥಳ ಚಿಕ್ಕಮಗಳೂರು ಜಿಲ್ಲೆ ದೇವನೂರು ಇವರು ಬರೆದ ಕೃತಿ ಜೈಮಿನಿ ಭಾರತ. ಇವರಿಗೆ ಉಪಮಾಲೋಲ, ಕವಿ ಚೂತವನ ಚೈತ್ರ ಎಂಬ ಬಿರಿದು ಲಭಿಸಿದೆ.

**ಕುಮಾರವ್ಯಾಸ**

ಕುಮಾರವ್ಯಾಸ ಕನ್ನಡದ ಹೆಸರಾಂತ ಕವಿ. ಇವರ ಕಾಲ ಕ್ರಿ.ಶ ಸು 1430 ಇವರ ಸ್ಥಳ ಗದಗ ಪ್ರಾಂತ್ಯದ ಕೋಳಿವಾಡ. ಇವರು ಬರೆದ ಕೃತಿ ಕುಮಾರವ್ಯಾಸ ಭಾರತ/ಕರ್ಣಾಟ ಭಾರತ ಕಥಾಮಂಜರಿ. ಇವರಿಗೆ ರೂಪಕ ಸಾಮ್ರಾಜ್ಯ ಚಕ್ರವರ್ತಿ ಎಂಬ ಬಿರುದು ಲಭಿಸಿದೆ

# ಪದ್ಯಕಂಠಪಾಠ

## ಹಕ್ಕಿಹಾರುತಿದೆ ನೋಡಿದಿರಾ

ನೀಲಮೇಘ ಮಂಡಲ ಸಮಬಣ್ಣ
ಮುಗಿಲಿಗೆ ರೆಕ್ಕೆಗಳೊಡೆದವೂ ಅಣ್ಣಾ
ಚಿಕ್ಕೆಯ ಮಾಲೆಯ ಸೆಕ್ಕಿಸಿಕೊಂಡು
ಸೂರ್ಯ ಚಂದ್ರರನ್ನು ಮಾಡಿದೆ ಕಣ್ಣಾ
ಹಕ್ಕಿ ಹಾರುತಿದೆ ನೋಡಿದಿರಾ

ಅಥವಾ

ಯುಗಯುಗಗಳ ಹಣೆ ಬರಹವ ಒರಸಿ
ಮನ್ವಂತರಗಳ ಭಾಗ್ಯವ ತೆರೆಸಿ
ರೆಕ್ಕೆಯ ಬೀಸುತ ಚೇತನಗೊಳಿಸಿ
ಹೊಸಗಾಲದ ಹಸುಮಕ್ಕಳ ಹರಸಿ,
ಹಕ್ಕಿಹಾರುತಿದೆ ನೋಡಿದಿರಾ

## ಸಂಕಲ್ಪಗೀತೆ

ಕಲುಷಿತವಾದೀ ನದೀಜಲಗಳಿಗೆ
ಮುಂಗಾರಿನ ಮಳೆಯಾಗೋಣ
ಬರಡಾಗಿರುವೀ ಕಾಡುಮೇಡುಗಳ
ವಸಂತವಾಗುತ ಮುಟ್ಟೋಣ

ಅಥವಾ

ಮತಗಳೆಲ್ಲವೂ ಪಥಗಳು ಎನ್ನುವ
ಹೊಸ ಎಚ್ಚರದೊಳು ಬದುಕೋಣ
ಭಯ - ಸಂಶಯದೊಳು ಕಂದಿದ ಕಣ್ಣೊಳು
ನಾಳಿನ ಕನಸನು ಬಿತ್ತೋಣ,

## ಎಮ್ಮನುಡಿಗೇಳ್

ನೀನುಳ್ಳೊಡೆಲ್ಲರೊಳರೆಮ
ಗೇನು ಮಳಲ್ ಮನದೊಳಿಲ್ಲದೆಂತೆನೆ ಮಗನೆ
ಭಾನುವೆ ಸಾಲದೆ ಪಗಲೆನಿ
ತಾನುಂ ದೀವಿಗೆಗಳುರಿದೊಡೇಂ ನಂದಿದೊಡೇಂ

## ಕೌರವೇಂದ್ರನ ಕೊಂದೆ ನೀನು

ಮಾರಿಗೌತಣ ವಾಯ್ತು ನಾಳಿನ
ಭಾರತವು ಚದುರಂಗ ಬಲದಲಿ
ಕೌರವನ್ ಖುಣಹಿಂಗೆ ರಣದಲಿ ಸುಭಟಕೋಟಿಯನು
ತೀರಿಸಿಯೆ ಪತಿಯವಸರಕ್ಕೆ ಶ
ರೀರವನ್ನು ನೂಕುವೆನು ನಿನ್ನಯ
ವೀರರೈವರ ನೋಯಿಸೆನು ರಾಜೀವಸಖನಾಣೆ,

# ಸಂದರ್ಭಗಳು

**ಶಬರಿ**

1. **"ಆವುದೀ ಮರುಳು? ನಮ್ಮೆಡೆಗೆ ಬರುತಿಹುದು".**
   ಈ ವಾಕ್ಯವನ್ನು ಪು.ತಿ.ನ ವಿರಚಿತ ಶಬರಿ ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. ಆಕರ ಗ್ರಂಥ ಶಬರಿ ಗೀತನಾಟಕ
   ಈ ಮಾತನ್ನು ಶ್ರೀ ರಾಮನು ತನ್ನ ಸಹೋದರ ಲಕ್ಷ್ಮಣನಿಗೆ ಹೇಳುತ್ತಾನೆ. ರಾವಣನಿಂದ ಸೀತಾಪಹರಣವಾದ ನಂತರ ಸೀತೆಯನ್ನು ಹುಡುಕಿಕೊಂಡು ಬರುವಾಗ ಶ್ರೀರಾಮನು ಲಕ್ಷ್ಮಣನನ್ನು ಸಂತೈಸುತ್ತಾ ಧನು ತಪಸ್ವಿಗಳು ಹೇಳಿದ ದಾರಿಯಲ್ಲೇ ಶಬರಿಯ ಆಶ್ರಮಕ್ಕೆ ಬಂದಿದ್ದೇವೆ. ಇದೇ ಶಬರಿಯಾಶ್ರಮ ಎಂದು ಹೇಳುತ್ತಿರುವಾಗ ಯಾವುದೋ ಮಾನವಾಕೃತಿ ಇತ್ತ ಬರುವಂತೆ ಭಾಸವಾಗುತ್ತಿದೆ. ಅದನ್ನು ಕಂಡು ಶ್ರೀರಾಮನು ಮರುಳು ಎನ್ನುವ ಭಾವ ಸ್ವಾರಸ್ಯಕರವಾಗಿದೆ.

2. "ನಾಚುತಿಹೆನೀ ಪೂಜ್ಯಯೀ ನಲುಮೆಯಿಂದ".

3. "ತಾಯಿ ದಾರಿಗರಿಗೆ ಬೀಡಿಲ್ಲಿ ದೊರೆಯುವುದೇ".

4. "ರೂಪಿನಂತೆ ಮಾತುಕೂಡ ಎನಿತುದಾರವಾಗಿದೆ".

5. "ಬೆಳಕಿಗೊಲಿದವರ್ ಉರಿವ ಬತ್ತಿಯ ಕರುಕ ಕಾಣರು".

**ಅಮೇರಿಕಾದಲ್ಲಿ ಗೊರೂರು**

1. **"ನನಗೆ ಇಂಗ್ಲೀಷ್ ಬಂದಿದ್ದರೆ ನಾನು ಇಷ್ಟು ಹೊತ್ತಿಗೆ ಬೆಂಕಿ ಆರಿಸುವವರನ್ನೇ ಕರೆಸಿಬಿಡುತ್ತಿದ್ದೆ"**
   ಪ್ರಸ್ತುತ ವಾಕ್ಯವನ್ನು ಗೊರೂರು ರಾಮಸ್ವಾಮಿ ಅಯ್ಯಂಗಾರ್ ರವರು ವಿರಚಿತ ಅಮೇರಿಕಾದಲ್ಲಿ ಗೊರೂರು ಎಂಬ ಪ್ರವಾಸ ಕಥನದಿಂದ ಆಯ್ದ ಅದೇ ಹೆಸರಿನ ಗದ್ಯ ಪಾಠದಿಂದ ಆರಿಸಿಕೊಳ್ಳಲಾಗಿದೆ
   ವಿದ್ಯುತ್ ಒಲೆಯ ಅವಾಂತರದಿಂದ ಉಂಟಾದ ಗಾಬರಿ ಮತ್ತು ಭಯವನ್ನು ನಿವಾರಿಸುವಂತೆ ಮನೆಯ
   ಸ್ವಲ್ಪದೂರದಲ್ಲಿದ್ದ ಶಾಲೆಯ ಮೇಸ್ಟ್ರನ್ನೋ, ಹುಡುಗರನ್ನೋ ಕರೆದುಕೊಂಡು ಬನ್ನಿರಿ ಮನೆ ಸುಟ್ಟು ಹೋಗುವುದರೊಳಗೆ ಬನ್ನಿರಿ ಎಂದು ಲೇಖಕರ ಹೆಂಡತಿಯು ಕಾಳಜಿ ಹಾಗೂ ಆತಂಕದಿಂದ ಲೇಖಕರಿಗೆ
   ಹೇಳುವ ಮಾತು ಸ್ವಾರಸ್ಯಪೂರ್ಣವಾಗಿದೆ.

**ಎಂ. ಶಾಂತರಾಜು (ಮಾಯಾಸುತ), ಕನ್ನಡ ಭಾಷಾ ಶಿಕ್ಷಕರು, ಸರ್ಕಾರಿ ಪ್ರೌಢ ಶಾಲೆ, ಕೊಳ್ಳೇಗಾಲ ಟೌನ್.**

2. "ನಮ್ಮ ಪುಸ್ತಕದಲ್ಲಿ ಗಾಂಧಿ ಮೇಲೆ ಒಂದು ಪಾಠವಿದೆಯಲ್ಲ".

3. "ಇದು ಪೂರ್ಣವಾಗಿ ಕೈಯಿಂದಲೇ ತಯಾರಾದ ಬಟ್ಟೆ".

4. "ಸ್ವಲ್ಪ ಹೋಗಿ ಇವರಿಗೆ ಸಹಾಯಮಾಡು".

5. "ಕೈಯಿಂದ ಇದನ್ನು ಮಾಡುವುದು ಹೇಗೋ".

**ಜೀವನ ದೃಷ್ಟಿ**

1. **"ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಾಣವಕ್ಕು"**

ಪ್ರಸ್ತುತ ವಾಕ್ಯವನ್ನು ವಿ.ಕೃ.ಗೋಕಾಕ್‌ರವರು ಬರೆದಿರುವ ಜೀವನದೃಷ್ಟಿ ಎಂಬ ಗದ್ಯಪಾಠ ದಿಂದ ಆರಿಸಲಾಗಿದೆ. ಆಕರಗ್ರಂಥ ಜೀವನ ಪಾಠಗಳು ಎಂಬ ಪ್ರಬಂಧ

ಈ ಮಾತನ್ನು ಸರ್ವಜ್ಞನು ಹೇಳುತ್ತಾನೆಂದು ಕವಿ ತನ್ನ ಪ್ರಬಂಧದಲ್ಲಿ ಉಲ್ಲೇಖಿಸಿ ಹೇಳುತ್ತಾರೆ. ನಮ್ಮ ಜೀವನದಲ್ಲಿ ಅನ್ಯರ ದೃಷ್ಟಿಕೋನ ಅನ್ಯರ ಜೀವನದಲ್ಲಿ ನಮ್ಮ ದೃಷ್ಟಿ ಕೋನಕ್ಕೆ ಪ್ರಮುಖ ಸ್ಥಾನವಿದೆ ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ ಜೀವನದಲ್ಲಿ ಪ್ರತಿಯೊಬ್ಬರ ದೃಷ್ಟಿಕೋನಕ್ಕೆ ಪ್ರಮುಖ ಮಹತ್ವವಿದೆ. ಅದನ್ನರಿತು ಜೀವನ ಸಾಗಿಸುವುದೇ ಮುಖ್ಯವೆಂಬುದು ಸ್ವಾರಸ್ಯಕರ ಅಂಶವಾಗಿದೆ.

2. "ತನ್ನ ಗುಂಗಿನಲ್ಲಿದ್ದ ಅಂತರ್ಜೀವಿಗೆ ಪರರ ಹಂಗೆಲ್ಲಿ.".

3. "ಕಲೋಪಾಸಕನಿಗೆ ಸಮಾಜದಲ್ಲಿ ಯಾವ ಹೊಣೆಯೂ ಇರಬಾರದು".

4. "ಧಾತೃವಿನ ಮನವನ್ನು ಹತ್ತುಸಲ ಪರೀಕ್ಷಿಸಿ ದಾನವನ್ನು ಸ್ವೀಕರಿಸಬೇಕು".

5. "ಜೀವನರಥಕ್ಕೆ ಒಗ್ಗಾಲಯ ಭೀತಿಯಿದೆ".

**ಎದೆಗೆ ಬಿದ್ದ ಅಕ್ಷರ**

1. **"ಏನ್ರಯ್ಯ ಏನ್ ಮಾಡ್ತಾ ಇದ್ದೀರಿ".**

ಪ್ರಸ್ತುತ ವಾಕ್ಯವನ್ನು ದೇವನೂರು ಮಹಾದೇವ ವಿರಚಿತ 'ಎದೆಗೆ ಬಿದ್ದ ಅಕ್ಷರ' ಎಂಬ ವೈಚಾರಿಕ ಬಿಡಿಲೇಖನಗಳ ಸಂಕಲನದಿಂದ ಆಯ್ದ ಅದೇ ಹೆಸರಿನ ಗದ್ಯ ಭಾಗದಿಂದ ಆರಿಸಲಾಗಿದೆ.

ಕವಿ ಸಿದ್ದಲಿಂಗಯ್ಯರವರು ಲೇಖಕರಿಗೆ ಮನೆಮಂಚಮ್ಮನ ಕಥೆಯನ್ನು ಹೇಳುವ ಸಂದರ್ಭದಲ್ಲಿ ಗ್ರಾಮದೇವತೆ ಮನೆಮಂಚಮ್ಮ ಈ ಮಾತನ್ನು ಜನರನ್ನು ಕುರಿತು ಹೇಳುತ್ತಾಳೆ. ಒಂದ್ಸಲ ಒಂದು ಗ್ರಾಮದ ಜನರೆಲ್ಲ ಸೇರಿ ತಮ್ಮ ದೇವತೆಗೆ ಗುಡಿಕಟ್ಟಲು ಆರಂಭಿಸುತ್ತಾರೆ. ಹೀಗೆ ಕಟ್ತಾ ಚಾವಣಿ ಮಟ್ಟಕ್ಕೆ ಬಂದಾಗ ಒಬ್ಬನ ಮೈಮೇಲೆ ದೇವತೆ ಮಂಚಮ್ಮ ಆವಾಹಿಸಿಕೊಂಡು ಏನ್ರಯ್ಯ ಏನ್ ಮಾಡ್ತಾಇದ್ದೀರಿ ಎಂದು ಜನರನ್ನು ಪ್ರಶ್ನಿಸುತ್ತಾಳೆ. ಪ್ರಸ್ತುತ ಮಾತು ಜನರಮೇಲೆ ದೇವತೆಗೆ ಇರುವ ಕಾರುಣ್ಯ ಸ್ವಾರಸ್ಯ ಪೂರ್ಣವಾಗಿ ಪ್ರತಿ ಬಿಂಬಿಸುತ್ತದೆ.

2. "ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೆ ನನಗೂ ಮನೆಬೇಡ".

3. "ಯಾವ ಜೀವಿಯೂ ತನ್ನಷ್ಟಕ್ಕೆ ತಾನಿಲ್ಲ".

4. "ನಾವು ಮನುಷ್ಯರು".

5. "ಈ ಸಮಷ್ಟಿಯ ಮನಸ್ಸಲ್ಲಿ ಎಲ್ಲರೂ ಇರುತ್ತಾರೆ".

## ವೃಕ್ಷಸಾಕ್ಷಿ

1. **"ಪೊನ್ನನೆಲ್ಲಮಂ ನೀನೆ ಕೊಂಡೆ."**

ಪ್ರಸ್ತುತ ವಾಕ್ಯವನ್ನು ದುರ್ಗಸಿಂಹ ವಿರಚಿತ **'ಕರ್ನಾಟಕಪಂಚತಂತ್ರಂ'** ಎಂಬ ಕೃತಿಯಿಂದ ಆಯ್ದ ವೃಕ್ಷಸಾಕ್ಷಿ ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. ಧರ್ಮಬುದ್ದಿಯನ್ನು ವಂಚಿಸಿ, ಹೋಗಿ ಹೊನ್ನನ್ನೆಲ್ಲ ಕೊಂಡು ಹೊಂಡವನ್ನು ಮೊದಲಿನಂತೆ ಮುಚ್ಚಿದನು. ಸ್ವಲ್ಪ ದಿನಗಳ ಮೇಲೆ ತಾನೇ ಧರ್ಮಬುದ್ದಿಯಲ್ಲಿಗೆ ಬಂದು ವ್ಯಯಕ್ಕೆ ಇನ್ನು ಹೊನ್ನಿಲ್ಲ. ಮತ್ತಷ್ಟು ಸ್ವಲ್ಪ ಹೊನ್ನನ್ನು ತೆಗೆದುಕೊಂಡು ಬರೋಣ ಎಂದು ಒಟ್ಟಿಗೆ ಹೋಗಿ ಹೂತಿದ್ದ ಜಾಗವನ್ನು ಅಗೆದಾಗ ಹೊನ್ನನ್ನು ಕಾಣದೆ ಇರದಾದಾಗ ಸುಳ್ಳು ತನ್ನ ಮೇಲೆ ಬರುವುದೆಂದು ಭಾವಿಸಿ ದುಷ್ಟಬುದ್ದಿಯು ಧರ್ಮಬುದ್ದಿಯ ಮೇಲೆ ಕಳ್ಳತನವನ್ನು ಆರೋಪಿ ಮಿಶ್ರದ್ರೋಹದ ಕಳ್ಳತನವನ್ನು ಮುಚ್ಚಿಹಾಕುವ ಜಾಣತನ ಸ್ವಾರಸ್ಯಪೂರ್ಣವಾಗಿದೆ.

2. "ಈತನ ಮಾತು ಅಶ್ರುತಪೂರ್ವಮ್"

3. "ನಿನ್ನ ಪಳುವಿಗೆ ನಮ್ಮ ಕುಲಮನೆಲ್ಲಮನಳಿವ ಬಗ"

4. "ಪ್ರಕೃತಿ, ವಿಕೃತಿಯಾದ ಮನುಷ್ಯನಾಯುಷ್ಯಂ ಕುಂದುಗುಂ"

5. "ಹುಸಿಯಾದ ಬೇಹಾರಿಯೇ ಇಲ್ಲ."

**ವ್ಯಾಘ್ರಗೀತೆ**

1. **"ಖಂಡ ವಿದೆಕೋ ಮಾಂಸವಿದೆಕೋ ಗುಂಡಿಗೆಯ ಬಿಸಿರಕ್ತವಿದೆಕೋ".**

ಪ್ರಸ್ತುತ ವಾಕ್ಯವನ್ನು ಎ.ಎಸ್.ಮೂರ್ತಿರಾವ್ ಬರೆದಿರುವ 'ಸಮಗ್ರ ಲಲಿತಪ್ರಬಂಧಗಳು' ಸಂಕಲನದಿಂದ ಆಯ್ದ 'ವ್ಯಾಘ್ರಗೀತೆ ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಹುಲಿಯು ತನಗೆ ತಾನೇ ಹೇಳಿಕೊಳ್ಳುತ್ತದೆ. ಅಧರ್ಮದಿಂದ ಕೊಲ್ಲುವುದೋ ಬಿಡುವುದೋ ಎಂಬ ಕ್ಷಣಕಾಲದ ಗೊಂದಲದಲ್ಲಿ ಸಿಲುಕಿದ ಹುಲಿಯು 'ಖಂಡವಿದೆಕೋ ಮಾಂಸವಿದೆಕೋ ಗುಂಡಿಗೆಯ ಬಿಸಿರಕ್ತವಿದಕೋ ಎಂಬ ಹಸುವು ಆಹ್ವಾನಕೊಟ್ಟಾಗ ನನ್ನ ಅಜ್ಜ ಬಾಯಿಚಪ್ಪರಿಸಿ, ತಿನ್ನಬಹುದಾಗಿತ್ತು. ಆದರೆ ಸತ್ಯವ್ರತೆಯಾದ ಪುಣ್ಯಕೋಟಿಯನ್ನು ತಿನ್ನದೆ ತಾನೇ ಪ್ರಾಣಬಿಡಲಿಲ್ಲವೇ ? ಅಂತಹ ಸದ್ವಂಶದ ಹುಲಿಯ ಮೊಮ್ಮಗನಾಗಿ ಹುಟ್ಟಿ ಅಧರ್ಮದಿಂದ ಕೊಲ್ಲುವುದೇ? ಎಂದು ಧರ್ಮಶ್ರದ್ದೆಯನ್ನು ಮೆರೆಯುತ್ತದೆ ಹುಲಿಗೆ ತನ್ನ ವಂಶದ ಬಗೆಗಿರುವ ಧರ್ಮಜಾಗೃತಿ ಸ್ವಾರಸ್ಯಪೂರ್ಣವಾಗಿದೆ.

2. "ಸ್ವಧರ್ಮ ನಿಧನಂ ಶ್ರೇಯಃ"

3. "ದೇವರೆ, ಮರ ಹತ್ತುವಷ್ಟು ಅವಕಾಶ ಕರುಣಿಸು"

4. "ನಾನು ಮುಖ ಮೇಲಾಗಿ ಬಿದ್ದಿದ್ದೇನೆ"

5. "ಹುಲಿ ಈಗ ಎಷ್ಟು ಹಸಿದಿರಬೇಕು."

**ಎಮ್ಮ ನುಡಿಗೇಳ್**

1. ಎನಗಂ ಪಾಂಡುಗಮಿಲ್ಲ ಬೇದಂ

ಪ್ರಸ್ತುತ ವಾಕ್ಯವನ್ನು ಡಿ.ಎಲ್.ನರಸಿಂಹಾಚಾರ್ ಸಂಪಾದಿಸಿರುವ ಆದಿಕವಿ ಪಂಪ ವಿರಚಿತ ' ವಿಕ್ರಮಾರ್ಜುನ ವಿಜಯಂ ಎಂಬ ಕಾವ್ಯದಿಂದ ಆಯ್ದ **'ಎಮ್ಮ ನುಡಿಗೇಳ್'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಈ ಮಾತನ್ನು ದೃತರಾಷ್ಟ್ರನ ಮಗ ದುರ್ಯೋಧನವನ್ನು ಪ್ರೀತಿಯಿಂದ ಅಪ್ಪಿ ಮುದ್ದಾಡುತ್ತಾ ನನಗೂ ಸೋದರನಾದ ಪಾಂಡುವಿಗೂ ಯಾವುದೇ ಭೇದವಿಲ್ಲ ಎಂದು ಹೇಳುವ ಸಂದರ್ಭದಲ್ಲಿ ಈ ಮಾತುಬಂದಿದೆ. ಪಾಂಡು ನಂದನರೊಡನೆ ಯಾವುದೇ ಭೇದವಿಲ್ಲ ವೈಯಕ್ತಿಕವಾಗಿ ದೃತರಾಷ್ಟ್ರನಿಗಿರುವ ಆತ್ಮೀಯ ಸಂಬಂಧವನ್ನು ಹಾಗೂ ಮಗನ ಮನಸ್ಸನ್ನು ಪರಿವರ್ತಿಸಲು ನೀಡುವ ಸಮರ್ಥನೆಯನ್ನು ಈ ಮಾತು ಸ್ವಾರಸ್ಯವಾಗಿ ವಿವರಿಸುತ್ತದೆ.

2. "ಈ ಕಲಹಮುಂ ನಿನ್ನಿಂದ ಮಾಯ್ತೆಂದೊಡಿಂ ಮುನಿವೈ"

3. "ಪಗೆಗೆ ಕಣಿಯೊಂದುಂಟೆ"

4. "ಪಗೆಯುಂ ನಣ್ಪುಂಕಯ್ಕೊಂಕ ಕಜ್ಜದಿನಲ್ತೆ"

5. "ಪಗಲೆನಿತಾನುಂ ದೀವಿಗೆಗಳುರಿದೊಡೇಂ"

6. "ಪೆರ್ಮರನುಳಿವಂತೆ ನೀನುಳಿದೆ"

***ಹಕ್ಕಿ ಹಾರುತಿದೆ ನೋಡಿದಿರಾ.***

**1. 'ರಾಜ್ಯದ ಸಾಮ್ರಾಜ್ಯದ ತೆನೆ ಒಕ್ಕಿ'**

ಪ್ರಸ್ತುತ ವಾಕ್ಯವನ್ನು ದ.ರಾ.ಬೇಂದ್ರೆ ವಿರಚಿತ 'ಗರಿ' ಎಂಬ ಕವನಸಂಕಲನದಿಂದ ಆಯ್ದ "ಹಕ್ಕಿ ಹಾರುತಿದೆ ನೋಡಿದಿರಾ" ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಕವಿ ಬೇಂದ್ರೆಯವರು ಹೇಳುತ್ತಾರೆ. ಕಾಲವೆಂಬ ಪಕ್ಷಿಯ ಹಾರಾಟದಲ್ಲಿ ಎಷ್ಟೋ ರಾಜ್ಯ ಸಾಮ್ರಾಜ್ಯಗಳನ್ನು ದವಸ ಧಾನ್ಯಗಳನ್ನು ಶುದ್ಧೀಕರಿಸಿದಂತೆ ಒಕ್ಕಿ ಗಟ್ಟಿ ಸಾಮ್ರಾಜ್ಯಗಳು ಉಳಿದು ಜೊಳ್ಳು ಸತ್ವವಿಲ್ಲದ ರಾಜ್ಯಗಳು ತೂರಿಹೋದವು ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ. ರಾಜ್ಯ ಸಾಮ್ರಾಜ್ಯಗಳ ಅಳಿವು ಉಳಿವುಗಳನ್ನು ಕಾಲವೇ ನಿರ್ಧರಿಸುತ್ತದೆ. ಎಂಬ ಕವಿಯ ಭಾವ ಸ್ವಾರಸ್ಯ ಪೂರ್ಣವಾಗಿದೆ.

**2.** "ಸಾರ್ವ ಭೌಮರಾ ನೆತ್ತಿಯ ಕುಕ್ಕಿ"

**3.** "ಮನ್ವಂತರಗಳ ಭಾಗ್ಯವ ತೆರೆಸಿ"

**4.** "ಹೊಸಗಾಲದ ಹಸುಮಕ್ಕಳ ಹರಸಿ"

**ಹಲಗಲಿಯ ಬೇಡರು**

1. **"ಎಲ್ಲ ಜನರಿಗೆ ಚೋರಮಾಡಿ ಕಸಿದು ಕೊಳ್ಳಿರಿ ಹತಾರ".**

ಪ್ರಸ್ತುತ ವಾಕ್ಯವನ್ನು ಡಾ1 ಬಿ ಎಸ್. ಗದ್ದಿಗಿಮಠ ಅವರ ಕನ್ನಡ ಜನಪದಗೀತೆಗಳು ಎಂಬ ಕೃತಿಯಿಂದ ಆಯ್ದ ಹಲಗಲಿಯ ಬೇಡರು ಎಂಬ ಲಾವಣಿಯಿಂದ ಆರಿಸಿಕೊಳ್ಳಲಾಗಿದೆ

ಬ್ರಿಟೀಷ್ ಸರ್ಕಾರವು 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಭಾರತೀಯರ ಮೇಲೆ ನಿಶ್ಯಸ್ತ್ರೀಕರಣದ ಹುಕುಂ ಅನ್ನು ಹೊರಡಿಸಿತು. ಈ ಶಾಸನವನ್ನು ಪ್ರಕಾರ ಭಾರತೀಯರು ಕುಂಪಣಿ ಸರ್ಕಾರದ ಅನುಮತಿಯಿಲ್ಲದೇ ಆಯುಧಗಳನ್ನು ಹೊಂದುವಂತಿಲ್ಲ. ಈ ಶಾಸನವನ್ನು ವಿರೋದಿಸಿದವರಿಗೆ ಜೋರು ಮಾಡಿ ಒತ್ತಾಯದಿಂದಲಾದರೂ ಆಯುಧಗಳನ್ನು ವಶಪಡಿಸಿಕೊಳ್ಳಿ ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

2. "ಹೊಡೆದರೂ ಗುಂಡ ಕರುಣೆ ಇಲ್ಲದ್ಹಂಗ".

3. "ಜೀವ ಸತ್ತು ಹೋಗುವುದ ಗೊತ್ತ".

4. "ಕೆಟ್ಟು ವರ್ಣಿಸಿ ಹೇಳಿದೆ ಕಂಡಷ್ಟು".

**ವಚನಸೌರಭ**

1. **"ನಿಷ್ಠೆಯಿಲ್ಲದ ಭಕ್ತ ಪಟ್ಟಣದಲ್ಲಿದ್ದಡೂ ಅದು ನಟ್ಟಡವಿ".**

ಪ್ರಸ್ತುತ ವಾಕ್ಯವನ್ನು ಫ.ಗು.ಹಳಕಟ್ಟಿಯವರು ಸಂಪಾದಿಸಿರುವ ಜೇಡರದಾಸಿಮಯ್ಯರವರ ವಚನಗಳು ಎಂಬ ಕೃತಿಯಿಂದ ಆಯ್ದ ವಚನ ಸೌರಭ ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಜೇಡರ ದಾಸಿಮಯ್ಯ ರವರು ಭಕ್ತಿ ಮತ್ತು ನಿಷ್ಠೆಯ ಮಹತ್ವವನ್ನು ಕುರಿತು ಅಭಿಪ್ರಾಯಿಸುವಾಗ ಈ ಮಾತನ್ನು ಹೇಳುತ್ತಾರೆ. ನಿಷ್ಠೆಯುಳ್ಳ ಭಕ್ತ ಅಡವಿಯಲ್ಲಿದ್ದರೂ ಅವನು ಪಟ್ಟಣದಲ್ಲಿದ್ದಂತೆ. ನಿಷ್ಟೆಯಿಲ್ಲದ ಭಕ್ತನು ಪಟ್ಟಣದಲ್ಲಿದ್ದರೂ ದಟ್ಟಡವಿಯಲ್ಲಿದ್ದಂತೆ ಭಕ್ತಿಯ ಸಾಕಾರಕ್ಕೆ ನಿಷ್ಠೆಮುಖ್ಯ ದೃಢವಾದ ನಿಷ್ಠೆಯಿಂದ ಸಾಕ್ಷಾತ್ಕಾರವಾಗಬಲ್ಲದು ಎಂಬ ಅಂಶ ಸ್ವಾರಸ್ಯಕರವಾಗಿದೆ.

2. "ಸುಡು! ಸುಡು! ಮನವಿದು ವಿಷಯಕ್ಕೆ ಹರಿವುದು".

3. "ಹಲವು ಕೊಂಬೆ ಹಾಯುತಲಿದೆ".

4. "ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು".

**ವೀರಲವ**

1. **"ರಘೂದ್ವಹನ ಸೊಲ್ಲೇಳಿ ನಮಿಸಲ್"**

ಪ್ರಸ್ತುತ ವಾಕ್ಯವನ್ನು ಲಕ್ಷ್ಮೀಶ ವಿರಚಿತ ಶ್ರೀ ದೇವುಡು ನರಸಿಂಹಶಾಸ್ತ್ರೀ ಮತ್ತು ಬಿ. ಶಿವಮೂರ್ತಿ ಶಾಸ್ತ್ರೀ ಅವರು ಸಂಪಾದಿಸಿರುವ ಜೈಮಿನಿ ಭಾರತ ಕಾವ್ಯದಿಂದ

ಆಯ್ದ"ವೀರಲವ"ಪದ್ಯಪಾಠದಿಂದ ಆರಿಸಲಾಗಿದೆ.

ಶ್ರೀರಾಮನ ಅಶ್ವಮೇದ ಕುದುರೆ ವಾಲ್ಮೀಕಿಯ ನಿಜಾಶ್ರಮಕ್ಕೆ ಬಂದ ಸಂದರ್ಭದಲ್ಲಿ ಈ ಮಾತನ್ನು ಕವಿಯೇ ಪ್ರಸ್ತಾಪಿಸುತ್ತಾನೆ. ಶಕ್ತಿಶಾಲಿಯಾದ ದೊರೆಗಳು ಹೆದರಿಕೊಂಡು ರಘುವಂಶದ ಅರಸನಾದ ಶ್ರೀರಾಮನ ಹೆಸರನ್ನೇ ಕೇಳಿ ಆತನ ಯಜ್ಞಾಶ್ವವನ್ನು ತಡೆಯದೆ ನಮಿಸಿ, ಪೂಜಿಸಿ, ಕುದುರೆಯನ್ನು ತಡೆಯದೆ ಕಟ್ಟದೆ ಮುಂದೆ ಬಿಟ್ಟರು ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ ಶ್ರೀರಾಮನ ಬಗೆಗೆ ಇದ್ದ ಭಕ್ತಿ ಪೂರ್ವಕ ಗೌರವವು ಸೂಚ್ಯವಾಗಿ ಸ್ವಾರಸ್ಯಕರವಾಗಿದೆ.

2. "ತನ್ನ ಮಾತೆಯಂ ಸರ್ವಜನಮುಂ ಬಂಜೆಯೆನ್ನದಿರ್ದಪುದೆ".

3. ಅರಸುಗಳ ವಾಜಿಯಂ ಬಿಡು".

4. "ಜಾನಕಿಯು ಮಗನಿದಕೆ ಬೆದರುವನೆ?"

## ಪದ್ಯ ಸಾರಾಂಶ

ಪಗೆಗೆ ಕಣಿಯೊಂದುಂಟೇ ನಂಣ್ಪಿಂಗಮಾಗರ ಮುಂಟೆ ನೀಂ

ಬಗೆಯ ಪಗೆಯುಂ ನಂಣ್ಪುಂ ಕಯ್ಕೊಂಡ ಕಜ್ಜದಿನಲ್ತೆ ಪು

ಟ್ಟು ಗುಮರಸುಗಳ್ಗೆಂದೀ ಸಂದರ್ಥಶಾಸ್ತ್ರದೊಳೇಕೆ ಪೇಳ್

ಮಗನೆ ನೆಗಳ್ದೈ ಕಾರ್ಯಂ ಮಿತ್ರಾದಿಕಾರಕ ಮೆಂಬುದಂ

**"ಪ್ರಸ್ತುತ ಪದ್ಯ ಭಾಗವನ್ನು ಆದಿಕವಿ ಪಂಪ ವಿರಚಿತ ವಿಕ್ರಮಾರ್ಜುನ ವಿಜಯಂ ಕೃತಿಯಿಂದ ಆಯ್ದ ಎಮ್ಮ ನುಡಿಗೇಳ್ ಪದ್ಯಭಾಗದಿಂದ ಆರಿಸಲಾಗಿದೆ."**

ದುರ್ಯೋಧನನ ಹಠ ಹಾಗೂ ದ್ವೇಷದಿಂದಾಗಿ ನಡೆದ ಮಹಾಭಾರತ ಯುದ್ದದಲ್ಲಿ ತನ್ನ ತೊಂಭತ್ತೊಂಭತ್ತು ಮಕ್ಕಳನ್ನು ಕಳೆದುಕೊಂಡ ವೃದ್ದದಂಪತಿಗಳಾದ ದೃತರಾಷ್ಟ್ರ ಹಾಗೂ ಗಾಂಧಾರಿ ಉಳಿದಿರುವ ಒಬ್ಬ ಮಗನಾದರೂ ಬದುಕಲಿ ಎಂಬ ಉದ್ದೇಶದಿಂದಾಗಿ ರಣರಂಗಕ್ಕೆ ಒಂದು ದುರ್ಯೋಧನನಲ್ಲಿ ಪ್ರಾರ್ಥಿಸುವ ದೃಶ್ಯ ಹೃದಯ ವಿದ್ರಾವಕವಾಗಿದೆ.

ಹಗೆತನಕ್ಕೆ ಒಂದು ಗಣಿಯಿದೆಯೇನು? ಸ್ನೇಹಕ್ಕೆ ಒಂದು ನಮೆಯಿದೆಯೇನು? ರಾಗದ್ವೇಷಗಳೆರಡೂ ಅವರು ಅಂಗೀಕರಿಸುವ ಕಾರ್ಯದಿಂದಲ್ಲವೇ ಹುಟ್ಟುವುದು. ಅರ್ಥಶಾಸ್ತ್ರದಲ್ಲಿ ಹೇಳಿರುವಂತೆ ಕಾರ್ಯವೇ ಸ್ನೇಹ ದ್ವೇಷಗಳಿಗೆ ಕಾರಣವಾದುದು ಎಂಬ ನೀತಿಯನ್ನು ವೃದ್ದದಂಪತಿಗಳು ದುರ್ಯೋಧನನಿಗೆ ಹೇಳುವ ಮಾತು ಅತ್ಯಂತ ಮೌಲ್ಯಯುತವಾಗಿದೆ.

**ಹಕ್ಕಿ ಹಾರುತಿದೆ ನೋಡಿದಿರಾ**

ಕರಿನೆರೆ ಬಣ್ಣದ ಪುಚ್ಚಗಳುಂಟು
ಬಿಳಿಹೊಳೆಬಣ್ಣದ ಗರಿಗರಿಯುಂಟು
ಕೆನ್ನನ ಹೊನ್ನನ ಬಣ್ಣಬಣ್ಣಗಳ
ರೆಕ್ಕೆಗಳೆರಡೂ ಪಕ್ಕದಲುಂಟು
ಹಕ್ಕಿಹಾರುತಿದೆ ನೋಡಿದಿರಾ?

ಈ ಪದ್ಯಭಾಗವನ್ನು ದ.ರಾ.ಬೇಂದ್ರೆಯವರ ಹಕ್ಕಿಹಾರುತಿದೆ ನೋಡಿದಿರಾ ಎಂಬ ಪದ್ಯಪಾಠದಿಂದ ಆರಿಸಲಾಗಿದೆ. ಚಲನಶೀಲತೆ ಜೀವಂತಿಕೆಯ ಗುಣ ನಿಸರ್ಗದ ಹೊಂದಾನಿಕೆಯಂತೆ ಕಾಲ ಉರುಳುತ್ತದೆ. ಪ್ರತಿಯೊಬ್ಬ ಮಾನವನ ಬದುಕು ಬಾಲ್ಯ, ಯೌವ್ವನ ಮುದಿತನ'ವೆಂಬ ಅವಸ್ಥಾತ್ರಯದಿಂದ ಕೂಡಿದೆ. ಯೌವ್ವನ ಕರಿಬಣ್ಣವಾದರೆ, ಮುದಿತನ ನೆರೆಬಣ್ಣದ ಸಂಕೇತಗಳು ಈ ಎರಡೂ ಬಣ್ಣಗಳೂ ಕಾಲನೆಂಬ ಹಕ್ಕಿಯ ಪುಚ್ಚೆಗಳು ಬಿಳಿಹೊಳೆಬಣ್ಣವು ಶಾಂತಿಯ ಸಂಕೇತ ಹಳದಿ ಕೆಂಪು ಬಣ್ಣಗಳು ವೀರ ಮತ್ತು ತ್ಯಾಗದ ಪ್ರತೀಕವಾಗಿದೆ. ಇವೆರಡೂ ಬಣ್ಣಗಳು ಕಾಲನೆಂಬ ಹಕ್ಕಿಯ ಬಣ್ಣದ ರೆಕ್ಕೆಗಳು ಹೀಗೆ ಕಾಲವೆಂಬ ಹಕ್ಕಿಬಣ್ಣ ಬಣ್ಣದ ಗರಿ ಪುಕ್ಕ ರೆಕ್ಕೆಗಳಿಂದ ರಂಗು ರಂಗಾಗಿ ಹಾರಾಡುತ್ತಿದೆ.

ನೀಲ ಮೇಘ ಮಂಡಲ ಸಮಬಣ್ಣ
ಮುಗಿಲಿಗೆ ರೆಕ್ಕೆಗಳೊಡೆದವೊ ಅಣ್ಣಾ
ಚಿಕ್ಕೆಯ ಮಾಲೆಯ ಸಿಕ್ಕಿಸಿಕೊಂಡು
ಸೂರ್ಯ ಚಂದ್ರರನು ಮಾಡಿದೆ ಕಣ್ಣಾ
ಹಕ್ಕಿ ಹಾರುತಿದೆ ನೋಡಿದಿರಾ?

ಹಕ್ಕಿಯ ಹಾರುವಿಕೆ ಪ್ರಕೃತಿಯ ಸಹಜ ಕ್ರಿಯೆಯೊಂದಿಗೆ ಯುಗಗಳೇ ಉರುಳಿ ಹೊಸ'ತನಕ್ಕೆತೆರೆದುಕೊಳ್ಳುವ ಸಂಕೇತವೂ ಆಗಿದೆ ಎಂಬುದಾಗಿ ದ.ರಾ.ಬೇಂದ್ರೆಯವರು ತಿಳಿಸುತ್ತಾ, ನೀಲಿಯ ಬಣ್ಣದ ಮೇಘ ಮಾಲೆಗೆ ಅಥವಾ ಮಂಡಲಕ್ಕೆ ಸಮನಾದಬಣ್ಣ ಮುಗಿಲಿಗೆ ರೆಕ್ಕೆಗಳು ಮೂಡಿದವೋ ಎನ್ನುವಂಥ ನಕ್ಷತ್ರಗಳ ಮಾಲೆಯನ್ನೇ ಕಲೆಯಲ್ಲಿ ಸಿಕ್ಕಿಸಿಕೊಂಡು ಜಗತ್ತನ್ನು ಬೆಳಗುವ ಸೂರ್ಯ ಚಂದ್ರರನ್ನು ಕಣ್ಣುಗಳನ್ನಾಗಿ ಮಾಡಿಕೊಂಡು ಹಕ್ಕಿಹಾರುತಿದೆ. ಎಂಬುದಾಗಿ ಕವಿ ದ.ರಾ ಬೇಂದ್ರೆಯವರು ವಿವರಿಸುತ್ತಾರೆ.

ರಾಜ್ಯದ ಸಾಮ್ರಾಜ್ಯದ ತೆನೆ ಒಕ್ಕಿ
ಮಂಡಲ ಗಿಂಡಲಗಳ ಗಡಮುಕ್ಕಿ
ತೇಲಿಸಿ ಮುಳುಗಿಸಿ ಖಂಡ–ಖಂಡಗಳ
ಸಾರ್ವಭೌಮರ ನೆತ್ತಿಯ ಕುಕ್ಕಿ
ಹಕ್ಕಿ ಹಾರುತಿದೆ ನೋಡಿದಿರಾ?

ಕಾಲವೆಂಬ ಪಕ್ಷಿಯ ಹಾರಾಟದಲ್ಲಿ ಎಷ್ಟೋ ರಾಜ್ಯ ಸಾಮ್ರಾಜ್ಯಗಳನ್ನು ಒಕ್ಕಿ ಗಟ್ಟು ಸಾಮ್ರಾಜ್ಯಗಳು ಉಳಿದು ಜಳ್ಳುರಾಜ್ಯಗಳು ತೂರಿಹೋದವು. ಮಂಡಲ ಮಹಾಮಂಡಲಗಳ ಕೋಟೆ ಕೊತ್ತಲಗಳು ರಾಜ್ಯ ದಾಸೆಯಿಂದ ಗಬಗಬನೆ ಮುಕ್ಕಲ್ಪಟ್ಟವು. ಅನೇಕ ಖಂಡ ಖಂಡಗಳ ಸಾರ್ವಭೌಮರ ನೆತ್ತಿಯನ್ನು ಕುಕ್ಕಿ ಖಂಡಗಳು ಸಾಗರಗಳಲ್ಲಿ ಮುಳುಗಿದವು ತೇಲಿದವು ಎಂಬುದಾಗಿ ಕವಿ ದ.ರಾಬೇಂದ್ರೆಯವರು ತಮ್ಮ ಕವನದಲ್ಲಿ ವಿವರಿಸಿದ್ದಾರೆ.

**ಸಂಕಲ್ಪಗೀತೆ**

ಬಿದ್ದುದನ್ನು ಮೇಲೆಬ್ಬಿಸಿ ನಿಲ್ಲಿಸಿ,
ಹೊಸ ಬರವಸೆಗಳ ಕಟ್ಟೋಣ
ಮನುಜರ ನಡುವಣ ಅಡ್ಡಗೋಡೆಗಳ
ಕೆಡುವುತ ಸೇತುವೆಯಾಗೋಣ

ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಐತಿಹಾಸಿಕವಾಗಿ, ನೈತಿಕವಾಗಿ ಬಿದ್ದಿರುವುದನ್ನು ಮೇಲೆಬ್ಬಿಸಿ, ಹೊಸ ಭರವಸೆಗಳನ್ನು ತುಂಬುವುದರ ಮೂಲಕ ನವಶಕ್ತಿಯನ್ನು ಪಡೆಯಬೇಕು. ಹೊಸ ಭರವಸೆಯಿಂದ ಸಮಾಜವನ್ನು ಕಟ್ಟಬೇಕಿದೆ. ಹೊಸ ಭರವಸೆಗಳ ಮೂಲಕ ಮನುಷ್ಯರ ನಡುವಿನ ಆಂತರಿಕ ಅಡ್ಡಗೋಡೆಗಳನ್ನು ಕೆಡುವುತ ಮನುಜ ಮನುಜರ ನಡುವೆ ಸೇತುವೆಯಾಗಬೇಕಿದೆ ಎಂಬುದಾಗಿ ಕವಿ. ಜಿ.ಎಸ್. ಶಿವರುದ್ರಪ್ಪರವರು ತಮ್ಮ ಕವನದಲ್ಲಿ ವಿವರಿಸಿದ್ದಾರೆ.

ಮತಗಳೆಲ್ಲವೂ ಪಥಗಳು ಎನ್ನವ
ಹೊಸ ಎಚ್ಚರದೊಳು ಬದುಕೋಣ
ಭಯ ಸಂಶಯದೊಳು ಕಂದಿದ ಕಣ್ಣೊಳು
ನಾಳಿನ ಕನಸನು ಬಿತ್ತೋಣ

ಮತಗಳು ದೇಶದ ವ್ಯಕ್ತಿಯ ಸಮಗ್ರ ಅಭಿವೃದ್ದಿಗೆ ಮಾರಕವಾಗಬಾರದು ಎಲ್ಲಾ ಮತಗಳು ಪ್ರತಿಯೊಬ್ಬ ವ್ಯಕ್ತಿಯ ಪ್ರಗತಿಗೆ ವಿಕಾಸಕ್ಕೆ ಪಥಗಳು ಎಂಬ ಹೊಸ ಎಚ್ಚರದಿಂದ ಬದುಕಬೇಕು ವ್ಯಕ್ತಿಯಲ್ಲಿರುವ ಭಯವನ್ನು ಸಂಶಯದಿಂದ ಕುಡಾದ ಕಣ್ಣಿನಲ್ಲಿ ಕಮರಿದ ಕಣ್ಣಿನಲ್ಲಿ ನಾಳಿನ ಕನಸನು ಬಿತ್ತುವ ಆಶಾಜ್ಯೋತಿಯಾಗಬೇಕು. ಅಂತಹ ಕನಸನ್ನು ಪ್ರತಿಯೊಬ್ಬರ ಎದೆಯೊಳದಲ್ಲಿ ಚಿತ್ತಬೇಕು ಎಂಬುದಾಗಿ ಜಿ.ಎಸ್.ಶಿವರುದ್ರಪ್ಪ ರವರು ತಮ್ಮ ಸಂಕಲ್ಪಗೀತೆ ಎಂಬ ಕವನದಲ್ಲಿ ವಿವರಿಸಿದ್ದಾರೆ.

# ವ್ಯಾಕರಣಾಂಶಗಳು

## ಕನ್ನಡ ವರ್ಣಮಾಲೆ

| | | |
|---|---|---|
| ಸ್ವರಗಳು | 13 | |
| ಯೋಗವಾಹಕಗಳು | 2 | |
| ವರ್ಗೀಯ ವ್ಯಂಜನಗಳು | 25 | |
| ಅವರ್ಗೀಯ ವ್ಯಂಜನಗಳು | 9 | |
| ಒಟ್ಟು | 49 | ಅಕ್ಷರಗಳು |

**ಸ್ವರಗಳು :–** ಸ್ವತಂತ್ರವಾಗಿ ಉಚ್ಚರಿಸಲ್ಪಡುವ ಅಕ್ಷರಗಳು ಅ ಆ ಇ ಈ ಉ ಊ ಋ ಎ ಏ ಐ ಒ ಓ ಔ. ಸ್ವರಗಳಲ್ಲಿ 2 ವಿಧಗಳಿವೆ.

1) ಹ್ರಸ್ವಸ್ವರ 2) ದೀರ್ಘಸ್ವರ

**ಹ್ರಸ್ವಸ್ವರ :–** ಒಂದು ಮಾತ್ರಾಕಾಲದಲ್ಲಿ ಉಚ್ಚರಿಸಲ್ಪಡುವ ಅಕ್ಷರಗಳು

ಅ ಇ ಉ ಋ ಎ ಒ

**ದೀರ್ಘಸ್ವರ :–** ಎರಡು ಮಾತ್ರಾಕಾಲದಲ್ಲಿ ಉಚ್ಚರಿಸಲ್ಪಡುವ ಅಕ್ಷರಗಳು.

ಆ ಈ ಊ ಏ ಐ ಓ ಔ

**ಯೋಗವಾಹಕಗಳು :–** 1) ಅನುಸ್ವಾರ – ಅಂ 2) ವಿಸರ್ಗ–ಅಃ

**ವರ್ಗೀಯ ವ್ಯಂಜನಗಳು :–**

ಕ್ ಖ್ ಗ್ ಘ್ ಙ್
ಚ್ ಛ್ ಜ್ ಝ್ ಞ್
ಟ್ ಠ್ ಡ್ ಢ್ ಣ್
ತ್ ಥ್ ದ್ ಧ್ ನ್
ಪ್ ಫ್ ಬ್ ಭ್ ಮ್

**ವರ್ಗೀಯ ವ್ಯಂಜನಗಳು 3 ವಿಧಗಳಿವೆ.**

1) **ಅಲ್ಪ ಪ್ರಾಣಾಕ್ಷರಗಳು :–** ಸ್ವಲ್ಪ ಉಸಿರನ್ನು ತೆಗೆದುಕೊಂಡು ಹೇಳುವ ಅಕ್ಷರಗಳು
ವರ್ಗದ 1 ಮತ್ತು 3ನೇ ಅಕ್ಷರಗಳು
ಉದಾ :– ಕ್, ಗ್, ಚ್.ಜ್ – – – – –

2) **ಮಹಾಪ್ರಾಣಾಕ್ಷರಗಳು :–** ಹೆಚ್ಚು ಉಸಿರನ್ನು ತೆಗೆದುಕೊಂಡು ಹೇಳುವ ಅಕ್ಷರಗಳು
ವರ್ಗದ 2 ಮತ್ತು 4ನೇ ಅಕ್ಷರಗಳು
ಉದಾ :– ಖ್, ಘ್, ಛ್, ಝ್ – – – – –

3) **ಅನುನಾಸಿಕ ಅಕ್ಷರಗಳು :–** ಮೂಗಿನ ಸಹಾಯದಿಂದ ಉಚ್ಚರಿಸುವ ಅಕ್ಷರಗಳು
ವರ್ಗದ 5ನೇ ಅಕ್ಷರಗಳು
ಉದಾ :– ಙ, ಞ, ಣ, ನ, ಮ

**ಅವರ್ಗೀಯ ವ್ಯಂಜನಗಳು :–**

ಯ, ರ, ಲ, ವ, ಶ, ಹ, ಸ, ಹ, ಳ

## ನಾಮಪದಗಳು :–

ಒಬ್ಬ ವ್ಯಕ್ತಿ, ಸ್ಥಳ ವಸ್ತು ಮುಂತಾದ ಹೆಸರನ್ನು ತಿಳಿಸುವ ಪದ

**ನಾಮಪದಗಳ ವಿಧಗಳು**

1. ವಸ್ತುವಾಚಕ
2. ಗುಣವಾಚಕ
3. ಪರಿಮಾಣವಾಚಕ
4. ದಿಗ್ವಾಚಕ
5. ಪ್ರಕಾರವಾಚಕ
6. ಸಂಖ್ಯಾವಾಚಕ
7. ಸಂಖ್ಯೇಯವಾಚಕ
8. ಭಾವನಾಮಗಳು
9. ಸರ್ವನಾಮಗಳು

1. **ವಸ್ತುವಾಚಕ :–** ವಸ್ತುವಾಚಕವನ್ನು ಸೂಚಿಸುವ ಪದ. ಇದರಲ್ಲಿ 3 ವಿಧಗಳಿವೆ

   1. ರೂಢನಾಮ 2. ಅಂಕಿತನಾಮ 3. ಅನ್ವರ್ಥನಾಮ

   1. **ರೂಢನಾಮ:–** ರೂಢಿಯಿಂದ ಬಂದಿರುವ ಪದಗಳು

      ಉದಾ; ನದಿ, ಪರ್ವತ, ಹುಡುಗ, – – – – –

   2. **ಅಂಕಿತನಾಮ :–** ವ್ಯಕ್ತಿ ಸ್ಥಳ, ಪ್ರಾಣಿಗಳನ್ನು ಗುರುತಿಸಲು ಇಟ್ಟು ಕೊಂಡಿರುವ ಪದಗಳು ಅಂದರೆ ವಸ್ತುವಿನ ಬೇರೆ ಬೇರೆ ಹೆಸರನ್ನು ಸೂಚಿಸುವುದು / ವ್ಯವಹಾರದ ಉಪಯೋಗಕ್ಕೆ ಇಟ್ಟುಕೊಂಡ ಹೆಸರು

      ಉದಾ : ರಾಮ, ಕೃಷ್ಣ, ಅಮೃತ – – – – –

   3. **ಅನ್ವರ್ಥನಾಮ :–** ಒಂದು ವಸ್ತುವಿನ, ವ್ಯಕ್ತಿಯ ಸ್ವಭಾವ ನಡವಳಿಕೆ, ಗುಣಲಕ್ಷಣಗಳನ್ನು ಗುರುತಿಸಲು ಬಳಸುವ ಪದ

      ಉದಾ ಕುಂಟ, ಕುರುಡ, ಎಳವ, ವಿದ್ಯಾರ್ಥಿ, ಶಿಕ್ಷಕ, ಮುಖ್ಯಮಂತ್ರಿ, ನ್ಯಾಯಾಧೀಶ, – – – – –

**ಗುಣವಾಚಕ :–** ಒಂದು ವಸ್ತುವಿನ ಗುಣವನ್ನು ತಿಳಿಸುವ ಪದ

ಉದಾ : ಒಳ್ಳೆಯ ಹುಡುಗ, ಕರಿನಾಯಿ, ಬಿಳಿಕುದರೆ, ಕಳ್ಳಬೆಕ್ಕು – – – – –

**ಪರಿಮಾಣವಾಚಕ :–** ವಸ್ತುವಿನ ಅಳತೆಯನ್ನು ಸೂಚಿಸುವ ಪದ

ಉದಾ : ಅಷ್ಟು, ಇಷ್ಟು, ಹೆಚ್ಚು, ಕಡಿಮೆ, ಉದ್ದ, ದಪ್ಪ – – – – –

**ದಿಗ್ವಾಚಕ :–** ದಿಕ್ಕುಗಳನ್ನು ಸೂಚಿಸುವ ಪದಗಳು

ಉದಾ : ಪೂರ್ವ, ಪಶ್ಚಿಮ, ಮೂಡಲ ತೆಂಕಣ – – – – –

**ಪ್ರಕಾರವಾಚಕ :–** ವಸ್ತುವಿನ ಸ್ಥಿತಿ, ರೀತಿಗಳನ್ನು ತಿಳಿಸುವ ಪದಗಳು

ಉದಾ : ಅಂತಹ, ಇಂತಹ, ಎಂತಹ – – – – –

**ಸಂಖ್ಯಾವಾಚಕ :–** ಸಂಖ್ಯೆಗಳನ್ನು ಸೂಚಿಸುವ ಪದಗಳು

ಉದಾ ; ಒಂದು, ಎರಡು, ಷಟ್ಪದಿ, ನಾಲ್ಕು – – – – –

**ಸಂಖ್ಯೇಯವಾಚಕ :–** ಲೆಕ್ಕದ ಸಂಖ್ಯೆಯಿಂದ ಕೂಡಿದ ವಸ್ತುಗಳು

ಉದಾ ; ಒಂದನೆಯ, ಎರಡನೆಯ, ಐದನೆಯ, ಹತ್ತನೆಯ....

**ಸರ್ವ ನಾಮಪದಗಳು :–** ನಾಮಪದಗಳಿಗೆ ಬದಲಾಗಿ ಹೇಳುವ ಪದಗಳು

ಉದಾ : ಅವನು, ಅವಳು ಅದು – – – – –

ಸರ್ವನಾಮಪದಗಳಲ್ಲಿ 4 ವಿಧಗಳಿವೆ

1. **ಪುರುಷ ವಾಚಕ ಸರ್ವನಾಮ :–**

| | **ಏಕವಚನ** | **ಬಹುವಚನ** |
|---|---|---|
| ಪ್ರಥಮ ಪುರುಷ | ಅವನು, ಅವಳು, ಅದು | ಅವರು, ಅವು |
| ಮಧ್ಯಮ ಪುರುಷ | ನೀನು | ನೀವು |
| ಉತ್ತಮ ಪುರುಷ | ನಾನು | ನಾವು |

2. **ಪ್ರಶ್ನಾರ್ಥಕ ಸರ್ವನಾಮ :–**

ಪ್ರಶ್ನೆಗಳನ್ನು ಕೇಳುವುದರಿಂದ ಪ್ರಶ್ನಾರ್ಥಕ ಸರ್ವನಾಮ ಎನಿಸುವುದು

ಉದಾ : ಯಾರು ಅವಳು?

ಯಾವ ಊರು ನಿನ್ನದು ?

3. **ಆತ್ಮಾರ್ಥಕ ಸರ್ವನಾಮ :–**

ತಾವು– ತಾನು ಎಂಬ ರೂಪಗಳು ಆತ್ಮಾರ್ಥಕ ಸರ್ವನಾಮ ಎನಿಸುವುವು

ಉದಾ :– ತಾನು, ತಾವು

ಅವನು ತನ್ನ ಪಾಡಿಗೆ ತಾನು ಹೋದನು

**ಭಾವನಾಮಗಳು :–** ವಸ್ತು ಮತ್ತು ಕ್ರಿಯೆಯ ಭಾವವನ್ನು ತಿಳಿಸುವ ಶಬ್ದಗಳು

ಬಿಳಿಯದರ ಭಾವ – ಬಿಳಿಪು
ಹಿರಿಯದರ ಭಾವ – ಹಿರಿದು
ಕರಿಯದರ ಭಾವ – ಕಪ್ಪು
ನೋಡುವುದರ ಭಾವ – ನೋಟ
ಮಾಡುವುದರ ಭಾವ – ಮಾಟ
ಉಣ್ಣುವುದರ ಭಾವ – ಊಟ
ಕೂಡುವುದರ ಭಾವ – ಕೂಟ

## ಕ್ರಿಯಾಪದ

ಕ್ರಿಯೆಯನ್ನು ತಿಳಿಸುವ ಪದಗಳೇ ಕ್ರಿಯಾಪದಗಳು ಮಾಡುತ್ತಾನೆ, ನೋಡುತ್ತಾನೆ, ಹುಟ್ಟಿದನು, ಬರುವುದು----

**ಕ್ರಿಯಾಧಾತು :–** ಕ್ರಿಯಾಪದದ ಮೂಲರೂಪವೇ ಕ್ರಿಯಾಧಾತು

ಉದಾ : ಮಾಡುತ್ತಾನೆ – ಮಾಡು
ಬರುವಳು – ಬರು
ನೋಡುತ್ತಾನೆ – ನೋಡು

**ಸಕರ್ಮಕ :–**

ಅರ್ಥ ಪೂರ್ತಿಯಾಗಿ ಕರ್ಮಪದವನ್ನು ಅಪೇಕ್ಷಿಸುವ ಕ್ರಿಯಾಪದಕ್ಕೆ ಸಕರ್ಮಕ ಎನ್ನುವರು

ಉದಾ : ಹುಡುಗಿ ಪಾತ್ರೆಯನ್ನು ತೊಳೆಯುತ್ತಾಳೆ
ಹಸು ಹಾಲನ್ನು ಕೊಡುತ್ತದೆ

**ಅಕರ್ಮಕ :–**

ಕರ್ಮ ಪದವಿಲ್ಲದೆಯೇ ಪೂರ್ಣವಾದ ಅರ್ಥವನ್ನು ಕೊಡುವ ಕ್ರಿಯಾಪದಕ್ಕೆ ಅಕರ್ಮಕ ಕ್ರಿಯಾಪದ ಎನ್ನುವರು

ಉದಾ : ರಾಮನು ಓಡುತ್ತಾನೆ
ಮಗು ಹುಟ್ಟಿತು.

**ಕ್ರಿಯಾಪದದ ರೂಪಗಳು :–** ಇದರಲ್ಲಿ 3 ರೀತಿಯಿದೆ.

1. ವಿಧ್ಯರ್ಥಕ ರೂಪ 2) ಸಂಭವನಾರ್ಥಕ ರೂಪ 3) ನಿಷೇದಾರ್ಥಕ ರೂಪ

1) **ವಿಧ್ಯರ್ಥಕ ರೂಪ :–** ಆಜ್ಞೆ, ಆಶೀರ್ವಾದ, ಹಾರೈಕೆ, ಮುಂತಾದ ಸಂದರ್ಭಗಳಲ್ಲಿ ಬಳಕೆಯಾಗುವ ಪದಗಳನ್ನು ವಿಧ್ಯರ್ಥಕ ರೂಪ ಎನ್ನುವರು.

ಉದಾ : ಬರೆಯಲಿ, ನೋಡಲಿ, ಮಾಡಲಿ, ಶುಭವಾಗಲಿ ----------

2) **ಸಂಭವನಾರ್ಥಕ ರೂಪ :–** ಕ್ರಿಯೆಯು ನಡೆಯುವಲ್ಲಿ ಸಂಶಯವನ್ನು ಸೂಚಿಸುವ ಕ್ರಿಯಾಪದಗಳಿಗೆ ಸಂಭವನಾರ್ಥಕ ಕ್ರಿಯಾಪದ ಎನ್ನುವರು.
   ಉದಾ : ಬರೆದಾನು, ಬಂದಾನು ---------
3) **ನಿಷೇಧಾರ್ಥಕ ರೂಪ :–** ಕ್ರಿಯೆಯು ನಡೆದಿಲ್ಲ ಎಂದು ಸೂಚಿಸುವ ಕ್ರಿಯಾಪದಗಳಿಗೆ ನಿಷೇಧಾರ್ಥಕ ಕ್ರಿಯಾಪದ ಎನ್ನುವರು
   ಉದಾ : ಬರನು, ನೋಡನು, ತಿನ್ನನು --------

## ವಿಭಕ್ತಿ ಪ್ರತ್ಯಯಗಳು

ವಾಕ್ಯದಲ್ಲಿ ಪ್ರಯೋಗವಾಗುವ ನಾಮಪದ ಹಾಗೂ ವಾಕ್ಯಾರ್ಥಕ್ಕೆ ಸಂಬಂಧ ಕಲ್ಪಿಸಿ ಕೊಡುವ ಪ್ರತ್ಯಯ ರೂಪಗಳೇ ವಿಭಕ್ತಿ ಪ್ರತ್ಯಯಗಳು

### ವಿಭಕ್ತಿ ಕಾರಕಾರ್ಥಗಳು – ಪ್ರತ್ಯಯ – ನಾಮಪದ ಕೋಷ್ಟಕ

| ವಿಭಕ್ತಿಗಳು | ಕಾರಕಾರ್ಥಗಳು | ವಿಭಕ್ತಿ ಪ್ರತ್ಯಯಗಳು | | ಉದಾ | |
|---|---|---|---|---|---|
| | | ಹೊಸಗನ್ನಡ | ಹಳೆಗನ್ನಡ | ಹೊಸಗನ್ನಡ | ಹಳೆಗನ್ನಡ |
| ಪ್ರಥಮ | ಕತ್ರಾರ್ಥ | ಉ | ಮ್ | ರಾಮನು | ರಾಮಮಂ |
| ದ್ವಿತೀಯ | ಕರ್ಮಾರ್ಥ | ಅನ್ನು | ಅಮ್ | ರಾಮನನ್ನು | ರಾಮನಂ |
| ತೃತೀಯ | ಕರಣಾರ್ಥ | ಇಂದ | ಇಂ,ಇಂದಂ | ರಾಮನಿಂದ | ರಾಮನಿಂದಂ |
| ಚತುರ್ಥಿ | ಸಂಪ್ರದಾನ | ಗೆ,ಕೆ | ಗೆ,ಕೆ | ರಾಮನಿಗೆ | ರಾಮನಿಗೆ |
| ಪಂಚಮಿ | ಅಪದಾನ | ದೆಸೆಯಿಂದ | ಅತ್ತಣಿಂ | ರಾಮನದೆಸೆಯಿಂದ | ರಾಮನತ್ತಣಿಂ |
| ಷಷ್ಠಿ | ಸಂಬಂಧ | ಅ | ಅ | ರಾಮನ | ರಾಮನ |
| ಸಪ್ತಮಿ | ಅಧಿಕರಣ | ಅಲ್ಲಿ | ಒಳ್ | ರಾಮನಲ್ಲಿ | ರಾಮನೊಳ್ |

**ಅನ್ಯ ದೇಶೀಯ ಪದಗಳು :**

**ಗ್ರೀಕ್ ಮತ್ತು ರೋಮನ್ ಭಾಷೆ ಪದಗಳು** : ದಮ್ಮಡಿ, ದಮಡಿ, ದಮ್ಮು, ದೀನಾರ, ಗದ್ಯಾಣ
**ಅರಬ್ಬೀ ಪದಗಳು** : ಅಮಾನತು, ಅಸಲು, ಇನಾಮು, ಕಾಯ್ದೆ, ಗಲೀಜು, ತಕರಾರು, ತರಬೇತು, ನಕಲಿ
**ಪರ್ಷಿಯನ್ ಪದಗಳು** : ದಿವಾನ, ಅಜಮಾಯಿಸಿ
**ಪೋರ್ಚುಗೀಸ್ ಪದಗಳು** : ಮೇಜು, ತಂಬಾಕು, ಅನಾನಸು, ಸಾಬೂನು, ಆಸ್ಪತ್ರೆ, ಚೊಂಬು, ಚಾ, ಇಸ್ತ್ರಿ, ರಸೀದಿ
**ಸಂಸ್ಕೃತ** : ಪ್ರೌಢ, ಶಿಕ್ಷಣ
**ಉರ್ದು ಪದಗಳು** : ಕಿಮ್ಮತ್ತು, ತಾರೀಖು, ತಾಲ್ಲೂಕು, ಅಹವಾಲು, ಇಲಾಖೆ, ದರ್ಜೆ, ಬಂದೂಕು, ರುಜು, ಶುರು, ಶಾಮೀಲು
**ಹಿಂದುಸ್ಥಾನಿ ಪದಗಳು** : ಅರ್ಜಿ, ಕಛೇರಿ, ಕಾರ್ಖಾನೆ, ಸಲಾಮು, ದರ್ಬಾರು, ಕುರ್ಚಿ, ಕಾಗದ, ಹುಕುಂ
**ಇಂಗ್ಲೀಷ್ ಪದಗಳು** : ಬಸ್ಸು, ಕಾರು, ಕಾಲೇಜು, ಲೈಟು, ಪೆನ್ನು, ಸ್ಯಾನಿಟರಿ, ಡಿಪ್ಲೋಮೋ, ಸೋಪು

# <u>ತತ್ಸಮ – ತದ್ಭವ</u>

ಹಲವಾರು ಸಂಸ್ಕೃತ ಪದಗಳು ಕನ್ನಡಕ್ಕೆ ಬರುವಾಗ ಯಾವ ರೀತಿಯ ಬದಲಾವಣೆಗೂ ಒಳಗಾಗದೇ ಯಥಾ ಸ್ಥಿತಿಯಲ್ಲಿ ಬಂದು ಸೇರಿಕೊಂಡರೆ ಅವುಗಳು ತತ್ಸಮ ಎನ್ನುವರು.

ಸಂಸ್ಕೃತ ಶಬ್ದಗಳು ಕನ್ನಡಕ್ಕೆ ಬರುವಾಗ ಅಲ್ಪಸ್ವಲ್ಪ ಬದಲಾವಣೆ ಹೊಂದಿ ಆ ಪದದಿಂದ ಬರುವ ಪದವನ್ನು ತದ್ಭವ ಎನ್ನುವರು.

ಕನ್ನಡದಲ್ಲಿ ಬಳಕೆಯಾಗುವ ಸಂಸ್ಕೃತದ ಮೂಲರೂಪ ಪದಗಳನ್ನು ತತ್ಸಮಗಳೆಂದೂ ಅದರಿಂದ ಹುಟ್ಟಿದ ರೂಪವನ್ನು ತದ್ಭವಗಳೆಂದು ಕರೆಯುವರು

## <u>ಪಠ್ಯ ಪುಸ್ತಕದಲ್ಲಿರುವ ತತ್ಸಮ–ತದ್ಭವ ಪದಗಳು</u>

**ತತ್ಸಮ – ತದ್ಭವ**

| | | | | | |
|---|---|---|---|---|---|
| ವೀರ | – | ಬೀರ | ಚಂದ್ರ | – | ಚಂದಿರಾ |
| ಯಜ್ಞ | – | ಜನ್ನ | ಸೊಧೆ | – | ಸುಧೆ |
| ವಂದ್ಯಾ | – | ಬಂಜೆ | ಅಮರ್ದು | – | ಅಮೃತ |
| ವರ್ಷ | – | ವರುಷ | ಕಾರ್ಯ | – | ಕಜ್ಜ |
| ಶ್ರೀ | – | ಸಿರಿ | ಪಕ್ಷಿ | – | ಹಕ್ಕಿ |
| ರಾಜ | – | ರಾಯ | ಬ್ರಹ್ಮ | – | ಬೊಮ್ಮ |
| ಭಕ್ತ | – | ಭಕುತ | ದೀವಿಗೆ | – | ದೀಪಿಕಾ |
| ವಿಜ್ಞಾಪನೆ | – | ಭಿನ್ನಹ | ಪುಣ್ಯ | – | ಹುನ್ಯ |
| ದೆಸೆ | – | ದಿಶಾ | ಕಣಿ | – | ಗಣಿ |

## <u>ಸಂಧಿಗಳು</u>

ಎರಡು ಪದಗಳು ಕಾಲವಿಳಂಬವಿಲ್ಲದೇ ಅರ್ಥಕೆಡದಂತೆ ಸೇರಿ ಒಂದು ಪದವಾಗುವುದಕ್ಕೆ ಸಂಧಿ ಎನ್ನುವರು

ಸಂಧಿಗಳಲ್ಲಿ 2 ವಿಧಗಳಿವೆ : 1) ಕನ್ನಡಸಂಧಿಗಳು
2) ಸಂಸ್ಕೃತಸಂಧಿಗಳು

ಕನ್ನಡ ಸಂಧಿಗಳು :– 1. ಲೋಪಸಂಧಿ 2. ಆಗಮಸಂಧಿ 3. ಆದೇಶಸಂಧಿ

**<u>ಲೋಪಸಂಧಿ:–</u>**

ಸಂಧಿ ಕಾರ್ಯ ನಡೆಯುವಾಗ ಪೂರ್ವಪದದ ಕೊನೆಯಲ್ಲಿನ ಸ್ವರಾಕ್ರ ಬಿಟ್ಟು ಹೋದರೆ ಅದು ಲೋಪಸಂಧಿ ಎನಿಸುತ್ತದೆ.

ಉದಾ : ನಾವು + ಎಲ್ಲಾ = ನಾವೆಲ್ಲ
ಬೇರೆ + ಒಂದು = ಬೇರೊಂದು

**<u>ಆಗಮಸಂಧಿ</u>**

ಸಂಧಿಕಾರ್ಯ ನಡೆಯುವಾಗ ಉತ್ತರಪದ ಮೊದಲಕ್ಷರ ಸ್ವರಕ್ಕೆ ಬದಲಾಗಿ 'ಯ' ಅಥವಾ 'ವ' ಅಕ್ಷರಗಳು ಬಂದರೆ ಅದು ಆಗಮಸಂಧಿ ಎನಿಸುತ್ತದೆ

ಉದಾ : ಮರ + ಅನ್ನು = ಮರವನ್ನು
ಮನೆ + ಅನ್ನು = ಮನೆಯನ್ನು

**<u>ಆದೇಶಸಂಧಿ :–</u>**

ಸಂಧಿಕಾರ್ಯ ನಡೆಯುವಾಗ ಉತ್ತರಪದ ಕ,ತ,ಪ,ಗಳಿಗೆ ಗ,ದ,ಬ ಗಳು ಬಂದರೆ ಅದು ಆದೇಶಸಂಧಿ ಎನಿಸುತ್ತದೆ.

ಉದಾ : ಮಳೆ + ಕಾಲ = ಮಳೆಗಾಲ
ತಲೆ + ತೋರು = ತಲುದೋರು
ಕಣ್ + ಪನಿ = ಕಂಬನಿ

**<u>ಸಂಸ್ಕೃತ ಸಂಧಿಗಳು :–</u>**

1) ಸವರ್ಣದೀರ್ಘಸಂಧಿ 2) ಗುಣಸಂಧಿ 3) ವೃದ್ಧಿಸಂಧಿ 4) ಯಣ್‌ಸಂಧಿ 5) ಶ್ಚುತ್ವಸಂಧಿ 6) ಜಸ್ತ್ವಸಂಧಿ 7) ಅನುನಾಸಿಕ ಸಂಧಿ

**1) ಸವರ್ಣದೀರ್ಘಸಂಧಿ :–** ಒಂದೇ ಜಾತಿಯ ಸ್ವರಗಳು ಪರಸ್ಪರಗಳು ಪರವಾಗಿ ಅದೇ ಅಕ್ಷರ ದೀರ್ಘವಾಗಿ ಬಂದರೆ ಅದು ಸವರ್ಣದೀರ್ಘಸಂಧಿ ಎನಿಸುತ್ತದೆ. ಉದಾ :– ದೇವ + ಆಲಯ = ದೇವಾಲಯ

ರವಿ + ಇಂದ್ರ = ರವೀಂದ್ರ

ಗುರು + ಉಪದೇಶ = ಗುರೂಪದೇಶ

**2) ಗುಣಸಂಧಿ :–** ಅ, ಆ, ಕಾರಗಳ ಮುಂದೆ ಇ, ಈ ಕಾರಬಂದರೆ ಏ ಕಾರವೂ ಉ ಊ ಕಾರ ಬಂದಾಗ ಓ ಕಾರವೂ ಋ ಕಾರಬಂದಾಗ ಆರ್ ಕಾರವು ಆದೇಶವಾಗಿ ಬಂದರೆ ಗುಣಸಂದಿ ಎನಿಸುತ್ತದೆ.

ಉದಾ :ದೇವ + ಈಶ = ದೇವೇಶ

ಸೂರ್ಯ + ಉದಯ = ಸೂರ್ಯೋದಯ

ಮಹ + ಋಷಿ = ಮಹರ್ಷಿ

**3) ವೃದ್ಧಿಸಂಧಿ :–** ಅ, ಆ , ಕಾರಗಳ ಮುಂದೆ ಏ ಐ ಕಾರ ಬಂದಾಗ ಐ ಕಾರವೂ ಓ ಔ ಕಾರ ಬಂದಾಗ ಔ ಕಾರವು ಆದೇಶವಾಗಿ ಬಂದರೆ ವೃದ್ದಸಂಧಿ ಎನಿಸುತ್ತದೆ.

ಉದಾ ; ಏಕ + ಏಕ = ಏಕೈಕ

ಶಿವ + ಐಕ್ಯ = ಶಿವೈಕ್ಯ

ಮಹ + ಔನ್ನತ್ಯ = ಮಹೌನ್ನತ್ಯ

**4) ಯಣ್‌ಸಂಧಿ :–** ಸ್ವರದ ಮುಂದೆ ಸ್ವರ ಪರವಾದಾಗ ಯ,ವ,ರ ಅಕ್ಷರಗಳು ಆದೇಶವಾದಲ್ಲಿ ಅದು ಯಣ್‌ಸಂಧಿ ಎನಿಸುತ್ತದೆ. ಉದಾ : ಇತಿ + ಆದಿ = ಇತ್ಯಾದಿ

ಮನು + ಅಂತರ = ಮನ್ವಂತರ

ಪಿತೃ + ಅಜಿತ = ಪಿತ್ರಾರ್ಜಿತ

**5) ಶ್ಚುತ್ವಸಂಧಿ :–** ಪೂರ್ವಪದದ ಮೊದಲಲ್ಲಿ ಕ್ರಮವಾಗಿ ಶಕಾರವಾಗಲೀ ಚ ವರ್ಗ ವಾಗಲೀ ಬಂದರೆ, ಶಕಾರ ಚಹಾರಗಳು ಆದೇಶವಾಗಿ ಬಂದರೆ ಅದು ಶ್ಚುತ್ವ ಸಂಧಿ ಎನಿಸುತ್ತದೆ.

ಉದಾ : ಮನಸ್ + ಶುದ್ದಿ = ಮನಶ್ಶುದ್ದಿ

ಯಶಸ್ + ಚಂದ್ರ = ಯಶಶ್ಚಂದ್ರ

**6) ಜಸ್ತ್ವಸಂಧಿ :–** ಪೂರ್ವ ಪದದ ಕೊನೆಯಲ್ಲಿ ವರ್ಗದ ಪ್ರಥಮಾಕ್ಷರಗಳಿಗೆ ಯಾವ ವರ್ಣ ಎದುರಾದರೂ ಅದೇ ವರ್ಗದ ಮೂರನೇ ಅಕ್ಷರ ಆದೇಶವಾಗಿ ಬಂದರೆ ಅದು ಜಸ್ತ್ವಸಂಧಿ ಎನಿಸುತ್ತದೆ.

ಉದಾ : ವಾಕ್ + ಈಶ = ವಾಗೀಶ

ಷಟ್ + ಆನನ = ಷಡಾನನ

ಸತ್ + ಆನಂದ = ಸದಾನಂದ

1. **ಅನುನಾಸಿಕ ಸಂಧಿ :–** ಪೂರ್ವಪದದ ಕೊನೆಯಲ್ಲಿ ವರ್ಗದ ಪ್ರಥಮಾಕ್ಷರಗಳಿದ್ದು ಅವುಗಳಿಗೆ ಅದೇ ವರ್ಗದ ಅನುನಾಸಿಕ ಅಕ್ಷರಗಳು ಪರವಾದರೆ ಅನುನಾಸಿಕಸಂಧಿ ಎನಿಸುತ್ತದೆ.

ಉದಾ : ಸತ್ + ಮಾನ = ಸನ್ಮಾನ

ಚಿತ್ + ಮಯ = ಚಿನ್ಮಯ

## ಪಠ್ಯ ಪುಸ್ತಕದಲ್ಲಿರುವ ಸಂಧಿ ಪದಗಳು

**ಲೋಪಸಂಧಿ :** ಊರೂರು, ಬಲ್ಲೆನೆಂದು, ಮಾತಂತಿ, ಸಂಪನ್ನರಾದ, ಕಾಣಲಾಗದು, ತಪ್ಪಲೀಯಿದೆ, ತಕ್ಕನಿತು. ಪೊಳ್ದಡೆ, ಕಾದಾಟದಾಟ, ಆದನೆಂಬ, ನೆತ್ತರೊಂದು

**ಆಗಮ ಸಂಧಿ :** ಕೈಯನ್ನು, ಮನೆಯಿಂದ ಶಾಲೆಯಲ್ಲಿ ಮರವನ್ನು ಮಗುವಿಗೆ, ಬೇಧವಿಲ್ಲ, ವೃದ್ದಿಯಾಗಿ ಶವವಾದವು.

**ಆದೇಶ ಸಂಧಿ** : ಮಳೆಗಾಲ ಮೈದೋರು, ಬೆಂಬತ್ತು, ಕಡುವೆಳ್ಳು, ಮೆಲ್ವಾತು, ಕೈಪಿಡಿದು, ಪೊಗಲ್ವೇಳ್ಕುಂ

**ಸವರ್ಣದೀರ್ಘಸಂಧಿ :–** ಮಹಾತ್ಮ, ಗಿರೀಶ, ಸುರಾಸುರ, ವಧೂಪೇತ, ಸಕಳಾಚಾರ್ಯ, ಜನಾಲಯ, ಚಂದಾರ್ಕ

**ವೃದ್ಧಿಸಂಧಿ :** ಏಕೈಕ, ಜನೈಕ್ಯ, ವನೌಷಧ, ಅಷ್ಟೈಶ್ವರ್ಯ
**ಗುಣಸಂಧಿ :** ದೇವೇಂದ್ರ ಜ್ಞಾನೇಶ್ವರ, ಸುರ್ಯೋದಯ, ಮಹರ್ಷಿ, ಮಹೇಶ, ಮಂಡಳೇಶ್ವರ
**ಯಣ್ ಸಂಧಿ ;** ಅತ್ಯಾವಸರ, ಜಾತ್ಯತೀತ, ಕೋಟ್ಯಧೀಶ್ವರ, ಕೋಟ್ಯಾನುಕೋಟಿ.
**ಜಸ್ತ್ವ ಸಂಧಿ :** ವಾಗ್ದೇವಿ, ಅಜಂತ, ಷಡಾನನ, ದಿಗಂತ, ಅಬ್ಧ
**ಶ್ಚುತ್ವಸಂದಿ :** ಪಯಶ್ಶಯನ, ಶರಶ್ಚಂದ್ರ, ಜಗಜ್ಯೋತಿ, ಬೃಹಚ್ಛತ್ರ
**ಅನುನಾಸಿಕ ಸಂಧಿ :** ಷಣ್ಮುಖ, ಸನ್ಮಾನ, ವಾಙ್ಮಯ, ಉನ್ಮಾದ, ತನ್ಮಯ, ಶ್ರೀಮನ್ಮಹಾ

## ಅವ್ಯಯಗಳು – ವಿಧಗಳು

ನಾಮಪದ, ಕ್ರಿಯಾಪದಗಳಂತೆ ಲಿಂಗ, ವಚನ ವಿಭಕ್ತಿಗಳಿಂದ ರೂಪಭೇದವನ್ನು ಹೊಂದದೇ ಏಕರೂಪವಾಗಿರುವ ಪದಗಳೇ ಅವ್ಯಯಗಳು

**ಅವ್ಯಯಗಳ ವಿಧಗಳು :–**

1. **ಸಾಮಾನ್ಯ ಅವ್ಯಯ :–** ಕ್ರಿಯೆ ನಡೆದ ರೀತಿಯನ್ನು ಹೇಳುವವಂತಹುದ್ದು ಚೆನ್ನಾಗಿ, ತಟ್ಟನೆ, ನೆಟ್ಟನೆ, ಸುಮ್ಮನೆ, ಇತ್ಯಾದಿ.ಉದಾ : ಅವಳು ಚೆನ್ನಾಗಿ ಹಾಡಿದಳು
   ಅದು ತಟ್ಟನೆ ಬಿತ್ತು.
2. **ಅನುಕರಣಾವ್ಯಯ :–** ಅರ್ಥವಿಲ್ಲದ ಧ್ವನಿ ವಿಶೇಷಣಗಳನ್ನು ಕೇಳಿದಂತೆಯೇ ಮತ್ತೆ ಮತ್ತೆ ಅನುಕರಣೆ ಮಾಡಿ ಹೇಳುವ ಪದಗಳು ಪಟಪಟನೆ, ಧಗಧಗ ಇತ್ಯಾದಿ.
   ಉದಾ : ನೀರು <u>ದಬದಬ</u> ಬಿತ್ತು
   ಮಳೆ <u>ಪಟಪಟ</u> ಸುರಿಯಿತು
3. **ಭಾವಸೂಚಕವ್ಯಯ :–**
   ಮನಸ್ಸಿನ ಭಾವನೆಗಳನ್ನು ವ್ಯಕ್ತಪಡಿಸುವಾಗ ಕೆಲವು ಅರ್ಥವಿಲ್ಲದ ಪದಗಳನ್ನು ಬಳಸುತ್ತೇವೆ, ಅವು ಮನಸ್ಸಿನ ಭಾವ ಸೂಚಕಗಳು – ಅಬ್ಬಾ, ಛೆ, ಥೂ, ಇತ್ಯಾದಿ
   ಉದಾ : ಅಬ್ಬಾ ಎಷ್ಟು ಸೊಗಸಾಗಿದೆ
4. **ಸಂಬಂಧಕಾವ್ಯಯ :–** ಎರಡು ಪದಗಳ ಅಥವಾ ಅದಕ್ಕಿಂತ ಹೆಚ್ಚು ಪದಗಳನ್ನಾಗಲೀ, ವಾಕ್ಯಗಳನ್ನಾಲೀ ಜೋಡಿಸುವ ಪದಗಳಿವು ಉ ಉಂ ಮತ್ತು ಅಥವಾ ಆದ್ದರಿಂದ ಅಲ್ಲದೇ ಇತ್ಯಾದಿ.
   ಉದಾ : ರಾಮನೂ ಲಕ್ಷ್ಮಣನೂ ಬಂದರು.
   ಒಂದು ಮೂಟೆ ಅಕ್ಕಿ ಕೊಡು ಅಥವಾ ಸಾವಿರ ರೂಪಾಯಿ ಕೊಡು
   ಅವನು ಬರಲಿಲ್ಲ ಆದ್ದರಿಂದ ನಾನೂ ಬರಲಿಲ್ಲ.
   ಮದುವೆಗೆ ನೀನು ಬರಬೇಕು ಅಲ್ಲಿದೆ ಸಾವಿರ ಊಟದೇಲೆ ತರಬೇಕು.
5. **ಅವಧಾರಣಾರ್ಥಕಾವ್ಯಯ :–**
   ನಿಶ್ಚಯಾರ್ಥದಲ್ಲಿ ಬರುವ ಅವ್ಯಯವಿದು ಹಲವು ವಸ್ತುಗಳಲ್ಲಿ ಒಂದನ್ನು ನಿಶ್ಚಯಿಸುವುದೇ ಅವಧಾರಣೆ.
   ಉದಾ : ಅದೇ ನನ್ನ ಪುಸ್ತಕ
   ನಾನೇ ಪುಸ್ತಕ ಕೊಟ್ಟೆ.
   ಲೇಖನ ಚಿಹ್ನೆಗಳು

## ಗ್ರಾಮ್ಯ ಗ್ರಾಂಥಿಕ ರೂಪ

| | | | | | |
|---|---|---|---|---|---|
| ಬ್ಯಾಸಗಿ | – | ಬೇಸಿಗೆ | ತಸ್ಹೊತ್ತು | – | ತಾಸು ಹೊತ್ತು |
| ಬ್ಯಾಸರ | – | ಬೇಸರ | ಏಸೊಂದು | – | ಎಷ್ಟೊಂದು |
| ಹೊಟ್ಟೆಗಿಲ್ದೆ | – | ಹೊಟ್ಟೆ‍ಗಿಲ್ಲದೆ | ಮ್ಯಾಲೊಂದು | – | ಮೇಲೊಂದು |
| ಕುಂತವಳ | – | ಕುಳಿತುಕೊಂಡವಳು | ಇವಳ್ನ | – | ಇವಳನ್ನು |

# ಲೇಖನ ಚಿಹ್ನೆಗಳು

**ಪೂರ್ಣವಿರಾಮ** :– ವಾಕ್ಯದ ಪೂಣಾರ್ಥ ಕ್ರಿಯೆಯನ್ನು ಸೂಚಿಸುವುದು.

ಉದಾ : ಹಕ್ಕಿಯು ಹಣ್ಣನ್ನು ತಿನ್ನುತ್ತಿದೆ.

**ಅರ್ಧವಿರಾಮ :–** ಪ್ರಧಾನ ವಾಕ್ಯದಲ್ಲಿಒಯ ಅನೇಕ ಉಪವಾಕ್ಯಗಳ ಅಂತ್ಯದಲ್ಲಿ ಮಾತ್ರ ಬರುವುದು.

ಉದಾ : ಮೇಷ್ಟೇ ಅಳಬೇಡಿ ಸಮಾಧಾನ ಮಾಡಿಕೊಳ್ಳಿ

**ಅಲ್ಪವಿರಾಮ :–** ಸಂಬೋಧನೆಯ ಮುಂದೆ ಅಲ್ಲದೇ ಕರ್ತೃ ಕರ್ಮ ಕ್ರಿಯಾ ಪದಗಳಿಗೆ ವಿಶೇಷಣಗಳು ಬಂದಾಗ ಕೊನೆಯ ಪದವನ್ನು ಬಿಟ್ಟು ಉಳಿದ ಪದಗಳ ಮುಂದೆ ಬಳಸುವ ಚಿಹ್ನೆ.

ಉದಾ ; ಹೌದು ಮೇಷ್ಟೇ, ತಪ್ಪುಮಾಡುತ್ತೀರಿ, ಜುಲ್ಮಾನೆ ಬೀಳುತ್ತದೆ

**ಪ್ರಶ್ನಾರ್ಥಕ :–** ಪ್ರಶ್ನೆಗಳನ್ನು ಕೇಳುವ ಸಂದರ್ಭದಲ್ಲಿ ಬಳಸುವ ಚಿಹ್ನೆ

ಉದಾ : ಯಾವ ವೆಂಕಟ ಸುಬ್ಬಯ್ಯ ?

**ಭಾವಸೂಚಕ :–** ಹರ್ಷ, ಅಚ್ಚರಿ, ಸಂತಸ, ದುಃಖ, ಕೋಪ, ತಿರಸ್ಕಾರ ಇತ್ಯಾದಿ ಭಾವನೆಗಳನ್ನು ವ್ಯಕ್ತಪಡಿಸುವಾಗ ಬಳಸುವ ಚಿಹ್ನೆ. ಉದಾ : ಅಹಾ ಎಷ್ಟು ಸುಂದರವಾಗಿದೆ.

**ವಿವರಣಾತ್ಮಕ :–** ಅಭಿಪ್ರಾಯದ ವಿವರಣೆ ಇಂತಿದೆ ಎನ್ನುವುದನ್ನು ತಿಳಿಸುವ ಸಂದರ್ಭದಲ್ಲಿ ಬಳಸುವುದು

ಉದಾ : ಭಾಷಾವಿಜ್ಞಾನ ಭಾಷೆಯ ವೈಜ್ಞಾನಿಕ ಅದ್ಯಯನ.

**ಉದ್ಧರಣ :–** ಬರವಣಿಗೆಯಲ್ಲಿ ಇನ್ನೊಬ್ಬರ ಹೇಳಿಕೆಯನ್ನು ಯಥಾವತ್ತಾಗಿ ಬರೆಯುವಾಗ ಬಳಸುವ ಚಿಹ್ನೆ.

ಉದಾ : ಒಳ್ಳೆಯದು ಮೇಷ್ಟ್ರೆ ನೀವು ನಿಲ್ಲಿರಿ "ಎಂದು ಹೇಳಿ. ರಂಗಣ್ಣ ಬೈಸಿಕಲ್ ಹತ್ತಿ ಹೊರಟರು.

**ವಾಕ್ಯವೇಷ್ಟನ :–** ಬರವಣಿಗೆಯಲ್ಲಿ ಪಾರಿಭಾಷಕ / ಪ್ರಧಾನ / ವಿಶಿಷ್ಟ ಪದಗಳನ್ನು ಬಳಸಿದಾಗ ಉಪಯೋಗಿಸುವ ಚಿಹ್ನೆ.

ಉದಾ : ಕನ್ನಡದಲ್ಲಿ ಅನೇಕ ' ಇಂಗ್ಲೀಷ್' ಪದಗಳು ಬಳಕೆಯಲ್ಲಿದೆ.

**() ಆವರಣ :–** ಹೆಚ್ಚಿನ ವಿವರಣೆಗಳನ್ನು ಅರ್ಥಗಳನ್ನು ನೀಡುವ ಸಂದರ್ಭದಲ್ಲಿ ಈ ಚಿಹ್ನೆಯನ್ನು ಬಳಸಲಾಗುತ್ತದೆ.

ಉದಾ: ಒಂದು ದಿನ ನರಿಯು ಕೊಕ್ಕರೆ (ನೀರುಹಕ್ಕಿ)ಯನ್ನು ಊಟಕ್ಕೆ ಕರೆಯಿತು.

# ವಾಕ್ಯ ಪ್ರಬೇಧಗಳು

ವಾಕ್ಯಗಳಲ್ಲಿ 3 ವಿಧಗಳಿವೆ : 1. ಸಾಮಾನ್ಯವಾಕ್ಯ
2. ಸಂಯೋಜಿತವಾಕ್ಯ
3. ಮಿಶ್ರವಾಕ್ಯ

1. **ಸಾಮಾನ್ಯವಾಕ್ಯ :–** ಒಂದು ಪೂರ್ಣ ಕ್ರಿಯಾಪದದೊಡನೆ ಸ್ವತಂತ್ರ ಖಚಿತ ಅರ್ಥ ಕೊಡುವುದು.
   ಉದಾ : ಹಕ್ಕಿಯು ಹಣ್ಣನ್ನು ತಿನ್ನುತ್ತದೆ.
   ಮಕ್ಕಳು ಶಾಲೆಗೆ ಹೋದರು.
2. **ಸಂಯೋಜಿತವಾಕ್ಯ :–** ಎರಡು / ಅನೇಕ ಸ್ವತಂತ್ರ ವಾಕ್ಯಗಳು ಒಟ್ಟಾಗಿ ಸೇರಿ ಪೂರ್ಣ ಅರ್ಥವನ್ನು ನೀಡುತ್ತದೆ
   ಉದಾ : ಮಕ್ಕಳು ಹಾಲನ್ನು ಕುಡಿಯುತ್ತಾರೆ ಆದರೆ ಅವರಿಗೆ ಕೊಡಲು ಸಾಕಷ್ಟು ಹಾಲಿಲ್ಲ
   ಮಕ್ಕಳು ಶಾಲೆಗೆ ಹೋದರು ಆದರೆ ಅವರು ಅಲ್ಲಿ ಓದಲಿಲ್ಲ.
3. **ಮಿಶ್ರವಾಕ್ಯ :–** ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿರುತ್ತದೆ.
   ಉದಾ : ತಮ್ಮ ಗ್ರಾಮಕ್ಕೆ ಹೆಚ್ಚು ಬಸ್ಸುಗಳು ಬರುತ್ತದೆ. ಎಂದು ತಿಳಿದು ಗ್ರಾಮಸ್ಥರು ಸಂತಸ ಪಟ್ಟರು
   ಮಕ್ಕಳು ಶಾಲೆಗೆ ಹೋದರೆಂಬ ಸುದ್ದಿಕೇಳಿ ಜನರು ಅಲ್ಲಿಗೆ ಓಡಿ ಬಂದರು.

**ದ್ವಿರುಕ್ತಿ :–** ಯಾವುದಾದರೊಂದು ವಿಶೇಷಾರ್ಥವನ್ನು ಹೇಳುವುದಕ್ಕಾಗಿ ಎರಡೆರಡು ಬಾರಿ ಪ್ರಯೋಗ ಮಾಡಲ್ಪಡುವ ಪದವೊಂದಕ್ಕೆ ದ್ವಿರುಕ್ತಿ ಎನ್ನುವರು.

ಉದಾ :– ಬೇಗ ಬೇಗ, ಮೆಲ್ಲಮೆಲ್ಲಗೆ, ಅಹುದುಹುದು.
ದೂರದೂರ, ಎಳೆಎಳೆ ----------

**ಜೋಡುನುಡಿ :–** ನಾವು ದಿನನಿತ್ಯ ಒಂದಕ್ಕೊಂದು ಪೂರಕವಾದ, ವಿರುದ್ದವಾದ ಅಥವಾ ಸಾಮಿಪ್ಯ ಅರ್ಥ ಕೊಡುವ ಪದಗಳನ್ನು ಜೋಡುನುಡಿ ಎನ್ನುವರು.

ಉದಾ : ಬೆಟ್ಟ ಗುಡ್ಡ, ನಾಯಿ ನರಿ ಎದ್ದು ಬಿದ್ದು ಕಷ್ಟ ಸುಖ ಉಡುಗೆತೊಡುಗೆ --------

# ಸಮಾಸಗಳು

ಎರಡು ಅಥವಾ ಅದಕ್ಕಿಂತಲೂ ಹೆಚ್ಚು ಪದಗಳು ವಿಭಕ್ತಿ ಪ್ರತ್ಯಯವನ್ನು ಕಳೆದುಕೊಂಡು ಒಂದು ಸಮಸ್ತಪದ ಆಗುವುದಕ್ಕೆ ಸಮಾಸ ಎನ್ನುವರು.

**ಸಮಾಸಗಳಲ್ಲಿ ಎಂಟು ವಿಧಗಳಿವೆ.**

1) ತತ್ಪುರುಷ 2) ಕರ್ಮಧಾರೆಯ 3) ಕ್ರಿಯಾ 4) ದ್ವಂದ್ವ 5) ಅಂಶಿ 6) ದ್ವಿಗು 7) ಬಹುವ್ರೀಹಿ 8) ಗಮಕ

1. **<u>ತತ್ಪುರುಷ ಸಮಾಸ :–</u>** ಪೂರ್ವೋತ್ತರ ಪದಗಳು ನಾಮಪದಗಳಾಗಿದ್ದು, ಉತ್ತರಪದದ ಅರ್ಥ ಪ್ರಧಾನವಾಗಿದ್ದರೆ, ಅದು ತತ್ಪುರುಷ ಸಮಾಸ ಎನ್ನುವರು.

   ಉದಾ : ಅರಸನ + ಮನೆ = ಅರಮನೆ
   ಕಾಲಿನ + ಬಳೆ = ಕಾಲ್ಬಳೆ
   ವಯಸ್ಸಿನಿಂದ + ವೃದ್ಧ = ವಯೋವೃದ್ಧ

2. **<u>ಕರ್ಮಧಾರೆಯ ಸಮಾಸ :–</u>** ಪೂರ್ವೋತ್ತರ ಪದಗಳು ವಿಶೇಷಣ ವಿಶೇಷ್ಯಗಳಿಂದ ಕೂಡಿದ್ದರೆ ಅದು ಕರ್ಮಧಾರೆಯ ಸಮಾಸ ಎನಿಸುತ್ತದೆ.

   ಉದಾ :– ಹಿರಿದಾದ + ಬಂಡೆ = ಹೆಬ್ಬಂಡೆ
   ಕೆಂಪಾದ + ಕಣ್ಣು = ಕೆಂಗಣ್ಣು

3. **<u>ಕ್ರಿಯಾಸಮಾಸ :–</u>** ಉತ್ತರ ಪದವು ಕ್ರಿಯಾಪದವಾಗಿದ್ದರೆ ಕ್ರಿಯಾಸಮಾಸ ಎನ್ನುವರು

   ಉದಾ :– ಕೈಯನ್ನು + ಮುಗಿ = ಕೈಮುಗಿ
   ವಿಷವನ್ನು + ಕಾರು = ವಿಷಕಾರು

4. **<u>ದ್ವಂದ್ವ ಸಮಾಸ :–</u>** ಎರಡು ಅಥವಾ ಅನೇಕ ಪದಗಳು ಅರ್ಥಕ್ಕನುಗುಣವಾಗಿ ಒಂದು ಸೇರಿದರೆ ಅದು ದ್ವಂದ್ವಸಮಾಸ ಎನ್ನುವರು.

   ಉದಾ ಮರವೂ + ಗಿಡವೂ + ಬಳ್ಳಿಯೂ = ಮರಗಿಡಬಳ್ಳಿಗಳು
   ಕೃಷ್ಣನೂ + ಭೀಮನು + ಅರ್ಜುನನು = ಕೃಷ್ಣಭೀಮಾರ್ಜುನರು

5. **<u>ಅಂಶಿ ಸಮಾಸ :–</u>** ಉತ್ತರಪದವು ಪೂರ್ವಕ್ಕೆ ಒಂದು ಅಂಶವಾಗಿದ್ದು ಪೂರ್ವೋತ್ತರ ಪದಗಳು ಅಂಶಿ–ಅಂಶ ಭಾವದಿಂದ ಕೂಡಿದ್ದರೆ ಅದು ಅಂಶಿ ಸಮಾಸ ಎನ್ನುವರು.

   ಉದಾ :– ಇರುಳಿನ + ನಡು = ನಟ್ಟಿರುಳು
   ತಲೆಯ + ಮುಂದು = ಮುಂದಲೆ

6. **<u>ದ್ವಿಗು ಸಮಾಸ :–</u>** ಪೂರ್ವ ಪದ ಸಂಖ್ಯಾವಾಚಕವಗಿದ್ದರೆ ಅದು ದವಿಗುಸಮಾಸ ಎನಿಸುತ್ತದೆ.

   ಉದಾ :– ಮೂರು + ಕಣ್ಣು = ಮುಕ್ಕಣ್ಣು
   ಒಂದು + ಕಟ್ಟು = ಒಗ್ಗಟ್ಟು

7. **<u>ಬಹುವ್ರಿಹಿ ಸಮಾಸ :–</u>** ಅನ್ಯ ಪದದ ಅರ್ಥ ಪ್ರಧಾನವಾಗಿದ್ದರೆ ಅದು ಬಹುವ್ರಿಹಿ ಸಮಾಸ ಎನಿಸುತ್ತದೆ

   ಉದಾ :– ಪ್ರಾಣಿಯಲ್ಲಿ ಚಕ್ರವನ್ನು ಹಿಡಿಯುವವನು – ಚಕ್ರಪಾಣಿ
   ನಾಭಿಯಲ್ಲಿ ಪದ್ಮವನ್ನು ದರಿಸುವನ – ಪದ್ಮನಾಭ

8. **<u>ಗಮಕ ಸಮಾಸ :–</u>** ಪೂರ್ವಪದವು ಸರ್ವನಾಮವಾಗಿದ್ದರೆ ಅಥವಾ ಕೃದಂತವಾಗಿದ್ದರೆ ಅದನ್ನು ಗಮಕ ಸಮಾಸ ಎನ್ನುವರು

   ಉದಾ :– ಅವಳು + ಹುಡುಗಿ = ಆ ಹುಡುಗಿ
   ಅದು + ಮರ = ಆಮರ
   ಬೆಂದುದು + ಬೇಳೆ = ಬೆಂದಬೇಳೆ

## ಪಠ್ಯ ಪುಸ್ತಕದಲ್ಲಿರುವ ಸಮಾಸ ಪದಗಳು

**ತತ್ಪುರುಷ** : ಸ್ವಾಮಿ ದ್ರೋಹ, ಪರಧನ, ಧನಹರಣ, ಪೂದೋಟ, ಬೆಟ್ಟದಾವರೆ, ತಲೆನೋವು

**ಕರ್ಮಧಾರೆಯ** : ಅತಿಕುಟಿಲ, ನಲ್ಲುದುರೆ, ಇಮ್ಮಾವು, ಮೆಲ್ಬಾತು, ಹೊಸಗನ್ನಡ

**ಕ್ರಿಯಾ** : ಕೈಕೊಳ್ಳುವದು, ಸಾಕ್ಷಿ ಮಾಡಿ, ಬಲವಂದು, ಮೋಸ ಮಾಡು, ಸೊಲ್ಗೇಳಿ, ಬಿಲ್ಗೊಂಡು, ಬಿಲ್ದಿರುವನೇರಿಸಿ, ಹೊಗೆದೋರು.

**ದ್ವಂದ್ವ** : ಹನುಮ ಭೀಮರಾಯ, ಗಿರಿವನದುರ್ಗಗಳು, ಕರಿತುರಗರಥ

**ಎಂ. ಶಾಂತರಾಜು (ಮಾಯಾಸುತ), ಕನ್ನಡ ಭಾಷಾ ಶಿಕ್ಷಕರು, ಸರ್ಕಾರಿ ಪ್ರೌಢ ಶಾಲೆ, ಕೊಳ್ಳೇಗಾಲ ಟೌನ್.**

**ಅಂಶಿ ಸಮಾಸ** : ಮುಂಗೈ, ಮುಂದಲೆ, ಕಡೆಗಣ್ಣು, ನಡುರಾತ್ರಿ
**ದ್ವಿಗು** : ಮುಗಾವುದ, ಮುಕ್ಕಣ್ಣು, ಸಪ್ತಸ್ವರಗಳು
**ಬಹುವ್ರೀಹಿ** : ಇನತನುಜ, ದನುಜರಿಪು,
ಗಮಕ ಸಮಾಸ : ಈ ಬೆಕ್ಕು, ನೇಯ್ದ ವಸ್ತ್ರ, ಬೆಂದಬೇಳೆ

## ಕೃದಂತಗಳು

ಧಾತುಗಳಿಗೆ ಕೃತ್ ಪ್ರತ್ಯಯ ಸೇರಿ ಕೃದಂತ ಎನಿಸುತ್ತದೆ ಇವುಗಳಲ್ಲಿ 3 ವಿಧಗಳು

1) ಕೃದಂತ ನಾಮ 2) ಕೃದಂತ ಭಾವನಾಮ 3) ಕೃದಂತವ್ಯಯಗಳು

1. **ಕೃದಂತ ನಾಮ :–** ಧಾತುಗಳಿಗೆ ಕರ್ತೃ ಮೊದಲಾದ ಅರ್ಥದಲ್ಲಿ ಸಾಮಾನ್ಯವಾಗಿ ಅ ಎಂಬ ಕೃತ್ ಪ್ರತ್ಯಯ ಬರುವುದು ವರ್ತಮಾನಕಾಲದಲ್ಲಿ 'ಅದ' ಎಂಬ ಪ್ರತ್ಯಯ ಆಗಮವಾಗುತ್ತದೆ.

| | | | | | | |
|---|---|---|---|---|---|---|
| ಉದಾ :– **ವರ್ತಮಾನ ಕೃದಂತ :–** | ಮಾಡು | + | ವ | | +ಅ | = ಮಾಡುವ |
| | ಬರೆ | + | ಉವ | + ಅ | | = ಬರೆಯುವ |
| **ಭೂತ ಕೃದಂತ :–** | ತಿನ್ನು | + | ದ | + ಅ | | = ತಿಂದ |
| | ಹೋಗು | + | ದ | | + ಅ | = ಹೋದ |
| **ನಿಷೇದ ಕೃದಂತ :–** | ಮಾಡು | | + ಅದ | + ಅ | | = ಮಾಡದ |

**ಕೃದಂತ ಭಾವನಾಮ :–** ಧಾತುಗಳ ಮೇಲೆ ಭಾವಾರ್ಥದಲ್ಲಿರುವುದು, ಏಕೆ, ಇಕೆ, ಇಗೆ, ಗೆ, ತ,ಟ, ವಣಿಗೆ, ಅವು, ವು ಪು, ಅವ ,ಎ, ಆಕೆ ಮುಂತಾದ ಭಾವಾರ್ಥ ಕೃತ್ ಪ್ರತ್ಯಯಗಳು ಸೇರಿ ಕೃದಂತ ಭಾವನಾಮಗಳಾಗುತ್ತವೆ.

ಉದಾ :–

| | | |
|---|---|---|
| ವುದು | – | ನೋಡುವುದು |
| ವಿಕೆ | – | ನೋಡುವಿಕೆ |
| ಇಗೆ | – | ಉಡುಗೆ, ತೊಡುಗೆ |
| ಗೆ | – | ನಂಬುಗೆ |
| ಅವು | – | ಬರವು, ಸೆಳವು |
| ವು | – | ನಾವು, ನೋವು |
| ತ | – | ಸೆಳೆತ, ನುರಿತ |
| ವಳಿ | – | ಸಾಗುವಳಿ, ತೀರುವಳಿ |
| ವು | – | ಕಾವು, ತೀರ್ಪು |
| ಅಲು | – | ಕೇಳಲು, ನೋಡಲು |
| ಎ | – | ನೆರೆ, ಹೊರೆ |
| ಆಕೆ | – | ಬೆರಕೆ, ಮೊಳಕೆ |
| ವಣಿಗೆ | – | ಬರವಣಿಗೆ, ಮೆರವಣಿಗೆ |
| ಟ | – | ನೋಟ, ಮಾಟ |

**ಕೃದಂತಾವ್ಯಯ:–**

ಧಾತು ಅವ್ಯಯ ಉತ, ಉತ್ತ, ಅದೆ, ದರೆ, ಅಲು, ಆಲಿಕ್ಕೆ, ಅ, ಇ, ದು ಇತ್ಯಾದಿ ಪ್ರತ್ಯಯಗಳು ಸೇರಿ ಕೃದಂತಾವ್ಯಯ ಎನಿಸುವುದು

| | | |
|---|---|---|
| ಉತ | – | ಮಾಡುತ, ಓಡುತ |
| ದು | – | ತಿಂದು, ಸವಿದು |
| ಉತ್ತ | – | ಮಾಡುತ್ತ, ಸವಿಯುತ್ತ |
| ಅದೆ | – | ಮಾಡದೆ, ನೋಡದೆ |
| ದರೆ | – | ನೋಡಿದೆ, ಮಾಡಿದರೆ |
| ಅಲು | – | ಬರಲು, ನಡೆಯಲು |
| ಅಲಿಕೆ | – | ಮಾಡಲಿಕ್ಕೆ, ನೋಡಲಿಕ್ಕೆ |
| ಅ | – | ನೋಡ, ಮಾಡ |

**ಎಂ. ಶಾಂತರಾಜು (ಮಾಯಾಸುತ), ಕನ್ನಡ ಭಾಷಾ ಶಿಕ್ಷಕರು, ಸರ್ಕಾರಿ ಪ್ರೌಢ ಶಾಲೆ, ಕೊಳ್ಳೇಗಾಲ ಟೌನ್.**

ಇ – ಮೋಡಿ, ಕೇಳಿ,ತಿನ್ನಿ

## ತದ್ಧಿತಾಂತ

ನಾಮಪದಗಳಿಗೆ ತದ್ಧಿತ ಪ್ರತ್ಯಯಗಳು ಅಂತ್ಯದಲ್ಲಿ ಉಳ್ಳವು ತದ್ಧಿತಾಂತ ಎನಿಸುತ್ತದೆ
ತದ್ಧಿತಾಂತದಲ್ಲಿ 3 ಬಗೆಯಿದೆ

1. ತದ್ದತಾಂತ ನಾಮ
2. ತದ್ಧಿತಾಂತ ಭಾವನಾಮ
3. ತದ್ಧಿತಾಂತಾವ್ಯಯ

1. **ತದ್ಧಿತಾಂತ ನಾಮಪದ :–** ನಾಮಪದಗಳಿಗೆ ಸಾರ, ಕಾರ, ಇಗ, ವಂತ, ವಳ, ಅಡಿಗ, ಅಳಿ, ಗುಳಿ, ಅರ ಅನೆಯ ಎಂಬ ತದ್ಧಿತಪ್ರತ್ಯಯಗಳು ಸೇರಿಸಿ ಒಂದುಪದವಾದರೆ ಅದು ತದ್ಧಿತಾಂತ ನಾಮಪದ ಎನಿಸುತ್ತದೆ.

| | | | |
|---|---|---|---|
| ಗಾರ | – | ಮಾಲೆಯನ್ನು ಕಟ್ಟುವವ | ಮಾಲೆಗಾರ |
| ಕಾರ | – | ಓಲೆಯನ್ನು ತರುವವ | ಓಲೆಕಾರ |
| ಇಗ | – | ಲೆಕ್ಕವನ್ನು ಬಲ್ಲವನು | ಲೆಕ್ಕಿಗ |
| ವಂತ | – | ಹಣವನ್ನು ಉಳ್ಳವನು | ಹಣವಂತ |
| ವಾಳ | – | ಮಡಿಯನ್ನು ಮಾಡಿವವನು | ಮಡಿವಾಳ |
| ಆಡಿಗ | – | ಹೂವನ್ನು ಕಟ್ಟುವವನು | ಹೂವಾಡಿಗ |
| ಆಳ | – | ಮಾತನ್ನು ಹೆಚ್ಚು ಆಡುವವನು | ವಾಚಾಳಿ |
| ಗುಳಿ | – | ಲಂಚವನ್ನು ತೆಗೆದುಕೊಳ್ಳುವವ | ಲಂಚಗುಳಿ |
| ಆರ | – | ಕುಂಭವನ್ನು ಮಾಡುವವ | ಕುಂಬಾರ |
| ಆನೆಯ | – | ಹತ್ತು ಸಂಖ್ಯೆಯುಳ್ಳದ್ದು | ಹತ್ತನೆಯ |

2. **ತದ್ಧಿತಾಂತ ಭಾವನಾಮ :–** ನಾಮಪದಗಳಿಗೆ ಭಾವಾರ್ಥದಲ್ಲಿ ತನ, ಇದೆ, ಪು, ಮೆ ಇತ್ಯಾದಿ ರದ್ದಿನ ಪ್ರತ್ಯಯಗಳನ್ನು ಸೇರಿಸುವ ಪದಚರನೆಯೇ ತದ್ಧಿತಾಂತ ಭಾವನಾಮ

ತನ – ದೊಡ್ಡತನಭಾವ ದೊಡ್ಡತನ
ಇಕೆ – ಚೆಲುವಿನ ಭಾವ ಚೆಲುವಿಕೆ
ಉ – ಕುರುಡನ ಭಾವ ಕುರುಡು
ವು – ಬಿಳಿಯದರ ಭಾವ ಬಿಳಿಪು
ಮೆ – ಜಾಣತನದ ಭಾವ ಜಾಣ್ಮೆ

3. **ತದ್ಧಿತಾಂತ ಅವ್ಯಯ :–** ನಾಮಪದಗಳ ಮುಂದೆ ಅಂತೆ, ವೊಲ್, ವೊಲು, ವೋಲ್, ವೋಲು, ತನಕ, ವರಗೆ ಮಟ್ಟಿಗೆ, ಓಸ್ಕರ, ಇಂತ, ಆಗಿ, ಓಸುಗ, ತದ್ಧಿತ ಪ್ರತ್ಯಯಗಳು ಸೇರಿ ರಚಿತವಾಗುವ ಪದರಚನೆಯೇ ತದ್ಧಿತಾಂತವ್ಯಯ

| | | | | |
|---|---|---|---|---|
| ರಾಮನ | – | ಅಂತೆ | – | ರಾಮನಂತೆ |
| | | ವೊಲ್ | – | ಚಂದ್ರನವೊಲ್ |
| | | ವೊಲು | – | ಮನೆಯವೊಲು |
| | | ತನಕ | – | ಅಲ್ಲಿಯತನಕ |
| | | ವರೆಗೆ | – | ಶಾಲೆಯವರೆಗೆ |
| | | ಮಟ್ಟಿಗೆ | – | ಆತನಮಟ್ಟಿಗೆ |
| | | ಓಸ್ಕರ | – | ಅವನಿಗೋಸ್ಕರ |
| | | ಇಂತ | – | ಮನೆಗಿಂತ |
| | | ಆಗಿ | – | ಅವನಿಗಾಗಿ |
| | | ಓಸುಗ | – | ಹುಡುಗನಿಗೋಸುಗ |

# ಛಂದಸ್ಸು

ಛದಿ ಆಹ್ಲಾದೆ ಎಂಬ ಪದಗಳಿಗಿಂದ ಛಂದಸ್ಸು ಆಗಿದೆ ಛದಿ ಆಹ್ಲಾದೆ ಎಂದರೆ ಮನಸ್ಸಿಗೆ ಆಹ್ಲಾದವನ್ನುಂಟು ಮಾಡುವುದು ಪದ್ಯರಚನೆಗೆ ಅಗತ್ಯವಾದ ವಿಷಯವಾಗಿದೆ.

**ಛಂದಸ್ಸಿನ ಪ್ರಮುಖ ಅಂಶಗಳು :**

1. ಪಾದ ಅಥವಾ ಚರಣ
2. ಮಾತ್ರೆ
3. ಗಣ
4. ಪ್ರಾಸ
5. ಯತಿ
6. ಲಯ

1. **ಪಾದ :–** ಪಾದ ಎಂದರೆ ಸಾಲು ಎಂದರ್ಥ
   ಎರಡು ಸಾಲು – ದ್ವಿಪದಿ
   ಮೂರು ಸಾಲು – ತ್ರಿಪದಿ
   ನಾಲ್ಕು ಸಾಲು – ಚೌಪದಿ / ಕಂದ
   ಆರು ಸಾಲು – ಷಟ್ಪದಿ
2. **ಮಾತ್ರೆ :–** ಮಾತ್ರೆಗಳಲ್ಲಿ 3 ವಿಧಗಳಿವೆ.
   ಲಘು : ಒಂದು ಮಾತ್ರೆ
   ಗುರು : ಎರಡು ಮಾತ್ರೆ
   ಪ್ಲುತ : ಮೂರು ಮಾತ್ರೆ
3. **ಗಣಗಳು :–** ಗಣಗಳಲ್ಲಿ ಮೂರು ವಿಧಗಳು
   ಅಕ್ಷರಗಣ : ಅಕ್ಷರಗಳಿಗನುಗುಣವಾಗಿ (ಮುರು ಅಕ್ಷರ) ಗುಂಪು ಮಾಡುವುದು
   ಮಾತ್ರಾಗಣ : ಮಾತ್ರಾ ಲೆಕ್ಕಾಚಾರದಲ್ಲಿ ಗುಂಪುಮಾಡುವುದು
   ಅಂಶಗಣ : ಅಂಶಗಳ ಲೆಕ್ಕಾಚಾರದಲ್ಲಿ ಗುಂಪುಮಾಡುವುದು.
4. **ಯತಿ :–** ಯತಿ ಎಂಬುವುದು ಉಸಿರ್ದಾಣಂ ಅಂದರೆ ಉಸಿರನ್ನು ತೆಗೆದುಕೊಳ್ಳುವ ಸ್ಥಳ
5. **ಲಯ :–** ಕ್ರಮಬದ್ಧವಾದ ಏರಿಳಿತ
6. **ಪ್ರಾಸ :–** ಪ್ರಾಸಗಳಲ್ಲಿ ಆದಿ ಪ್ರಾಸ ಮತ್ತು ಅಂತ್ಯಪ್ರಾಸ ಎಂಬ ರೀತಿಯಿದೆ.

## ಅಕ್ಷರಗಣ

ಅಕ್ಷರಗಣದಲ್ಲಿ ಎಂಟುರೀತಿಯ ಗಣಗಳನ್ನು ನೋಡುತ್ತೇವೆ, ಅವುಗಳಾವುವೆಂದರೆ,

1. ಯಗಣ 2. ಮಗಣ 3. ತಗಣ 4. ರಗಣ 5. ಜಗಣ 6. ಭಗಣ 7. ನಗಣ ಸಗಣ

ಈ ಗಣಗಳನ್ನು ವಿನ್ಯಾಸವನ್ನು ಈ ಕೆಳಕಂಡ ಸೂತ್ರದ ಮೂಲಕ ತಿಳಿದು ಕೊಳ್ಳಬಹುದು.

**ಯಮಾತಾರಾಜಬಾನಸಲಗಂ**

| | | |
|---|---|---|
| ಯಮಾತಾ | ಯಗಣ | U – – |
| ಮಾತಾರಾ | ಮಗಣ | – – – |
| ತಾರಾಜ | ತ`ಗಣ | – –U |
| ರಾಜಬಾ | ರಗಣ | – U – |
| ಜಬಾನ | ಜಗಣ | U – U |
| ಬಾನಸ | ಭಗಣ | – UU |
| ನಸಲ | ನಗಣ | UUU |
| ಸಲಗಂ | ಸಗಣ | UU – |

ಅಕ್ಷರಗಣಗಳ ವಿನ್ಯಾಸವನ್ನು ನಾಗವರ್ಮನ ಈ ಪದ್ಯದ ಸಹಾಯದಿಂದಲೂ ತಿಳಿದು ಕೊಳ್ಳಬಹುದು

ಗುರು ಲಘು ಮೂರಿಗೆ ಮನ ಗಣ
ಗುರು ಲಘು ಮೊದಲಲಿ ಬರಲು ಭಯಗಣಮೆಂಬರ್
ಗುರು ಲಘು ನಡುವಿರೆ ಜ ರ ಗಣ
ಗುರು ಲಘು ಕೊನೆಯಲ್ಲಿ ಬರಲು ಸ ತ ಗಣ ಮಕ್ಕುಂ

**ಖ್ಯಾತ ಕರ್ಣಾಟಕಗಳು :–**

ಅಕ್ಷರ ಛಂದಸ್ಸಿನಲ್ಲಿ ಬರುವ ಛಂದೋಪ್ರಕಾರ ವೃತ್ತಗಳು ಅಥವಾ ಖ್ಯಾತ ಕರ್ಣಾಟಕಗಳು

1. ಉತ್ಪಲಮಾಲವೃತ್ತ
2. ಚಂಪಕಮಾಲವೃತ್ತ
3. ಸ್ರಗ್ದರಾವೃತ್ತ
4. ಮಹಾಸ್ರಗ್ದರಾವೃತ್ತ
5. ಮತ್ತೇಭ ವಿಕ್ರೀಡಿವೃತ್ತ
6. ಶಾರ್ದೂಲ ವಿಕ್ರೀಡಿವೃತ್ತ

**ಇವುಗಳ ವಿನ್ಯಾಸವನ್ನು ನಾಗಮರ್ಮನ**
**ಈ ಕೆಳಕಂಡ ಪದ್ಯದ ಸಹಾಯದಿಂದ ತಿಳಿಯಬಹುದು**

ಗುರುವೊಂದಾದಿಯೊಳುತ್ಪಲಂ ಗುರುಮೊದಲ್ಮೂರಾಗೆ ಶಾರ್ದೂಲಮಾ
ಗುರು ನಾಲ್ಕಾಗಿರಲಂತು ಸ್ರಗ್ಧರೆ ಲಘು ದ್ವಂದ್ವಂ ಗುರು ದ್ವಂದ್ವಮಾ
ಗಿರೆ ಮತ್ತೇಭ ಲಘುದ್ವಯ ತ್ರಿಗುರುವಿಂದಕ್ಕುಂ ಮಹಾಸ್ರಗ್ಧರಾ
ಹರಿಣಾಕ್ಷೀ ಲಘುನಾಲ್ಕು ಚಂಪಕಮಿವಾರುಂ ಖ್ಯಾತ ಕರ್ಣಾಟಕಂ

1. **ಚಂಪಕ ಮಾಲಾವೃತ್ತ :–** (ನಜ ಭಜ ಜಂಜರಂ)
   ಪ್ರತಿ ಪಾದದಲ್ಲಿ ಇಪ್ಪತ್ತೊಂದು ಅಕ್ಷರಗಳಿವೆ,
   ನ ಜ ಭ ಜ ಜ ಜ ರ ಎಂಬ ಏಳು ಗಣಗಳಿವೆ.

ಉದಾ:–

| ನ | ಜ | ಭ | ಜ | ಜ | ಜ | ರ |
|---|---|---|---|---|---|---|
| UUU | U – U | – UU | U – U | U – U | U – U | – U – |
| ಕುರುಕು | ಳನಂದ | ನಂಪವ | ನನಂದ | ನವೆಂಬ | ಮುಹಾಂಧ | ಗಂಧಸಿಂ |

2. **ಉತ್ಪಲಮಾಲಾವೃತ್ತ :–(ಭ** ರ ನ ಭ ಭ ರ)
   ಪ್ರತಿ ಪಾದದಲ್ಲಿ 20 ಅಕ್ಷರಗಳಿವೆ.
   ಭ ರ ನ ಭ ಭ ರ ಎಂಬ ಆರುಗಣಗಳು ಒಂದು ಲಘು ಒಂದು ಗುರು ಬರುತ್ತದೆ.

ಉದಾ:–

| ಭ | ರ | ನ | ಭ | ಭ | ರ | |
|---|---|---|---|---|---|---|
| – UU | – U – | UUU | – U U | – UU | – U – | U – |
| ಜಾಗದ | ಭೋಗದ | ಕ್ಕರದ | ಗೇಯದೆ | ಗೊಟ್ಟಿಯ | ಲಂಪಿನಿಂ | ಪುಗ |

3. **ಸ್ರಗ್ಧರಾಮಾಲಾವೃತ್ತ :–** (ಮ ರ ಭ ನ ಯ ಯ ಯ)
   ಪ್ರತಿ ಪಾದದಲ್ಲಿ 21 ಅಕ್ಷರಗಳಿವೆ
   ಮ ರ ಭ ನ ಯ ಯ ಯ ಎಂಬ ಆರುಗಣಗಳು ಒಂದು ಲಘು ಒಂದು ಗುರು ಬರುತ್ತದೆ.

ಉದಾ :–

| ಮ | ರ | ಭ | ನ | ಯ | ಯ | ಯ |
|---|---|---|---|---|---|---|
| – – – | –U – | – U – | UUU | U – – | U – – | U – – |
| ಕಾರುಣ್ಯಂ | ಗೆಯ್ದಸ | ದ್ದೀಕ್ಷೆಯ | ನೆಸಗಿ | ಲಸ ಚ್ಚಿ | ತ್ರಿಯಾಮಾ | ರ್ಗಮೆಂಪೇ |

4. **ಮಹಾಸ್ರಗ್ದವೃತ್ತ :–** (ಸ ತ ತ ನ ಸ ರ ರ)

ಪ್ರತಿ ಪಾದದಲ್ಲೂ 22 ಅಕ್ಷರಗಳಿವೆ.
ಸ ತ ತ ನ ಸ ರ ರ ಗಣಗಳು ಕೊನೆಯಲ್ಲಿ ಒಂದುಗುರು ಬರುತ್ತದೆ

ಉದಾ:-

| ಸ | ತ | ತ | ನ | ಸ | ರ | ರ | |
|---|---|---|---|---|---|---|---|
| UU – | – – U | – – U | UUU | U U – | –U – | –U | – – |
| ಪರಿಸಂ | ಧಾನಾಕ್ಕೆ | ವಂದಂದ | ವಗಡಿ | ಸಂದಹಂ | ಕಾರಮೆ | ಲ್ಲಿತ್ತೊ | ಕೃಷ್ಣಾಂ |

**5. ಮತ್ತೇಭ ವಿಕ್ರೀಡಿವೃತ್ತ :-**

ಪ್ರತಿ ಪಾದದಲ್ಲೂ 20 ಅಕ್ಷರಗಳಿವೆ
ಸ ಭ ರ ನ ಮ ಯ ಗಣಗಳು ಕೊನೆಯಲ್ಲಿ ಒಂದು ಲಘು ಒಂದುಗುರು ಇರುತ್ತದೆ

ಉದಾ:-

| ಸ | ಭ | | ರ | ನ | ಮ | ಯ |
|---|---|---|---|---|---|---|
| UU – | –UU | – U – | UUU | – – – | U – – | U – |
| ಎನಗಂ | ಪಾಂಡುಗ | ಮಿಲ್ಲಭೇ | ದಮಿಳೆ | ಯಂಪಚ್ಚಾ | ಳ್ವಮಾಪಾಂ | ಡುನಂ |

6. **ಶಾರ್ದೂಲ ವಿಕ್ರೀಡಿತವೃತ್ತ :-** (ಮ ಸ ಜ ಸ ತ ತ )

ಪ್ರತಿ ಪಾದದಲ್ಲೂ 19 ಅಕ್ಷರಗಳಿವೆ
ಮ ಸ ಜ ಸ ತ ತ ಗಣಗಳಿದ್ದು ಕೊನೆಯಲ್ಲಿ ಒಂದು ಗುರು ಬರುತ್ತದೆ

ಉದಾ:-

| ಮ | ಸ | ಜ | ಸ | ತ | ತ | |
|---|---|---|---|---|---|---|
| – – – | U U – | U – U | U – – | – –U | – – U | – |
| ಇಂತೀಕಾ | ವ್ಯಮನೊ | ಲ್ದುಕೇಳ್ದ | ವಿಭುದರ್ | ಮೈವರ್ಚಿ | ಕೊಂಡಾಡೆ | ಪೇ |

## ಮಾತ್ರಾಛಂದಸ್ಸು

ಮಾತ್ರಾ ಲೆಕ್ಕಾಚಾರದಲ್ಲಿ ಗಣ ವಿಂಗಡನೆ ಮಾಡುವುದು
ಉದಾ : ಮೂರು ಮಾತ್ರೆಯ ಗಣ, ನಾಲ್ಕು ಮಾತ್ರೆಯಗಣ ಐದು ಮಾತ್ರೆಯ ಗಣ ಮಾತ್ರಾ ಛಂದಸ್ಸಿನಲ್ಲಿ ಬರುವ ಛಂದೋಪ್ರಕಾರಗಳೆಂದರೆ ಕಂದ, ಷಟ್ಪದಿ, ರಗಳೆ ---------

**ಕಂದಪದ್ಯದ ಲಕ್ಷಣಗಳು :-**

1) ಕಂದ ಪದ್ಯದಲ್ಲಿ ನಾಲ್ಕು ಸಾಲುಗಳಿವೆ
2) 1 ಮತ್ತು 2 ಸಾಲುಗಳನ್ನು ಉತ್ತರಾರ್ಧ ಎಂತಲೂ ಕರೆಯುತ್ತಾರೆ
3) 3. ಮತ್ತು 4 ಸಾಲುಗಳನ್ನು ಉತ್ತರಾರ್ಧ ಎಂತಲೂ ಕರೆಯುತ್ತಾರೆ
4) 1. ಮತ್ತು 3 ಸಾಲುಗಳು ಸಮ ಇದರಲ್ಲಿ 4 ಮಾತ್ರೆಯಲ್ಲಿ 3 ಗಣಗಳಿರುತ್ತದೆ.
5) 2 ಮತ್ತು 4 ಸಾಲುಗಳು ಸಮ ಇದರಲ್ಲಿ 4 ಮಾತ್ರೆಯಲ್ಲಿ 5 ಗಣಗಳಿರುತ್ತದೆ
6) ಒಟ್ಟು 64 ಮಾತ್ರೆಗಳು ಇರುತ್ತದೆ

ಇದರ ವಿನ್ಯಾಸ 4 । 4 । 4
4 । 4 । 4 । 4 । 4
4 । 4 । 4
4 । 4 । 4 । 4 । 4

| – – | U – U | U UUU |
|---|---|---|
| ನೀನು | ಳ್ಳೊಡೆಲ್ಲ | ರೊಳರೆಮ |

| – UU | – U U | U – U | – UU | UU – |
|---|---|---|---|---|
| ಗೇನುಮ | ಲ್ಅಮನ | ದೊಳಿಲ್ಲ | ದೆಂತೆನೆ | ಮಗನೇ |

| – UU | – UU | UUUU |
|---|---|---|

**ಎಂ. ಶಾಂತರಾಜು (ಮಾಯಾಸುತ), ಕನ್ನಡ ಭಾಷಾ ಶಿಕ್ಷಕರು, ಸರ್ಕಾರಿ ಪ್ರೌಢ ಶಾಲೆ, ಕೊಳ್ಳೇಗಾಲ ಟೌನ್.**

ಭಾನುವೆ ಸಾಲದೆ ಪಗಲೆನಿ

– – | – UU | UUUU | – – | UU –
ತಾನುಂ | ದೀವಿಗೆ | ಗಳುರಿದೊ | ಡೇಂ ನಂ | ದಿದೊಡೇಂ

## ಷಟ್ಪದಿ ವಿಧಗಳು

1. ಶರಷಟ್ಪದಿ
2. ಕುಸುಮ ಷಟ್ಪದಿ
3. ಭೋಗ ಷಟ್ಪದಿ
4. ಭಾಮಿನಿ ಷಟ್ಪದಿ
5. ಪರಿವರ್ಧಿನಿ ಷಟ್ಪದಿ
6. ವಾರ್ಧಕ ಷಟ್ಪದಿ

### 1. ಭಾಮಿನಿ ಷಟ್ಪದಿ :–

ವಿನ್ಯಾಸ 3 । 4 । 3 । 4
3 । 4 । 3 । 4
3 । 4 । 3 । 4 । 3 । 4 + ಗುರು

UUU | UU – | –U | – –
ಲಲನೆ | ಪಡೆದಿ | ಯ್ಯೆದು | ಮಂತ್ರಂ

UUU | UUUU | – U | – UU
ಗಳಲಿ | ಮೊದಲಿಗೆ | ನೀನು | ನಿನ್ನಯ

UUU | – UU | – U | – UU | – U | UU – | –
ಬಳೆಯು | ದಿಷ್ಮಿರ | ದೇವ | ಮೂರನೆ | ಯಾತ | ಕಲಿಭೀ | ಮ

### 2. ಪರಿವರ್ಧಿನಿಷಟ್ಪದಿ :–

ವಿನ್ಯಾಸ :– 5 । 5 । 5 । 5
5 । 5 । 5 । 5
5 । 5 । 5 । 5 । 5 । 5 + ಗುರು

– UU U | – UUU | – – – | –U –
ಎತ್ತಣ ತು | ರಂಗಮಿದು | ಪೊಕ್ಕು ಪೂ | ದೋಟಮಾ

– UUU | UUU – | –U UU | – U –
ತೊತ್ತಲದು | ಳಿದುದು ವಾ | ಲ್ಮೀಕಿ ಮುನಿ | ಸಾಧನೇ

– U – | –U – | UUU – | UU – U | – U – | UUU –
ಪೊತ್ತು ಮಾ | ರೈವುದೆಂ | ದೆನೆಗೆ ನೇ | ಮಿಸಿ ಪೋದ | ನಬ್ಬಿಪಂ | ಕರೆಸಲಾ ಗಿ

# ಅಲಂಕಾರ

ಅಲಂಕಾರಗಳಲ್ಲಿ 2 ವಿಧಗಳು

1) ಶಬ್ದಾಲಂಕಾರ
2) ಅರ್ಥಾಲಂಕಾರ

ಶಬ್ದ (ಅ) ಅಕ್ಷರಗಳ ಜೋಡನೆಯ ಚಮತ್ಕಾರದಿಂದ ಕಾವ್ಯದ ಸೌಂದರ್ಯ ಹುಚ್ಚಾದರೆ ಅದೇ ಶಬ್ದಾಲಂಕಾರ ಶಬ್ದಾಲಂಕಾರದ ಅಂಶವನ್ನು ಈ ಕೆಳಕಂಡಂತೆ ವಿವರಿಸಬಹುದು

**ಶಬ್ದಾಲಂಕಾರ**

- ಅನುಪ್ರಾಸ
  - ವೃತ್ತಾನುಪ್ರಾಸ
  - ಛೇಕಾನುಪ್ರಾಸ
- ಯಮಕ
- ಚಿತ್ರಕವಿತ್ವ

**<u>ಅರ್ಥಾಲಂಕಾರ:–</u>**

ಪದಗಳ ಅರ್ಥ ಚಮತ್ಕಾರದಿಂದ ಕಾವ್ಯ ಅಥವಾ ಮಾತಿನ ಸೌಂದರ್ಯ ಹೆಚ್ಚಾದರೆ ಅದೇ ಅರ್ಥಾಲಂಕಾರ. ಇದರಲ್ಲಿ 100ಕ್ಕೂ ಮಿಕ್ಕಿದ ಅಲಂಕಾರಗಳಿವೆ. ಪ್ರಮುಖವಾಗಿ 6 ಅಲಂಕಾರಗಳು ಕಂಡು ಬರುತ್ತದೆ.

1. ಉಪಮಾಲಂಕಾರ
2. ರೂಪಕಾಲಂಕಾರ
3. ಉತ್ಪ್ರೇಕ್ಷಾಲಂಕಾರ
4. ದೃಷ್ಟಾಂತಾಲಂಕಾರ
5. ಅರ್ಥಾಂತರನ್ಯಾಸಾಲಂಕಾರ
6. ಶ್ಲೇಷಾಲಂಕಾರ

**<u>ಉಪಮಾಲಂಕಾರ :–</u>**

ಎರಡು ವಸ್ತುಗಳಿಗೆ ಇರುವ ಪರಸ್ಪರ ಹೋಲಿಕೆಯನ್ನು ಹೇಳುವುದಕ್ಕೆ ಉಪಮಾಲಂಕಾರ ಎನ್ನುವರು. ಇದರಲ್ಲಿ ಉಪಮೇಯ, ಉಪಮಾನ, ಉಪಮವಾಚಕ, ಸಮನ್ವಯ ಮುಂತಾದ ಭಾಗಗಳನ್ನು ಗುರ್ತಿಸಬಹುದು

ಉದಾ : ಸೀತೆಯ ಮುಖ ಕಮಲದಂತೆ ಅರಳಿತು

| | |
|---|---|
| ಉಪಮೇಯ | :– ಸೀತೆಯಮುಖ |
| ಉಪಮಾನ | :– ಕಮಲ |
| ಉಪಮವಾಚಕ | :– ಅಂತೆ |
| ಸಮಾನ ಧರ್ಮ<br>ಸಮನ್ವಯ } | :– ಅರಳುವುದು ಇಲ್ಲಿ ಸೀತೆಯ ಮುಖವನ್ನು ಕಮಲಕ್ಕೆ ಹೋಲಿಸಲಾಗಿದೆ. |

**<u>ರೂಪಕಾಲಂಕಾರ</u>**

ಉಪಮೇಯವನ್ನೇ ಉಪಮಾನವನ್ನಾಗಿ ರೂಪಿಸಿಕೊಲ್ಲುವುದೇ ರೂಪಕಾಲಂಕಾರ

**ಉದಾ :** ಸೀತೆಯ ಮುಖ ಕಮಲ ಅರಳಿತು

ಉಪಮೇಯ : ಸೀತೆಯ ಮುಖ

ಉಪಮಾನ : ಕಮಲದ ಹೂ

ಇಲ್ಲಿ ಉಪಮೇಯ ಹಾಗೂ ಉಪಮಾನ ಎರಡರಲ್ಲೂ ಅಬೇಧ ಕಲ್ಪನೆ ಇರುವುರಿಂದ ಇದು ರೂಪಕಾಲಂಕಾರವಾಗಿದೆ

**ಎಂ. ಶಾಂತರಾಜು (ಮಾಯಾಸುತ), ಕನ್ನಡ ಭಾಷಾ ಶಿಕ್ಷಕರು, ಸರ್ಕಾರಿ ಪ್ರೌಢ ಶಾಲೆ, ಕೊಳ್ಳೇಗಾಲ ಟೌನ್.**

**ಉತ್ಪ್ರೇಕ್ಷಾಲಂಕಾರ :-**

ಉಪಮೇಯವಾದ ವಸ್ತುವನ್ನು ಅಥವಾ ಸನ್ನಿವೇಶವನ್ನು ಉಪಮಾನವಾದ ವಸ್ತುವನ್ನಾಗಿ ಅಥವಾ ಸನ್ನಿವೇಶವನ್ನಾಗಿ ಕಲ್ಪಿಸುವುದೇ ಉತ್ಪ್ರೇಕ್ಷಾಲಂಕಾರ

**ಉದಾ :** ಸೀತೆಯ ಮುಖ ಕಮಲವೂ ಎಂಬಂತೆ ಹೊಳೆಯುತ್ತಿದೆ.

ಉಪಮೇಯ : ಸೀತೆಯ ಮುಖ

ಉಪಮಾನ : ಕಮಲದ ಹೂವು

ಸಮನ್ವಯ : ಇಲ್ಲಿ ಸೀತೆಯ ಮುಖವನ್ನು ಕಮಲದ ಹೂವು ಎಂಬುದಾಗಿ ಕಲ್ಪಿಸಿರುವುದರಿಂದ ಇದು ಉತ್ಪ್ರೇಕ್ಷಾಲಂಕಾರ

**ದೃಷ್ಟಾಂತಾಲಂಕಾರ :-**

ಎರಡು ಬೇರೆ ಬೇರೆ ವಾಕ್ಯಗಳಲ್ಲಿ ಅರ್ಥಸಾದೃಶ್ಯದಿಂದ ಬಿಂಬ ಪ್ರತಿಬಿಂಬ ಭಾವವು ತೋರಿ ಬಂದರೆ ಅದನ್ನು ದೃಷ್ಟಾಂತಾಲಂಕಾರ ಎನ್ನುವರು

**ಉದಾ:** ಮಾತು ಬಲ್ಲವನಿಗೆ ಜಗಳವಿಲ್ಲ. ಊಟ ಬಲ್ಲವನಿಗೆ ರೋಗವಿಲ್ಲ

**ಅರ್ಥಾಂತರನ್ಯಾಸಾಲಂಕಾರ :-**

ಒಂದು ವಿಶೇಷ ವಾಕ್ಯವನ್ನು ಸಾಮಾನ್ಯ ವಾಕ್ಯದಿಂದ ಅಥವಾ ಸಾಮಾನ್ಯ ವಾಕ್ಯವನ್ನು ವಿಶೇಷ ವಾಕ್ಯ ದಿಂದ ಸಮರ್ಥನೆ ಮಾಡುವುದೇ ಅರ್ಥಾಂತರ ನ್ಯಾಸಾಲಂಕಾರ ವೆನಿಸುತ್ತದೆ.

**ಉದಾ:-** ಆತನು ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದು ಉತ್ತೀರ್ಣನಾದನು. ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ ?

**ಶ್ಲೇಷಾಲಂಕಾರ :-**

ಒಂದು ಪದವು ಒಂದಕ್ಕಿಂತ ಹೆಚ್ಚು ಅರ್ಥಕೊಡುವಂತಿದ್ದರೆ ಅಂತಹ ಪದಕ್ಕೆ ಶ್ಲೇಷಪದ ಎಂದು ಹೆಸರು ಇಂತಹ ಶ್ಲೇತಾರ್ಥಗಳನ್ನು ನೀಡಬಲ್ಲ ಪದಗಳಿರುವ ಅಲಂಕಾರವನ್ನು ಶ್ಲೇಷಾಲಂಕಾರ ಎಂದು ಕರೆಯುತ್ತಾರೆ.

**ಪಠ್ಯ ಪುಸ್ತಕದಲ್ಲಿರುವ ಅಲಂಕಾರಗಳ ಪಟ್ಟಿ**

**ಉಪಮಾಲಂಕಾರ :-**

- ಭೀಮ ದುರ್ಯೋದನರು ಮದಗಜಗಳಂತೆ ಹೋರಾಡಿದರು.
- ಒಳಗಿನ ಮಂದಿ ಗುಂಡು ಹೊಡಿಸಿದರೋ ಮುಂಗಾರಿಸಿಡಿಲ ಸಿಡಿದ್ಹಾಂಗ
- ಸಿಡಿಲ ಸಿಡಿದ್ಹಾಂಗ ಗುಂಡು ಸುರಿದಾವ
- ನೀಚರಿಗೆ ಮಾಡಿದ ಉಪಕಾರವು ಹಾವಿಗೆ ಹಾಲೆರದಂತೆ
- ಸತಿಪತಿಗಳೊಂದಾಗದವನ ಭಕ್ತಿ ಅಮೃತದೊಳು ವಿಷ ಬೆರೆಸಿದಂತೆ
- ಮರನ ನೇರಿದ ಮರ್ಕಟ ನಂತೆ
- ಅಂದಣವನೇರಿದ ಸೊಣದನಂತೆ
- ನುಡಿದರೆ ಮುತ್ತಿನ ಹಾರದಂತೆ<br>ನುಡಿದರೆ ಸ್ಪಟಿಕದ ಸಲಾಖೆಯಂತೆ
- ನುಡಿದರೆ ಮಾಣಿಕ್ಯದ ದೀಪ್ತಿಯಂತೆ<br>ಬಳಾರಿಯ ಮನೆಯಂ ಪರಕೆಯ ಕುರಿಯ ಪಗಿಸುವಂತೆ

**ರೂಪಾಕಾಲಂಕಾರ**

ಮಾರಿಗೌತಣ ಮಾಯ್ತು ನಾಳಿನ ಭಾರತವು
ಅಳ್ಳಿರಯುತ್ತಿಪ್ಪ ಎಮ್ಮ ಒಡಲ ಬೇಗೆಯ ಬೆಂಕಿಯುರಿ ನಿನ್ನನರಿಯದೆ ಪೇಳು ವಿಶ್ವಾಮಿತ್ರ

# ಗಾದೆ ಮಾತುಗಳು

ಗಾದೆ ವೇದಕ್ಕೆ ಸಮನಾದದ್ದು, ಗಾದೆಯು ನಮ್ಮ ಪೂರ್ವಿಕರ ಅನುಭವದ ನುಡಿಯಾಗಿದೆ, ಅದನ್ನು ಉಳಿಸಿಕೊಂಡು ಬೆಳೆಸಿಕೊಂಡು ಬಂದಿದ್ದಾರೆ. ವೇದ ಸುಳ್ಳಾಗದು ಎಂಬ ಮಾತಿನಂತೆ ಗಾದೆಗಳು ತಮ್ಮದೇ ಮಹತ್ವದ ಸ್ಥಾನ ಹೊಂದಿದೆ.

**ಚಿಂತೆಯೇ ಮುಪ್ಪು ಸಂತೋಷವೇ ಯೌವನ :-**

ಚಿಂತೆ ಎಂಬುದು ಮನುಷ್ಯನ ದುಃಖಕ್ಕೆ ಗುರಿಯಾಗುತ್ತದೆ ಚಿಂತೆ ಮನುಷ್ಯನ ಜೀವಂತವಾಗಿ ಸುಡುತ್ತದೆ. ಚಿಂತೆಯೇ ತಾರುಣ್ಯದಿಂದ ಮುಪ್ಪನ್ನು ತರುತ್ತದೆ, ಚಿಂತೆಯಿಂದ ಮಾನವನು ದೈಹಿಕವಾಗಿ, ಮಾನಸಿಕವಾಗಿ ಅಲ್ಲದೇ ಆರೋಗ್ಯದಲ್ಲೂ ಕುಗ್ಗಿಸುತ್ತದೆ. ಹಾಗೆಯೇ ಸಂತೋಷವು ಮನುಷ್ಯನ ಆರೋಗ್ಯವನ್ನು ಮನಸ್ಸನ್ನು ಅಹಲಾದ ಗೊಳಿಸುತ್ತದೆ. ಮಾನಸಿಕವಾಗಿ ನೆಮ್ಮದಿ ನೀಡುತ್ತದೆ. ಮನುಷ್ಯ ಸಂತೋಷವಾಗಿದ್ದರೆ, ವೃದ್ಧಾಪ್ಯದಲ್ಲಿರೂ ತಾರುಣರಂತೆ ಕಾಣುತ್ತದೆ. ಮನುಷ್ಯರೆಲ್ಲರೂ ಚಿಂತೆಯಿಂದ ಮುಕ್ತರಾಗಿ ಸಂತಸದಿಂದ ಜೀವಿಸಿದರೆ, ಹೆಚ್ಚು ಕಾಲದವರಗೆ ಬದುಕಬಲ್ಲ ಎಂಬುದು ಈ ಗಾದೆಯ ತಿರಳಾಗಿದೆ.

**ಕಟ್ಟುವುದು ಕಠಿಣ ಕೆಡಿಸುವುದು ಸುಲಭ**

ಮನುಷ್ಯನ ಯಾವುದಾದರೂ ಸಾಧನೆಮಾಡುವಾಗಲೀ, ಒಂದುವಸ್ತುವಿನ ತಯಾರಿಕೆಯಲ್ಲಾಗಲೀ, ಅಥವಾ ಕಟ್ಟಡದ ನಿರ್ಮಾಣ ಮಾಡುವಾಗ ತುಂಬಾಶ್ರಮ ಪಡಬೇಕಾಗುತ್ತದೆ. ಸಾಕಷ್ಟು ಕಾಲಾವಧಿಯನ್ನು ತೆಗೆದುಕೊಳ್ಳುತ್ತದೆ. ನಿರಂತರ ಪರಿಶ್ರಮದಿಂದ ಒಮದು ಸಾಧನೆ ಮಾಡಲು ಸಾಧ್ಯ

ಆದರೆ ಅದನ್ನು ಕೆಡಿಸುವುದು ತುಂಬಾ ಸುಲಭ ಕಟ್ಟಿದ ಕಟ್ಟಡವನ್ನು ಕೆಲವೇ ನಿಮಿಷಗಳಲ್ಲಿ ನೆಲೆಸಮ ಮಾಡಬಹುದು, ಅಮೇರಿಕಾದ ವಾಣಿಜ್ಯ ಕಟ್ಟಡವನ್ನು ಉಗ್ರಗಾಮಿಗಳು ಕೆಲವೇ ನಿಮಿಷಗಳಲ್ಲಿ ನೆಲಸಮ ಮಾಡಿದರು.

ಕುಂಬಾರನಿಗೆ ವರ್ಷ ದೊಣ್ಣೆಗೆ ನಿಮಿಷ ಎಂಬ ಗಾದೆಯು ಇದಕ್ಕೆ ನಿದರ್ಶನವಾಗಿದೆ.

**ಪ್ರಸಿದ್ಧ ಗಾದೆಗಳು ಪಟ್ಟಿ**

1. ಅತಿ ಆಸೆ ಗತಿಕೇಡು
2. ಊಟಬಲ್ಲವನಿಗೆ ರೋಗವಿಲ್ಲ ಮಾತುಬಲ್ಲವನಿಗೆ ಜಗಳವಿಲ್ಲ
3. ಕೋಪದಲ್ಲಿ ಕೋಯ್ದು ಮಾಗು ಮತ್ತೆ ಬಂದಿತೆ
4. ಸತ್ಯದಲ್ಲಿ ಸಾವಿಲ್ಲ, ಸುಳ್ಳಿಗೆ ಸುಖವಿಲ್ಲ
5. ಶಕ್ತಿಗಿಂತ ಯುಕ್ತಿ ಮೇಲು
6. ಮಾತೇ ಮುತ್ತು ಮಾತೇ ಮಾಲ್ಯ
7. ಬೆಕ್ಕಿಗೆ ಚೆಲ್ಲಾಟ ಇಲಿಗೆ ಪ್ರಾಣಸಂಕಟ
8. ಹೆತ್ತತಾಯಿ, ಹೊತ್ತನಾಡು ಸ್ವರ್ಗಕ್ಕಿಂತಲೂ ಮಿಗಿಲು

**ಎಂ. ಶಾಂತರಾಜು (ಮಾಯಾಸುತ), ಕನ್ನಡ ಭಾಷಾ ಶಿಕ್ಷಕರು, ಸರ್ಕಾರಿ ಪ್ರೌಢ ಶಾಲೆ, ಕೊಳ್ಳೇಗಾಲ ಟೌನ್.**

# ಪ್ರಬಂಧ

**ಪ್ರಬಂಧವು 3 ಹಂತಗಳಿಂದ ಕೂಡಿರುತ್ತದೆ.**

| | |
|---|---|
| **ಪೀಠಿಕೆ** | : 4–5 ಸಾಲು |
| **ವಿಷಯಬೆಳವಣಿಗೆ** | : 10–12 ಸಾಲು |
| **ಉಪಸಂಹಾರ/ಮುಕ್ತಾಯ** | : 4–5 ಸಾಲು |

## ಮಾದರಿ ಪ್ರಬಂಧ

## ಸ್ವಚ್ಛ ಭಾರತ ಅಭಿಯಾನ

**ಪೀಠಿಕೆ :** ಭಾರತವು ಸನಾತನ ಧರ್ಮದ ನೆಲೆವೀಡು, ಸಾಧುಸಂತರ, ಋಷಿಮುನಿಗಳ ತಪೋನಾಡು ಪವಿತ್ರ ನದಿಗಳ ಪುಣ್ಯದ ಬೀಡು ಎಂಬ ಅಭಿದಾನಕ್ಕೆ ಪಾತ್ರವಾಗಿದೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಇದೇ ದೇಶವು ವಿಶ್ವದ ಕೊಳಕು ರಾಷ್ಟ್ರಗಳ ಪಟ್ಟಿಯಲ್ಲಿ ಸೇರಿರುವುದು ವಿಪರ್ಯಾಸವೇ ಸರಿ. ದೇಶದ ಈ ಮಾಲಿನ್ಯವನ್ನು ಹೊಗಲಾಡಿಸಿ ಸ್ವಚ್ಛಗೊಳಿಸುವ ನಿಟ್ಟಿನಲ್ಲಿ ಸ್ವಚ್ಛಭಾರತ ಅಭಿಯಾನದ ಬಗ್ಗೆ ತಿಳಿಯೋಣ.

**ವಿಷಯ ವಿಶ್ಲೇಷಣೆ :** ಸ್ವಚ್ಛಭಾರತ ಅಭಿಯಾನವು ಪ್ರಸ್ತುತ ಪ್ರಧಾನಮಂತ್ರಿಗಳಾಗಿರುವ ಶ್ರೀ ನರೇಂದ್ರಮೋದಿಯವರ ಮಹತ್ವದ ಯೋಜನೆಗಳಲ್ಲೊಂದಾಗಿದೆ. 2014ರ ಗಾಂಧಿಜಯಂತಿಯಂದು ಮಾನ್ಯ ಪ್ರಧಾನಮಂತ್ರಗಳು ಈ ಯೋಜನೆಗೆ ಚಾಲನೆ ನೀಡಿದರು.

ನಮ್ಮ ಮನೆ, ಶಾಲೆ, ಆಸ್ಪತ್ರೆ, ಅಂಗಡಿ, ದೇವಾಲಯ, ರಸ್ತೆಗಳು, ಉದ್ಯಾನವನಗಳು ಹಾಗೂ ಸಾರ್ವಜನಿಕ ಸಂಚಾರಿ ವಾಹನಗಳಾದ ಬಸ್ಸು, ರೈಲುಗಳು, ನಿಲ್ದಾಣಗಳು ಮುಂತಾದ ಯಾವುದೇ ಸ್ಥಳವನ್ನು ಸ್ವಚ್ಛವಾಗಿಡುವುದೇ, ಮಾಲಿನ್ಯರಹಿತಗೊಳಿಸುವುದೇ ಸ್ವಚ್ಛಭಾರತ ಅಭಿಯಾನದ ಉದ್ದೇಶವಾಗಿದೆ.

ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ, ಗುಜರಾತಿನಿಂದ ಅಸ್ಸಾಂವರೆಗೆ ಹರಡಿದ ವಿಶಾಲವಾದ ಭರತ ಭೂಮಿಯಲ್ಲಿ. 128 ಕೋಟಿಗೂ ಮೀರಿ ಬೆಳೆಯುತ್ತಿರುವ ಈ ಉಪಖಂಡವನ್ನು ಸ್ವಚ್ಚವಾಗಿರಿಸುವುದು ಭಗೀರಥ ಪ್ರಯತ್ನವೇ ಸರಿ, ಆದರೆ ಭಾರತದ ಪ್ರತಿಯೊಬ್ಬ ನಾಗರೀಕನೂ ಸ್ವಚ್ಚತಾ ಕಾರ್ಯದಲ್ಲಿ ಪ್ರಾಮಾಣಿಕವಾಗಿ ತೊಡಗಿದರೆ "ಸ್ವಚ್ಚಭಾರತ" ಕನಸು ನನಸಾಗುವುದರಲ್ಲಿ ಯಾವ ಆಶ್ಚರ್ಯವೂ ಇಲ್ಲ.

ಆದ್ದರಿಂದ ವಿದ್ಯಾರ್ಥಿಗಳಾದ ನಾವು ಸ್ವತಃ ಸ್ವಚ್ಛತೆಯನ್ನು ಪಾಲಿಸುತ್ತಾ ನಮ್ಮ ಕುಟುಂಬದ ಸದಸ್ಯರಿಗೂ, ನೆರೆಹೊರೆಯವರಿಗೂ ಈ ಬಗ್ಗೆ ತಿಳಿವಳಿಕೆ ಹೇಳಿ ಜಾಗೃತಿ ಮೂಢಿಸಬೇಕು.

"ಅಟಜಚಿಟಟುಟಿಜ ್ಳ ಟಿಜಹೂ ಣಂ ಉಆಜಟುಟಿಜ" ಎಂಬಂತೆ ಸ್ವಚ್ಛತೆಯಿದ್ದರೆ ದೇವರುಗಳು ನೆಲಸುತ್ತಾರೆ. ಎಂಬುದು ನಾಣ್ನುಡಿ ಸ್ವಚ್ಛತೆಯಿದ್ದಲ್ಲಿ ಆರೋಗ್ಯ ವರ್ದಿಸುತ್ತದೆ. ಆರೋಗ್ಯವಿದ್ದಲ್ಲಿ ಸಂಪತ್ತು, ಸಮೃದ್ಧಿ, ಶಾಂತಿ, ನೆಮ್ಮದಿ ತಾನಾಗಿಲೇ ನೆಲೆಸುತ್ತದೆ.

ಸರ್ಕಾರಿ ವಲಯದಲ್ಲಾಗಲೀ, ಖಾಸಗೀ ವಲಯದಲ್ಲಾಗಲೀ ಅಲ್ಲಿನ ಅಧಿಕಾರಿಗಳು ಸ್ವಚ್ಛತೆಯನ್ನು ಕಾಪಾಡುವ ಉಸ್ತುವಾರಿ ವಹಿಸಿರುತ್ತಾರೆ. ಈ ಹಿನ್ನಲೆಯಲ್ಲಿ ಮೈಸೂರುನಗರವು "ಅಟಜಚಿಟಿಭಿಣಥಿ" "ಸ್ವಚ್ಛನಗರ" ಎಂಬ ಖ್ಯಾತಿಗೆ ಪಾತ್ರವಾಗಿರುವುದು ಮೈಸೂರಿಗರಿಗೆಲ್ಲಾ ಸಂತಸ ತಂದಿದೆ. ಅಂತೆಯೇ ಪ್ರತೀ ಗ್ರಾಮ, ತಾಲ್ಲೂಕು, ಜಿಲ್ಲೆ, ರಾಜ್ಯ ಸ್ವಚ್ಛಗೊಂಡರೆ ಸ್ವಚ್ಛ ಭಾರತ ಸಾಕಾರಗೊಳ್ಳುವುದು.

**ಎಂ. ಶಾಂತರಾಜು (ಮಾಯಾಸುತ), ಕನ್ನಡ ಭಾಷಾ ಶಿಕ್ಷಕರು, ಸರ್ಕಾರಿ ಪ್ರೌಢ ಶಾಲೆ, ಕೊಳ್ಳೇಗಾಲ ಟೌನ್.**

**ಉಪಸಂಹಾರ:** ಸ್ವಚ್ಛ ಭಾರತ ಅಭಿಯಾನವು ಕೇವಲ ಸರ್ಕಾರದ ಕಾರ್ಯಕ್ರಮದಲ್ಲ. ಅದು ಸಾರ್ವಜನಿಕರ ಕಾರ್ಯಕ್ರಮವಾಗಿದೆ. ಆದ್ದರಿಂದ ಸ್ನೇಹಿತರೆ, ನಾವೆಲ್ಲರೂ ಗಾಂಧಿಜಯಂತಿಯಂದು ಮಾತ್ರವಲ್ಲದೇ ಪ್ರತಿದಿನವೂ ಸ್ವಚ್ಛತೆಯನ್ನು ನಿರ್ವಹಿಸೋಣ, "ಸ್ವಚ್ಛಭಾರತ ನಮ್ಮ ಭಾರತ" ಎಂದು ಜಗತ್ತಿಗೆ ಸಾರೋಣ.

**ಪ್ರಬಂಧ ವಿಷಯಗಳು**

1. ಸಮೂಹ ಮಾಧ್ಯಮಗಳು
2. ಕಂಪ್ಯೂಟರ್‌ನ ಉಪಯೋಗ
3. ಜನಸಂಖ್ಯಾ ಸ್ಫೋಟದ ಪರಿಣಾಮಗಳು
4. ಕ್ಷೀರಭಾಗ್ಯ
5. ಅಕ್ಷರದಾಸೋಹ
6. ಹೆಣ್ಣುಮಕ್ಕಳ ಶಿಕ್ಷಣ
7. ಗ್ರಂಥಾಲಯದ ಉಪಯೋಗ
8. ಬಾಲಕಾರ್ಮಿಕ ಪದ್ಧತಿ

# ಪತ್ರ ಲೇಖನ

## ವ್ಯವಹಾರಿಕ ಪತ್ರದ ಮಾದರಿ

ಇಂದ

______________________

______________________

______________________

ರವರಿಗೆ

______________________

______________________

______________________

ಮಾನ್ಯರೇ,

ವಿಷಯ :– ________________________________________________

ಈ ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ________________________________________________________________

____________________

________________________________________________________

________________________________________________________

________________________________________________________

**ಎಂ. ಶಾಂತರಾಜು (ಮಾಯಾಸುತ), ಕನ್ನಡ ಭಾಷಾ ಶಿಕ್ಷಕರು, ಸರ್ಕಾರಿ ಪ್ರೌಢ ಶಾಲೆ, ಕೊಳ್ಳೇಗಾಲ ಟೌನ್.**

ವಂದನೆಗಳೊಂದಿಗೆ

ಸ್ಥಳ :

ಇಂತಿ ತಮ್ಮ ನಂಬುಗೆಯ

ದಿನಾಂಕ:

ನೀವು ಮೈಸೂರಿನ ಕುವೆಂಪುನಗರದ ಸರ್ಕಾರಿ ಪ್ರೌಢಶಾಲೆಯ 10ನೇ ತರಗರಿ ವಿದ್ಯಾರ್ಥಿ ಸುಮತಿ/ಸುಮಂತ್ ಎಂಬುದಾಗಿ ಭಾವಿಸಿ ನಿಮ್ಮ ಶಾಲೆಗೆ ಸುಸಜ್ಜಿತ ಗ್ರಂಥಾಲಯ ಒದಗಿಸುವಂತೆ ಕೋರಿ ನಿಮ್ಮ ಶಾಸಕರಿಗೆ ಪತ್ರವೊಂದನ್ನು ಬರೆಯಿರಿ

ಇಂದ,

ಸುಮತಿ/ಸುಮಂತ್
10ನೇ ತರಗತಿ
ಸರ್ಕಾರಿ ಪ್ರೌಢಶಾಲೆ
ಕುವೆಂಪುನಗರ ಮೈಸೂರು

ರವರಿಗೆ,

ಮಾನ್ಯಶಾಸಕರು
ಮೈಸೂರುಕ್ಷೇತ್ರ
ಕರ್ನಾಟಕ ಸರ್ಕಾರ

ಮಾನ್ಯರೇ

ವಿಷಯ :- ನಮ್ಮ ಶಾಲೆಗೆ ಸುಸಜ್ಜಿತವಾದ ಗ್ರಂಥಾಲಯ ಒದಗಿಸಿಕೊಡುವ ಬಗ್ಗೆ

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮಲ್ಲಿ ವಿನಂತಿಸಿ ಕೊಳ್ಳುವುದೇನೆಂದರೆ ನಮ್ಮ ಶಾಲೆಯಲ್ಲಿ ಗ್ರಂಥಾಲಯದ ವ್ಯವಸ್ಥೆ ಇರುವುದಿಲ್ಲ. ಇದರಿಂದ ವಿದ್ಯಾರ್ಥಿಗಳಾದ ನಮಗೆ ನಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ತುಂಬಾ ಕಷ್ಟಕರವಾಗಿದೆ. ಆದ್ದರಿಂದ ನಮ್ಮ ಶಾಲೆಗೆ ಸುಸಜ್ಜಿತವಾದ ಗ್ರಂಥಾಲಯವೊಂದನ್ನು ಒದಗಿಸಿಕೊಟ್ಟು ನಮ್ಮ ಜ್ಞಾನಾರ್ಜನೆ ಹೆಚ್ಚಿಸಲು ಸಹಕರಿಸಬೇಕೆಂದು ಕೋರುತ್ತೇನೆ.

**ವಂದನೆಗಳೊಂದಿಗೆ**

**ಸ್ಥಳ : ಮೈಸೂರು**
**ದಿನಾಂಕ: 5-1-2016**

**ಇಂತಿ ತಮ್ಮ ನಂಬುಗೆಯ**
ಸುಮತಿ/ಸುಮಂತ್